ಕರ್ನಾಟಕ ವಿಧಾನಸಭೆ
ಮಂಗಳವಾರ 28ನೇ ಮಾರ್ಚ್ 2006ರಂದು
ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 9 ಗಂಟೆ 31 ನಿಮಿಷಕ್ಕೆ ಸಮಾವೇಶಗೊಂಡಿತು.
ಅಧ್ಯಕ್ಷರು (ಶ್ರೀ ಕೃಷ್ಣರವರು)
ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

1. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಿದ ವಿಷಯ.

ವಿಷಯ: ಹಕ್ಕು ಚ್ಯುತಿ ನೋಟೀಸ್ ಬಗ್ಗೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ನಾನೊಂದು ಪ್ರಿವಿಲೆಜ್ ಮೋಷನ್ ಕೊಟ್ಟಿದ್ದೇನೆ.

ಅಧ್ಯಕ್ಷರು: ನಾಳೆ ತೆಗೆದುಕೊಳ್ಳುತ್ತೇನೆ ಬಿಡಿ. ಅವಕಾಶವಿದೆ.

2. ಸಭೆಯಮುದಿಡಲಾದ ಕಾಗದ ಪತ್ರಗಳು

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು): ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 151 (2)ನೇ ಅನುಚ್ಛೇದದ ಮೇರೆಗೆ 31ನೇ ಮಾರ್ಚ್, 2005ರಂದು ಕೊನೆಗೊಂಡ ವರ್ಷಕ್ಕೆ ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರ ಸಿವಿಲ್ ಹಾಗೂ ರಾಜಸ್ವ ಸ್ವೀಕೃತಿ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

3. ವಿತ್ತೀಯ ಕಾರ್ಯಕಲಾಪ

ಅ) 2005-06ನೇ ಸಾಲಿನ ಪೂರಕ ಅಂದಾಜುಗಳ (ಮೂರನೇ ಹಾಗೂ ಅಂತಿಮ ಕಂತು), ಚರ್ಚೆ ಹಾಗೂ ಉತ್ತರ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು): ಮಾನ್ಯ ಅಧ್ಯಕ್ಷರೆ, ನಾನು 2005-06ನೇ ಸಾಲಿನ ಪೂರಕ ಅಂದಾಜುಗಳ (ಮೂರನೇ ಕಂತು ಹಾಗೂ ಅಂತಿಮ ಕಂತು) ಅನ್ನು ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.

ಪೂರಕ ಅಂದಾಜುಗಳು 2005-2006
(ಮೂರನೆಯ ಕಂತು)
ಪ್ರಾರಂಭಿಕ ಟಿಪ್ಪಣಿ)

ವಿನಿಯೋಗ ಅಧಿನಿಯಮವು ನೀಡಿದ ಅಧಿಕಾರದ ಮೇರೆಗೆ ಪ್ರಸಕ್ತ ವರ್ಷಕ್ಕಾಗಿ ಒಂದು ವಿಶಿಷ್ಟ ಸೇವೆಗೆ ವೆಚ್ಚ ಮಾಡತಕ್ಕ ಮೊಬಲಗು ಆ ವರ್ಷದ ಉದ್ದೇಶಕ್ಕಾಗಿ ಸಾಕಾಗವಿದಿದ್ದರೆ ಅಥವಾ ಆ ವರ್ಷದ ವಾರ್ಷಿಕ ನಿರೂಪಣೆಯಲ್ಲಿ ಹೇಳಿರದ ಹೊಸಸೇವೆಗಾಗಿ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಪೂರಕ ಅಥವಾ ಹೆಚ್ಚಿನ ವೆಚ್ಚದ ಅವಶ್ಯಕತೆಯುಂಟಾಗಿದ್ದರೆ ಅಂದಾಜು ಮಾಡಿದ ವೆಚ್ಚದ ಮೊಬಲಗನ್ನು ತೋರಿಸುವ ಮತ್ತೊಂದು ವಿವರಣೆಯನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸಲು ಸಂವಿಧಾನದ 205(1)ಎ ನೆಯ ಅನುಚ್ಛೇದವು ಅವಕಾಶ ಕಲ್ಪಿಸಿದೆ.

2. ಸಂವಿಧಾನ ಸದರಿ ಉಪಬಂಧಕ್ಕನುಸಾರವಾಗಿ 169280.17 ಲಕ್ಷ ರೂಪಾಯಿಯ ಒಟ್ಟು ಮೊತ್ತದಷ್ಟು ಪೂರಕ ಅಂದಾಜುಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸಲಾಗಿದೆ. ಈ ಅಂದಾಜುಗಳು ವಿಧಾನಮಂಡಲದ ಮುಂದೆ 2006ರ ಫೆಬ್ರವರಿ ತಿಂಗಳಲ್ಲಿ ಮಂಡಿಸಲಾದ 2005-06ನೆಯ ಸಾಲಿನ ಪೂರಕ ಅಂದಾಜುಗಳ ಎರಡನೆಯ ಕಂತನ್ನು ಮಂಡಿಸಿದ ತರುವಾಯ ಸಾದಿಲ್ವಾರು ನಿಧಿಯಿಂದ ಮಂಜೂರಾದ ಮುಂಗಡಗಳಿಗೆ ಸಂಬಂಧಿಸಿವೆ.

3. ಸಾದಿಲ್ವಾರು ನಿಧಿಯಿಂದ ಮಂಜೂರಾದ ಮತ್ತು ಅದನ್ನು ಭರಿಸಲು ಪೂರಕ ಅಂದಾಜುಗಳಲ್ಲಿ ಸೇರಿಸಲಾದ ಮುಂಗಡವನ್ನು ತೋರಿಸುವ ವಿವರಣೆಯನ್ನು ಅನುಬಂಧದಲ್ಲಿ ತೋರಿಸಲಾಗಿದೆ.

4. ಪೂರಕ ಅಂದಾಜುಗಳಲ್ಲಿ ಒದಗಿಸಿರುವ 169280.17 ಲಕ್ಷ ರೂ.ಗಳಲ್ಲಿ 12135.65 ಲಕ್ಷ ರೂ.ಗಳು ಕೇಂದ್ರ ಸಹಾಯಕ್ಕೆ ಸಂಬಂಧಿಸಿದೆ, 3339.10 ಲಕ್ಷ ರೂ.ಗಳು ಜಮೆಗಳಿಗೆ ಮತ್ತು 13313.00 ಲಕ್ಷ.ರೂಗಳು ಲೆಕ್ಕ ಹೊಂದಾಣಿಕೆಗೆ ಸಂಬಂಧಿಸಿದೆ. ಸಾಮಾನ್ಯ ರಾಜಸ್ವದಿಂದ ಹೊರಹೋಗುವ ನಿವ್ವಳ ಮೊತ್ತ 140492.42 ಲಕ್ಷ ರೂಪಾಯಿ ಮಾತ್ರವಾಗಿದೆ.

ಪೂರಕ ಅಂದಾಜುಗಳು 2005-2006 (ಮೂರನೇ ಕಂತು)

1	2	3	4	5	6
				(ಲಕ್ಷರೂಗಳಲ್ಲಿ	
ಅಭಿಯಚನೆ ಸಂಖ್ಯೆ	ಸೇವೆ ಮತ್ತು ಉದ್ದೇಶ			ಮೊತ್ತ	
			ಪ್ರಭೃತ	ಪುರಸ್ಕೃತ	ಒಟ್ಟು
01	ಕೃಷಿ ಮತ್ತು ತೋಟಗಾರಿಕೆ	ರಾಜಸ್ವ	0.00	507.46	507.46
		ಬಂಡವಾಳ			
02	.ಪಶುಸಂಗೋಪನೆ ಮತ್ತು ಮೀನುಗಾರಿಕೆ	ರಾಜಸ್ವ	0.00	760.00	760.00
		ಬಂಡವಾಳ	0.00	1172.69	1172.69
03	ಆರ್ಥಿಕ	ರಾಜಸ್ವ	0.00	484.00	484.00

1	2	3	4	5	6
04	ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ	ರಾಜಸ್ವ	35.50	188.04	223.54
05	ಒಳಾಡಳಿತ ಮತ್ತು ಸಾರಿಗೆ	ರಾಜಸ್ವ	0.00	5568.00	5568.00
		ಬಂಡವಾಳ	0.00	11200.00	11200.00
06	ಮೂಲಭೂತ ಸೌಕರ್ಯ	ಬಂಡವಾಳ	0.00	2036.00	2036.00
07	ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತಿ ರಾಜ್	ರಾಜಸ್ವ	0.00	5320.48	5320.48
		ಬಂಡವಾಳ	0.00	1323.00	1323.00
08	ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ	ರಾಜಸ್ವ	2.16	2816.31	2818.47
		ಬಂಡವಾಳ	0.00	90.00	90.00
09	ಸಹಕಾರ	ರಾಜಸ್ವ	0.00	41693.75	41693.75
10	ಸಮಾಜ ಕಲ್ಯಾಣ	ರಾಜಸ್ವ	0.00	1261.58	1261.58
		ಬಂಡವಾಳ	0.00	10.00	10.00
11	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ	ರಾಜಸ್ವ	0.00	3467.29	3467.29
		ಬಂಡವಾಳ	0.00	0.00	0.00
12	ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳು	ರಾಜಸ್ವ	0.00	1145.02	1145.02
		ಬಂಡವಾಳ	0.00	1960.00	1960.00
13	ಆಹಾರ ಮತ್ತು ನಾಗರೀಕ ಸರಬರಾಜು	ರಾಜಸ್ವ	0.00	5467.50	5467.50
14	ಕಂದಾಯ	ರಾಜಸ್ವ	0.00	1879.88	1879.88
15	ಮಾಹಿತಿ ತಂತ್ರಜ್ಞಾನ	ರಾಜಸ್ವ	0.00	419.55	419.55
16	ವಸತಿ	ಬಂಡವಾಳ	0.00	5100.00	5100.00
17	ಶಿಕ್ಷಣ	ರಾಜಸ್ವ	0.00	2844.97	2844.97
18	ವಾಣಿಜ್ಯ ಮತ್ತು ಕೈಗಾರಿಕಾ	ರಾಜಸ್ವ	0.00	9511.39	9511.39
		ಬಂಡವಾಳ	0.00	5725.00	5725.00
19	ನಗರಾಭಿವೃದ್ಧಿ	ರಾಜಸ್ವ	0.00	86.10	86.10
20	ಲೋಕೋಪಯೋಗಿ	ಬಂಡವಾಳ	0.00	12661.56	12661.56
21	ಜಲಸಂಪನ್ಮೂಲ	ರಾಜಸ್ವ	0.00	418.79	418.79
		ಬಂಡವಾಳ	0.00	35576.10	35576.10

1	2	3	4	5	6
22	ಆರೋಗ್ಯ ಮತ್ತು ಕುಂಟುಂಬ ಕಲ್ಯಾಣ ಸೇವೆಗಳು	ರಾಜಸ್ವ	0.00	5211.00	5211.00
23	ಕಾರ್ಮಿಕ	ರಾಜಸ್ವ	15.40	0.00	15.40
24	ಇಂಧನ	ರಾಜಸ್ವ	0.00	1072.00	1072.00
		ಬಂಡವಾಳ	0.00	1638.00	1638.00
25	ಕನ್ನಡ ಮತ್ತು ಸಂಸ್ಕೃತಿ	ರಾಜಸ್ವ	0.00	35.15	35.15
26	ಯೋಜನೆ,ಸಾಂಖ್ಯಿಕ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ	ರಾಜಸ್ವ	0.00	11.25	11.25
27	ಕಾನೂನು	ರಾಜಸ್ವ	0.00	60.25	60.25
28	ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ	ರಾಜಸ್ವ	0.00	5.00	5.00
	ಜುಮ್ಲಾ	ರಾಜಸ್ವ	53.06	90647.45	90700.51
		ಬಂಡವಾಳ	0.00	78579.66	78579.66
		ಒಟ್ಟು ಜುಮ್ಲಾ	53.06	169227.11	169280.17

ಶ್ರೀ ಬಿ.ಎಸ್. ಯಡಿಯೂರಪ್ಪ : ಸನ್ಮಾನ್ಯ ಅಧ್ಯಕ್ಷರೆ, ಈ ಮೂರನೇ ಹಾಗೂ ಅಂತಿಮ ಕಂತಿನ ಪೂರಕ ಅಂದಾಜುಗಳನ್ನು ಈಗಾಗಲೇ ಮಂಡನೆ ಮಾಡಲಾಗಿದೆ. ಒಟ್ಟು 1692.80 ಕೋಟಿ ರೂಪಾಯಿಗಳ ಪೂರಕ ಅಂದಾಜುಗಳನ್ನು ರಾಜ್ಯ ವಿಧಾನ ಮಂಡಲ ಮುಂದೆ ಮಂಡಿಸಲಾಗುತ್ತಿದೆ. ಅದರಲ್ಲಿ 1692.80 ಕೋಟಿ ರೂಪಾಯಿಗಳಲ್ಲಿ 121.35 ಕೋಟಿ ರೂಪಾಯಿಗಳಷ್ಟು ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬರುತ್ತಿದೆ. ಪೂರಕ ಅಂದಾಜುಗಳಲ್ಲಿ ಕೋರಲಾಗಿರುವ ಪ್ರಸ್ತಾವನೆಗಳಲ್ಲಿ ಕೆಲವು ಮುಖ್ಯವಾದ ಪ್ರಸ್ತಾವನೆಗಳು ಈ ಕೆಳಕಂಡಂತಿದೆ :

ಈಗಾಗಲೇ ಬಹಳ ಪ್ರಮುಖವಾಗಿರುವಂಥದ್ದು, ನಾನು ಆಯವ್ಯಯ ಮಂಡಿಸುವ ಸಮಯದಲ್ಲಿ ಸಹಕಾರಿ ಸಾಲಗಳ ಮೇಲಿನ ಬಡ್ಡಿ ಮನ್ನಾ ಯೋಜನೆ ಸಲುವಾಗಿ 400 ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ 2005–06ನೇ ಸಾಲಿನಲ್ಲಿ ಬಿಡುಗಡೆ ಮಾಡುತ್ತೇನೆಂದು ತಿಳಿಸಿದ್ದೆ. ಈ ಸಲುವಾಗಿ ಹೆಚ್ಚುವರಿಯಾಗಿ ಬೇಕಾದ 400 ಕೋಟಿ ರೂಪಾಯಿಗಳನ್ನು ಈ ಅಭಿಯಾಚನೆಯಲ್ಲಿ ಸೇರಿಸಿ ಮಂಡಿಸುತ್ತಿದ್ದೇನೆ. ಇದಲ್ಲದೆ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯವರಿಗೆ ಆವರ್ತನಿಧಿಯಾಗಿ 10.7 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವ ಪ್ರಸ್ತಾವನೆ ಕೂಡ ಇಲ್ಲಿ ನಾನು ಮಂಡಿಸುತ್ತಿದ್ದೇನೆ. ಅಭಿಯಾಚನೆ ಸಂ(1)ರಲ್ಲಿ ಕೃಷಿ ಮತ್ತು ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ ಬಿಜಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲಿನ ಹನಿ ನೀರಾವರಿ ಯೋಜನೆಗಳಿಗೆ 3.38 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗುತ್ತಿದೆ. ಇದಲ್ಲದೆ, ಕೇಂದ್ರ ಸರ್ಕಾರ ರೈತ ಸಂಪರ್ಕ ಕೇಂದ್ರಗಳ ನಿರ್ಮಾಣಕ್ಕಾಗಿ 2.28 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದು, ಇದರಲ್ಲಿ ರಾಜ್ಯ ಸರ್ಕಾರ ಸಹ ತನ್ನ ಪಾಲಾದ 5 ಕೋಟಿ 32 ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿದೆ.

ಈ ಎರಡನ್ನೂ ಸೇರಿಸಿ ಒಟ್ಟು 7.60 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವಂಥ ಪ್ರಸ್ತಾವನೆಯನ್ನು ನಾನು ಮಂಡಿಸುತ್ತಿದ್ದೇನೆ. ಅಭಿಯಾಚನೆ ಸಂ(2) ರಲ್ಲಿ ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯ ಕಾರ್ಯಗಳಿಗೆ ಸಂಬಂಧಿಸಿದಂತೆ ಅನೇಕ ಕೇಂದ್ರ ಪುರಸ್ಕೃತ ಯೋಜನೆಯಡಿ ಬಂದಿರುವ ಹಣವನ್ನು ಬಿಡುಗಡೆ ಮಾಡಲಾಗುತ್ತಿದೆ. ಅಭಿಯಾಚನೆ ಸಂ(5)ರಲ್ಲಿ ಕಂಡುಬರುವಂತೆ ಗೃಹ ಮತ್ತು ಸಾರಿಗೆ ಇಲಾಖೆಗೆ ಸಂಬಂಧಿಸಿದಂತೆ, ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಸಂಸ್ಥೆಗಳು ವಿದ್ಯಾರ್ಥಿಗಳಿಗೇನು ಬಸ್ ಪಾಸ್ ನಿಡುತ್ತಿದ್ದಾರೆ, ಅದಕ್ಕೆ ಸರ್ಕಾರದಿಂದ ಸಹಾಯ ಧನ ನಿಡಬೇಕಾಗುತ್ತದೆ. ಈ ಸಂಸ್ಥೆಗೆ ಸಹಾಯ ಧನ ಮೊತ್ತವಾದ 46 ಕೋಟಿ 31 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುವ ಪ್ರಸ್ತಾವನೆಯನ್ನು ಹಾಗೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣಗಳನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ ಹಾಗೂ ಹೊಸ ಬಸ್‌ಗಳನ್ನು ಅಳವಡಿಸಲು ಮೂಲಭೂತ ಸೌಕರ್ಯ ಅಭಿವೃದ್ಧಿ ದೃಷ್ಟಿಯಿಂದ 67 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವ ಪ್ರಸ್ತಾವನೆಯನ್ನು ನಾನು ಸದನದ ಮುಂದೆ ಮಾಡುತ್ತಿದ್ದೇನೆ. ಬಹಳ ಪ್ರಮುಖವಾಗಿ ಮೊದಲ ಬಾರಿಗೆ ಹತ್ತಾರು ವರ್ಷಗಳಿಂದ ಏನು ಡಿಮಾಂಡ್ ಇತ್ತು ಆ ಪೊಲೀಸ್ ಸಿಬ್ಬಂದಿಗಳಿಗೆ ಅನುಕೂಲತೆಗಳೇನೂ ಆಗುತ್ತಿಲ್ಲವೆಂದು ಏನಿತ್ತು, ಅದಕ್ಕೆ ಸಂಬಂಧಪಟ್ಟಂತೆ ಮೊದಲ ಬಾರಿಗೆ ಪೊಲೀಸ್ ಹೌಸಿಂಗ್ ಕಾರ್ಪೋರೇಷನ್‌ಗೆ ಪೊಲೀಸ್ ಕ್ವಾರ್ಟರ್ಸ್‌ಗಳನ್ನು ಕಟ್ಟುವುದಕ್ಕೋಸ್ಕರ 45 ಕೋಟಿ ರೂಪಾಯಿಗಳನ್ನು ನೀಡುವಂಥ ಪ್ರಸ್ತಾವನೆ ಸಹ ಇಲ್ಲಿ ನಾನು ಮಂಡಿಸುತ್ತಿದ್ದೇನೆ. ಬಹುಶ: ವಾಟಾಳ್ ನಾಗರಾಜ್‌ರವರು ಇದ್ದಿದ್ದರೆ ಅವರಿಗೆ ಬಹಳ ಸಂತೋಷವಾಗುತ್ತಿತ್ತೆಂದು ನಾನು ಅಂದುಕೊಂಡಿದ್ದೇನೆ. ಮಾನ್ಯ ಶ್ರೀರಾಮರೆಡ್ಡಿಯವರಿಗೂ ಸಮಾಧಾನವಿದೆ. ಅಭಿಯಾಚನೆ ಸಂ:6ರಲ್ಲಿ ಕಂಡು ಬರುವಂತೆ ಸೊಲ್ಲಾಪುರ-ಗದಗ್ ಗೇಜ್ ಯೋಜನೆಗೆ ಒದಗಿಸಿದ ಅನುದಾನ ಕಡಿಮೆ ಎಂದು ಹೇಳಿದ್ದರಿಂದ 20 ಕೋಟಿ 36 ಲಕ್ಷ ರೂಪಾಯಿಗಳನ್ನು ಮೂಲಭೂತ ಸೌಕರ್ಯ ಅಭಿವೃದ್ಧಿಗಾಗಿ ಈ ನಿಧಿಯಿಂದ ಬಿಡುಗಡೆ ಮಾಡುವಂಥ ಪ್ರಸ್ತಾವನೆಯನ್ನು ನಾನು ಮಂಡಿಸಿದ್ದೇನೆ. ಅಭಿಯಾಚನೆ ಸಂ:7ರಲ್ಲಿ ಸಂಪೂರ್ಣ ಗ್ರಾಮೀಣ ನೈರ್ಮಲ್ಯ ಆಂದೋಲನದ ಕಾರ್ಯಕ್ರಮದಡಿಯಲ್ಲಿ ಮಿನಿ ವಾಟರ್ ಸಪ್ಲೈ ಮತ್ತು ಪೈಪ್ ವಾಟರ್ ಸಪ್ಲೈ ನಿರ್ವಹಣೆಗಾಗಿ ಕೇಂದ್ರ ಸರ್ಕಾರ 11 ಕೋಟಿ 19 ಲಕ್ಷ ರೂಪಾಯಿಗಳನ್ನು ಒದಗಿಸಿತ್ತು. ಇದನ್ನು ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡುವ ಸಲುವಾಗಿ ಪ್ರಸ್ತಾವನೆ ಮಂಡಿಸಿದ್ದೇನೆ. ಇದರಲ್ಲಿ ಎಂಎನ್‌ಪಿ ಯೋಜನೆಯಡಿಯಲ್ಲಿ ಹೆಚ್ಚುವರಿಯಾಗಿ 13 ಕೋಟಿ 23 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುವ ಪ್ರಸ್ತಾವನೆಯನ್ನು ಸಹ ನಾನು ಇದರ ಜೊತೆ ಮಂಡಿಸುತ್ತಿದ್ದೇನೆ. ಅಭಿಯಾಚನೆ ಸಂ:10ರಲ್ಲಿ ಕಂಡು ಬರುವಂತೆ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಇಡಲು ಕೇಂದ್ರ ಸರ್ಕಾರ 6 ಕೋಟಿ 86 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಈ ಹಣವನ್ನು ಪುನ: ಸಮಾಜ ಕಲ್ಯಾಣ ಇಲಾಖೆಗೆ ಬಿಡುಗಡೆ ಮಾಡಲು ಅಭಿಯಾಚನೆಯಲ್ಲಿ ಪ್ರಸ್ತಾಪಿಸಿದ್ದೇನೆ. ಅಂತೆಯೇ, ಪರಿಶಿಷ್ಟ ಜಾತಿ ಹಿಂದುಳಿದ ವರ್ಗಗಳ ಮೊರಾರ್ಜಿ ದೇಸಾಯಿ ಶಾಲೆಗಳ ನಿರ್ವಹಣೆಗೆ ಸಂಬಂಧಿಸಿದಂತೆ ಈ ಹಿಂದೆ ನೀಡಿದ ಅನುದಾನ ಕಡಿಮೆ ಇರುವ ಕಾರಣಕ್ಕೋಸ್ಕರ ಒಂದು ಕೋಟಿ 70 ಲಕ್ಷ ರೂಪಾಯಿಗಳನ್ನು ಮತ್ತೆ ಬಿಡುಗಡೆ ಮಾಡುವಂಥ ಪ್ರಸ್ತಾವನೆಯನ್ನು ನಾನು ಮಂಡಿಸಿದ್ದೇನೆ. ಅಭಿಯಾಚನೆ ಸಂ: (11)ರಲ್ಲಿ ಕಂಡು ಬರುವಂತೆ ಐಸಿಡಿಎಸ್ ಯೋಜನೆಯಡಿ ಕೇಂದ್ರ ಸರ್ಕಾರ 30 ಕೋಟಿ 58 ಲಕ್ಷ

ರೂಪಾಯಿಗಳನ್ನು ನೀಡಿದ್ದು, ಈ ಹಣವನ್ನು ಬಿಡುಗಡೆ ಮಾಡುವ ಪ್ರಸ್ತಾವನೆಯನ್ನು ನಾನು ಮಂಡಿಸಿದ್ದೇನೆ. ಅಭಿಯಾಚನೆ ಸಂ : 12ರಲ್ಲಿ ಕಂಡು ಬರುವಂತೆ ಗಾಲಿಯ ಮೇಲೆ ಅರಮನೆ ಯೋಜನೆ ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಇದಕ್ಕಾಗಿ ರಾಜ್ಯ ಸರ್ಕಾರ ಸಹ ತನ್ನ ಪಾಲು 9 ಕೋಟಿ 13 ಲಕ್ಷ ರೂಪಾಯಿಗಳನ್ನು ನೀಡಬೇಕಾಗಿದೆ. ಈ ಹಣವನ್ನು ಬಿಡುಗಡೆ ಮಾಡುವ ಪ್ರಸ್ತಾವನೆಯನ್ನು ಸಹ ನಾನು ಮಂಡನೆ ಮಾಡಿದ್ದೇನೆ. ಇದಲ್ಲದೆ, ಕೇಂದ್ರ ಸರ್ಕಾರ ಕ್ರೀಡಾಂಗಣಗಳ ನಿರ್ಮಾಣಕ್ಕಾಗಿ ಹೆಚ್ಚುವರಿಯಾಗಿ 4 ಕೋಟಿ 11 ಲಕ್ಷ ರೂಪಾಯಿಗಳ ಅನುದಾನ ನೀಡಿದೆ. ಇದಕ್ಕೆ ರಾಜ್ಯ ಸರ್ಕಾರ ಸಹ 9 ಕೋಟಿ 59 ಲಕ್ಷ ರೂಪಾಯಿಗಳನ್ನು ನೀಡಬೇಕಾಗುತ್ತದೆ. ಒಟ್ಟು 13 ಕೋಟಿ 70 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುವ ಪ್ರಸ್ತಾವನೆಯನ್ನು ನಾನು ಮಂಡಿಸಿದ್ದೇನೆ. ಅಭಿಯಾಚನೆ ಸಂ: (13) ರಲ್ಲಿ ಕಂಡು ಬರುವಂತೆ ಆಹಾರ ಸಹಾಯ ಧನ ಮತ್ತು ಸಾಗಾಣಿಕೆ ವೆಚ್ಚಕ್ಕಾಗಿ 50 ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ನೀಡಬೇಕಾಗಿದ್ದು, ಈ ಪ್ರಸ್ತಾವನೆಯನ್ನು ಸಹ ನಾನು ಮಂಡನೆ ಮಾಡಿದ್ದೇನೆ. ಅಭಿಯಾಚನೆ ಸಂ: 14ರಲ್ಲಿ ಶ್ರವಣಬೆಳಗೊಳದಲ್ಲಿ ನಡೆದಂಥ ಮಹಾಮಸ್ತಕಾಭಿಷೇಕಕ್ಕಾಗಿ 15 ಕೋಟಿ ರೂಪಾಯಿಗಳನ್ನು ನೀಡಿರುವ ಪ್ರಸ್ತಾವನೆಯನ್ನು ಸಹ ಮಂಡಿಸಿದ್ದೇನೆ.ಅಭಿಯಾಚನೆ ಸಂ: 16ರಲ್ಲಿ ಕಂಡು ಬರುವಂತೆ 2005–06ನೇ ಸಾಲಿನಲ್ಲಿ ವಸತಿ ಯೋಜನೆಗೆ ರಾಜ್ಯ ಸರ್ಕಾರ ಅನುದಾನ ನೀಡಬೇಕಾಗಿದ್ದು, ಈ ಕಾರ್ಯಕ್ಕಾಗಿ 51 ಕೋಟಿ ರೂಪಾಯಿಗಳನ್ನು ನೀಡುವ ಪ್ರಸ್ತಾವನೆಯನ್ನು ನಾನಿಲ್ಲಿ ಪ್ರಸ್ತಾಪ ಮಾಡಿದ್ದೇನೆ. ಅಭಿಯಾಚನೆ ಸಂ:17ರಲ್ಲಿ ಕಂಡು ಬರುವಂತೆ ಟೆಕ್ಸಿಪ್ ಎನ್ನುವ ವಿಶೇಷ ನೆರವಿನ ಯೋಜನೆಯಲ್ಲಿ ಅನುಷ್ಠಾನಗೊಳಿಸುವ ಈ ಯೋಜನೆಗೆ ಹೆಚ್ಚುವರಿಯಾಗಿ 20 ಕೋಟಿ ರೂಪಾಯಿಗಳ ಅನುದಾನದ ಪ್ರಸ್ತಾವನೆಯನ್ನು ನಾನೀಗ ಮಂಡಿಸಿದ್ದೇನೆ. ಅಭಿಯಾಚನೆ ಸಂ : 18ರಲ್ಲಿ ಕಂಡು ಬರುವಂತೆ ಈಗಾಗಲೇ ಬಂಡವಾಳ ಸಹಾಯ ಧನ ನೀಡುವ ಬಗ್ಗೆ ಪ್ರಸ್ತಾಪಿಸಿದ್ದು ಲಭ್ಯವಿರುವ ಆಯವ್ಯಯದಲ್ಲಿ ಕೊರತೆ ಇರುವುದರಿಂದ 6080 ಕೋಟಿ 10 ಲಕ್ಷ ರೂಪಾಯಿಗಳನ್ನು ಹೆಚ್ಚುವರಿಯಾಗಿ ನೀಡುವ ಪ್ರಸ್ತಾವನೆಯನ್ನು ನಾನು ಮಂಡಿಸಿದ್ದೇನೆ. ಅಭಿಯೋಚನೆ ಸಂ :20ರಲ್ಲಿ ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದಂತೆ, 10 ಮಿನಿ ವಿಧಾನಸೌಧ ನಿರ್ಮಾಣಕ್ಕಾಗಿ 20 ಕೋಟಿರೂ, ಅದಲ್ಲದೆ, ಕರ್ನಾಟಕ ಹೆದ್ದಾರಿ ಅಭಿವೃದ್ಧಿ ಯೋಜನೆಯಲ್ಲಿ ರಸ್ತೆಗಳ ಪುನರ್ ವಸತಿ ಮಾಡುತ್ತಿದ್ದು, ಹಲವು ರಸ್ತೆಗಳನ್ನು ಮೇಲ್ದರ್ಜೆಗೇರಿಸಬೇಕಾಗಿರುತ್ತದೆ. ಇದು ವಿಶೇಷ ನೆರವಿನ ಯೋಜನೆಯಾಗಿದ್ದು, ತ್ವರಿತವಾಗಿ ಹಣವನ್ನು ಉಪಯೋಗಿಸಿಕೊಳ್ಳುವ ಅಗತ್ಯವಿದೆ. 2005–06ನೇ ಸಾಲಿನಲ್ಲಿ ಈ ಯೋಜನೆಗೆ ತ್ವರಿತಗತಿಯಿಂದ ಸಾಗುತ್ತಿದ್ದು, ಹೆಚ್ಚುವರಿಯಾಗಿ ಅನುದಾನ ಬೇಕಾಗಿರುವುದರಿಂದ, 54 ಕೋಟಿ ರೂಪಾಯಿಗಳನ್ನು ಹೆಚ್ಚುವರಿಯಾಗಿ ನೀಡಲು ಪ್ರಸ್ತಾವನೆ ಮಂಡಿಸುತ್ತಿದ್ದೇನೆ. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮಕ್ಕೆ ಈ ಹಿಂದೆ ಸರ್ಕಾರದ ಖಾತರಿ ಮುಖಾಂತರ ಬಂಡವಾಳ 45 ಕೋಟಿ 19 ಲಕ್ಷ ರೂಪಾಯಿ ನೀಡಲು ತೀರ್ಮಾನಿಸಿತ್ತು. ಈ ಸಂಸ್ಥೆಗೆ ಬ್ಯಾಂಕಿನ ಮೂಲಕ ಪಡೆಯಲು ಅವಕಾಶ ಕಡಿಮೆ ಇರುವುದರಿಂದ ಆಯವ್ಯಯದ ಮುಖೇನವೇ ನಾವು 45 ಕೋಟಿ 19 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಅಭಿಯಾಚನೆ ಸಂ : 21ರಲ್ಲಿ ಜಲಸಂಪನ್ಮೂಲ ಇಲಾಖೆಗೆ ಸಂಬಂಧಿಸಿದಂತೆ ಕರ್ನಾಟಕ ನೀರಾವರಿ ನಿಗಮಕ್ಕೆ ಆಯವ್ಯಯದಲ್ಲಿ ಒದಗಿಸಿದ ಸಾಕಾಗದೇ ಇರುವುದರಿಂದ 92 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲು ಪ್ರಸ್ತಾಪಿಸಿದ್ದೇನೆ. ಕೇಂದ್ರ ಸರ್ಕಾರದಿಂದ 27 ಕೋಟಿ 60 ಲಕ್ಷ ರೂಪಾಯಿ,

ಅದಲ್ಲದೆ ಕೆಬಿಜೆಎನ್‌ಎಲ್ ಮತ್ತು ಸಿಎನ್‌ಎನ್‌ಎಲ್ ಸಂಸ್ಥೆಗಳಿಗೆ ಈ ಹಿಂದೆ ನೀಡಲಾಗಿದ್ದ ಸರ್ಕಾರದ ಖಾತರಿಗೆ ಬದಲಾಗಿ ಬಂಡವಾಳ ವೆಚ್ಚದಲ್ಲಿ 225 ಕೋಟಿ ರೂಪಾಯಿಗಳನ್ನು ನೀಡುವ ಪ್ರಸ್ತಾವನೆಯನ್ನು ಮಂಡಿಸಲಾಗಿದೆ. ಇದರಲ್ಲಿ ಬಾಗಲಕೋಟೆ ಪ್ಯಾಕೇಜ್ ಅನ್ನು ಸಹ ಅನುಷ್ಠಾನಗೊಳಿಸುವುದಕ್ಕೋಸ್ಕರ 25 ಕೋಟಿ ರೂಪಾಯಿಗಳನ್ನು ನಾನು ತೆಗೆದಿಟ್ಟಿದ್ದೇನೆ. ಯೋಜನಾ ಆಯೋಗವು ನೀರಾವರಿ ಯೋಜನಾ ಪ್ರದೇಶದಲ್ಲಿ ಆಯಕಟ್ಟಿನ ಬೆಳೆಸುವ ನಿರ್ಮಾಣ ಸಲುವಾಗಿ ಕೇಂದ್ರ ಸರ್ಕಾರದ ಧನ ಸಹಾಯ 8.49 ಕೋಟಿ ರೂಪಾಯಿಗಳನ್ನು ನೀಡಿದೆ. ಇದರಲ್ಲಿ ರಾಜ್ಯ ಸರ್ಕಾರ ತನ್ನ ಪಾಲನ್ನೂ ಸಹ ನೀಡಬೇಕಾಗಿದೆ. ಅದು 19 ಕೋಟಿ 81 ಲಕ್ಷ ರೂಪಾಯಿಗಳಾಗಿದೆ. ಅದನ್ನು ಬಿಡುಗಡೆ ಮಾಡುವಂಥ ಪ್ರಸ್ತಾವನೆಯನ್ನೂ ಸಹ ನಾನಿಲ್ಲಿ ಪ್ರಸ್ತಾಪ ಮಾಡಿದ್ದೇನೆ. ಹೀಗೆ ಈ 1692.80 ಕೋಟಿ ರೂಪಾಯಿಗಳ ಪೂರಕ ಅಂದಾಜುಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸುತ್ತಿದ್ದೇನೆ. ನಾನು ಕೆಲವು ಸಂಗತಿಗಳನ್ನು ಸದನದ ಗಮನಕ್ಕೆ ತರುವಂಥ ಪ್ರಯತ್ನವನ್ನು ಮಾಡಿದ್ದೇನೆ ಆದ್ದರಿಂದ ದಯಮಾಡಿ ತಾವು ಇದಕ್ಕೆ ಅನುಮೋದನೆ ನಿಡಬೇಕು ಎಂದು ವಿನಂತಿ ಮಾಡುತ್ತೇನೆ.

ಶ್ರೀ ಎನ್.ಧರ್ಮಸಿಂಗ್(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಪೂರಕ ಅಂದಾಜುಗಳ ಬಗ್ಗೆ ರಾಜ್ಯದ ಉಪ ಮುಖ್ಯಮಂತ್ರಿಗಳು ಮತ್ತು ಹಣಕಾಸಿನ ಖಾತೆಯನ್ನು ವಹಿಸಿಕೊಂಡಿರುವ ಮಾನ್ಯ ಯಡಿಯೂರಪ್ಪನವರು ಮಂಡಿಸಿದ್ದಾರೆ. ಪೂರಕ ಅಂದಾಜುಗಳು ಇದೇನೂ ಹೊಸದಾಗಿ ಅಲ್ಲ. ಯಾವಾಗಲೂ ಕೂಡ ಸರ್ಕಾರ ನಡೆಸತಕ್ಕಂಥ ಕಾಲದಲ್ಲಿ ಬಡ್ಜೆಟ್‌ನಲ್ಲಿ ಮಂಡನೆ ಮಾಡಿ ಬಡ್ಜೆಟ್‌ನಲ್ಲಿ ಯಾವ್ಯಾವ ವಿಚಾರಗಳನ್ನು ಶಾಸಕರು ಪ್ರಸ್ತಾಪ ಮಾಡುತ್ತಾರೆ, ಅದರಲ್ಲಿ ನೀವು ಹೊಸದಾಗಿ ಒಂದು ಹಣವನ್ನು ಒದಗಿಸಿಕೊಡಬೇಕೆಂಬುವ ಒಂದು ರೀತಿಯಲ್ಲಿ ಇವತ್ತು ಮಂಡನೆ ಮಾಡುತ್ತಿದ್ದೀರಿ. ಸಂವಿಧಾನದ 205ರ ಪ್ರಕಾರ ಪ್ರತಿಯೊಂದು ಸರ್ಕಾರದಲ್ಲಿ ಈ ತರಹದ ಪೂರಕ ಅಂದಾಜುಗಳ ಮಂಡನೆಯಾಗುತ್ತಿದೆ. ಮತ್ತು ಅದಕ್ಕೆ ತಕರಾರು ಇಲ್ಲ. ನಿನ್ನೆ ಕೂಡ ತಮ್ಮ ಅಧ್ಯಕ್ಷತೆಯಲ್ಲಿ ಬಿಜಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಕುಳಿತು ಅದರ ಬಗ್ಗೆ ಚರ್ಚೆ ಮಾಡಿ ಪುನ: ಆ ಸದನಕ್ಕೆ ಹೋಗಬೇಕಾಗುತ್ತದೆಂದು ಹೇಳಿದ್ದಕ್ಕೆ ಅದನ್ನು ಒಪ್ಪಿಕೊಂಡು ಅವರು ತಂದಿದ್ದಾರೆ. ಇವತ್ತು ಮಾನ್ಯ ಯಡಿಯೂರಪ್ಪನವರು ಏನು ತಂದಿದ್ದಾರೆ, ಅದರ ಮೊತ್ತ 1692 ಕೋಟಿ 80 ಲಕ್ಷ ನಾನು ವಿವರವನ್ನು ನೋಡಿದ್ದೇನೆ. ಕೇಂದ್ರದ ಸಹಾಯಕ್ಕೆ ಸಂಬಂಧಿಸಿದಂತ 121 ಕೋಟಿ ರೂ ಕೊಡತಕ್ಕಂಥ ರೀತಿಯಲ್ಲಿ ಅದಕ್ಕೆ ಮ್ಯಾಚಿಂಗ್ ಗ್ರಾಂಟ್ ಕೂಡ ಸರ್ಕಾರ ಕೊಡಬೇಕಾಗಿದೆ, ಅದಕ್ಕೆ ಅಭ್ಯಂತರವಿಲ್ಲ. ಈಗಾಗಲೇ ಅವರು ಬಹಳಷ್ಟು ವಿವರವಾಗಿ ಹೇಳಿದ್ದಾರೆ ನಾನು ಆ ವಿವರಕ್ಕೆ ಹೋಗುತ್ತಿಲ್ಲ. ಯಾವುದಾದರೂ ಬಜೆಟ್ ತಯಾರು ಮಾಡತಕ್ಕಂಥ ಕಾಲದಲ್ಲಿ ನಾನು ಕೂಡ ಮುಖ್ಯಮಂತ್ರಿಯಾಗಿದ್ದಾಗ ಚರ್ಚೆ ಮಾಡತಕ್ಕಂಥ ಕಾಲದಲ್ಲಿ ಅಧಿಕಾರಿಗಳಿಗೆ ಹೇಳಿದ್ದೆ. ಇವತ್ತು ರಾಜ್ಯದ ಸಮಸ್ಯೆಗಳು ಏನಿವೆ? ಯಾವ ಸೆಕ್ಟಾರ್‌ಗೆ ಹೆಚ್ಚಿನ ಅದ್ಯತೆ ಕೊಡಬೇಕಾಗಿದೆ ಎನ್ನತಕ್ಕಂಥದ್ದರ ಬಗ್ಗೆ ನಾವು ಮೊದಲ ಆದ್ಯತೆಯನ್ನು ಕೊಡಬೇಕಾಗಿದೆ. ಇವತ್ತು ಉದಾಹರಣೆಗೆ ಈ ಸಹಕಾರಿ ಇಲಾಖೆಯಲ್ಲಿ ಬಾಕಿ ಉಳಿದಿರುವ 36 ಕೋಟಿ 75 ಲಕ್ಷ, ರೂ ಇದರ ಬಗ್ಗೆ ಪುಟ – 35 ರಲ್ಲಿ ಇದೆ. ಇದೇನು they have not anticipated ? ಸಹಕಾರ ಇಲಾಖೆದ್ದು ಇಷ್ಟು ಬಾಕಿ ಬಾಡಿಗೆಯನ್ನು ತೆಗೆದುಕೊಂಡಿದ್ದೇವೆಂದು ಹೇಳಿದಿರಿ. ಅದನ್ನು ಕೊಡಲೇಬೇಕಾಗುತ್ತದೆ, ಹೊಸದಾಗಿ ಏನೂ ಇಲ್ಲ. ಅದು ಮಾಡಲೇಬೇಕು. ಮತ್ತು ಎಸ್‌ಸಿ– ಎಸ್‌ಟಿ ಪೋಸ್ಟ್ ಮೆಟ್ರಿಕ್ ಪರಿಹಾರ 686

ಕೋಟಿ ರೂ ಇದನ್ನು ನಾನು ಒಪ್ಪುತ್ತೇನೆ–ಇದು ಒಳ್ಳೆಯ ಕೆಲಸ ಇವತ್ತು ರಾಜ್ಯದಲ್ಲಿರತಕ್ಕಂಥ ಪರಿಶಿಷ್ಟಜಾತಿ ಪರಿಶಿಷ್ಟ ಪಂಗಡದವರಿಗೆ ಇವತ್ತು ಸ್ಕಾಲರ್‌ಷಿಪ್ ಕೊಡತಕ್ಕಂಥದ್ದು ನಾವು ನಮ್ಮ ಬಜೆಟ್ ಮಾಡತಕ್ಕಂಥ ಕಾಲದಲ್ಲಿ ರಾಜ್ಯದಲ್ಲಿ ಇರತಕ್ಕಂಥ ಹರಿಜನ–ಗಿರಿಜನರಿಗೆ ಏನು ಅವರಿಗೆ ಹೆಚ್ಚಿನ ಸಹಾಯ ಮಾಡಬೇಕಾಗಿದೆ, ಇವತ್ತು ಅದರಲ್ಲಿ ಇದ್ದೇ ಇದೆ. ಹೊಸದಾಗಿ ನ್ಯೂ ಸರ್ವೀಸ್‌ನಲ್ಲಿ ಇದು ಬರುವುದಿಲ್ಲ. ಎರಡನೇಯದಾಗಿ ರೈತರಿಗೆ ಕೃಷಿ ಸಾಲಸ ಬಡ್ಡಿ ಮನ್ನಾ, ತಾವು ಏನು ದೀರ್ಘಕಾಲ ಸದನಲ್ಲಿದ್ದೀರಿ ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದೀರಿ ಯಾವಾಗಲೂ ಕೂಡ ರೈತರ ಬಗ್ಗೆ ಹೇಳಿಕೆ ಕೊಡತಕ್ಕಂಥ ರೀತಿಯಲ್ಲಿ ಮನ್ನಾ ಮಾಡುವುದಕ್ಕೆ ಇಟ್ಟಿದ್ದಿರಿ. ಇದು ಹೊಸದಾಗಿ ಏನೂ ಇಲ್ಲ. ಬಜೆಟ್ ಮಂಡಣೆ ಮಾಡಿದಂಥ ಕಾಲದಲ್ಲಿ ಇರಲೇಬೇಕಾಗಿತ್ತು. ಫುಡ್ ಸಬ್ಸಿಡಿ ಬಗ್ಗೆ ಏನು ಹೇಳುತ್ತೀರಿ. 500 ಕೋಟಿ ರೂ ಈ ಬಗ್ಗೆ ನಿಮಗೆಲ್ಲಾ ಗೊತ್ತಿದೆ. ರಾಜ್ಯದ ಅತ್ಯವಶ್ಯಕವಾದಂಥ ಸಮಸ್ಯೆ. ಫುಡ್ ಸಮಸ್ಯೆ 500 ಕೋಟಿ ರೂ ಇವೆಲ್ಲವನ್ನೂ ವಿಶ್ಲೇಷಣೆ ಕೊಟ್ಟು ಸರ್ಕಾರಕ್ಕೆ ಮುಜುಗರ ಮಾಡತಕ್ಕಂಥದ್ದು ನನ್ನ ಇಚ್ಛೆಯಿಲ್ಲ. ವಿರೋಧ ಪಕ್ಷದಲ್ಲಿದ್ದು ಕೆಲವು ನಾವು ಹೇಳಬೇಕಾಗುತ್ತದೆ. ನಾನು ಕೂಡ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದಂಥ ಕಾಲದಲ್ಲಿ ಇವತ್ತೇನು Iethargic attitude of the Government officers ಬಗ್ಗೆ ನೋಡಿದ್ದೇನೆ. ಅವರು ಸುಮ್ಮನೆ ಹಗುರವಾಗಿ ಮಾಡಿಬಿಡುತ್ತಾರೆ. ಇವೆಲ್ಲವನ್ನೂ ಕೂಡ ನೀವು ಹೊಸದಾಗಿ ಏನೂ ಮಾಡಿಲ್ಲ. ಮತ್ತೆ ಕೇಂದ್ರ ಸರ್ಕಾರದಿಂದ ಬಂದಾಗ ಅದಕ್ಕೆ ಕೂಡ ಮ್ಯಾಚಿಂಗ್ ಗ್ರಾಂಟ್ ಕೊಡಬೇಕಾಗುತ್ತದೆ. ಇದಕ್ಕೆ ಬಜೆಟ್‌ನಲ್ಲಿ ಚೆನ್ನಾಗಿ ಸ್ಕೂಟಿನಿಮಾಡಿ ಇವತ್ತೇನು ಮೂರನೇ ಕಂತು ಏನು ಇದೆ. ಇದಕ್ಕೆ ತಾವೇನು ಅನುದಾನ ಕೇಳಿದಿರಿ, ಅದಕ್ಕೆ ನಾವು ಒಪ್ಪಲೇಬೇಕಾಗುತ್ತದೆ, ಒಪ್ಪುತ್ತೇವೆ. ಇವತ್ತು ಬಜೆಟ್‌ಭಾಷಣದಲ್ಲಿ ನಾನಾಗಲಿ, ಶ್ರೀರಾಂರೆಡ್ಡಿಯವರು ಮಾತನಾಡಿದ್ದಾರೆ, ಮಾಧುಸ್ವಾಮಿ ಯವರು ಮಾತನಾಡಿದ್ದಾರೆ, ವಾಟಾಳ್‌ನಾಗರಾಜ್‌ರವರು ಮಾತನಾಡಿದ್ದಾರೆ, ಬಹಳಷ್ಟು ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇವತ್ತು ಆರೋಗ್ಯ ಸಚಿವರು ಇಲ್ಲಿ ಇಲ್ಲ. ನಿನ್ನೆಕೂಡ ನನ್ನ ಜೇವರ್ಗಿ ತಾಲ್ಲೂಕಿನಲ್ಲಿ ರೇವನೂರು ತಾಂಡದಲ್ಲಿ ಇಬ್ಬರು ಮಕ್ಕಳು ಕೋಳಿ ಜ್ವರದಿಂದ ಸತ್ತು ಹೋಗಿದ್ದಾರೆ. They are in the Hospital now ಇವತ್ತು ರಾಯಚೂರಿನಲ್ಲಿ, ಬೀದರ್‌ನಲ್ಲಿ, ಗುಲ್ಬರ್ಗಾದಲ್ಲಿ ಇದು ಬಹಳ ಬೆಳೆಯುತ್ತಾ ಇದೆ, ಮೊದಲು ಪ್ಲೇಗ್ ಎಂದು ಬರುತ್ತಿತ್ತು, ಆ ರೀತಿಯಲ್ಲಿ ಅಗುತ್ತಿದೆ, ಈ ಒಂದು ರೋಗ ಕರ್ನಾಟಕ ರಾಜ್ಯದಲ್ಲಿ ಹರಡುತ್ತಿದೆ, ಅದರ ಬಗ್ಗೆ ಔಷಧಿ ಖರೀದಿಗಾಗಿ ಬೇರೆ ತಜ್ಞರನ್ನು ಎಲ್ಲಾ ಕಡೆಗೂ ಕಳುಹಿಸತಕ್ಕಂಥ ರೀತಿಯಲ್ಲಿ ಏನಾದರೂ ಕೂಡ ತಾವು ಪ್ರೋಗ್ರಾಂ ಮಾಡಲಿಲ್ಲ. ನಿನ್ನೆ ಹೈಕೋರ್ಟ್ ಪೀಠದ ಬಗ್ಗೆ ಹೇಳಿದ್ದೀರಿ, ತಾವು ಉತ್ತರದಲ್ಲಿ ಹೇಳುತ್ತೇನೆ ಎಂದು ಹೇಳಿದಿರಿ, ಇವತ್ತು ಕೆಲವು ವಿಚಾರಗಳನ್ನು ಸಮಗ್ರವಾಗಿ ಚರ್ಚಿಸಬೇಕಾಗುತ್ತದೆ. ಈಗಾಗಲೇ ಆ ಬಾಂಬೆ ಕರ್ನಾಟಕ ಭಾಗದಲ್ಲಿ ಗುಲ್ಬರ್ಗಾ, ಬೆಳಗಾಂ, ಬಾಗಲಕೋಟೆ, ಬಳ್ಳಾರಿ ಈ ಕಡೆಗೆ ನೆರೆಹಾವಳಿಯಾಯಿತು, ತಾವೂ ಕೂಡ ಸಾಕಷ್ಟು ಕಡೆ ಆ ಕಡೆಗೆ ಹೋಗಿದ್ದೀರಿ. ಅದರೂ ಕೂಡ ಕೇಂದ್ರ ಸರ್ಕಾರ 357 ಕೋಟಿ ರೂ ಕೊಟ್ಟಿದೆ. ನಿನ್ನೆ ಕೂಡ ಕೆ.ಆರ್.ನಗರದ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ, ನಮ್ಮ ಮೈಸೂರು ಭಾಗದಲ್ಲಿ ಅಗುತ್ತಾ ಇಲ್ಲವೆಂದು ಹೇಳಿದ್ದಾರೆ, ತಾವು ಕೂಡ ಅಲ್ಲಿಗೆ ಹೋಗಿ ಬಂದಿರಿ ತಾವು ಹೇಳಿದಿರಿ ಹೆಚ್ಚಿನ ಗ್ರಾಂಟ್ ಕೊಟ್ಟು ಕೊಟ್ಟು ಕೆಲಸ ಮಾಡಬೇಕೆಂದು ತಾವು ಹೇಳಿದಿರಿ. ಇನ್ನೂ ಅಗಿಲ್ಲ. ಇವೆಲ್ಲಾ ಹೊಸದಾಗಿ ಬಜೆಟ್ ಮಂಡನೆ ಮಾಡುವಂಥ ಕಾಲದಲ್ಲಿ ಎಲ್ಲಿ ಬಿಟ್ಟು ಹೋಗಿದೆ ಅದಕ್ಕಾಗಿ ಪ್ರಾವಿಷನ್

ಮಾಡಬೇಕಾಗುತ್ತದೆ. ಏಕೆಂದರೆ ತಾವು ತಮ ತಿಳಿಯಬಾರದು. ಅವರಿಗೆ ಈಗ ಸ್ವಲ್ಪ ಸಿಟ್ಟು ಕಡಿಮೆಯಾಗಿದೆ. ಆ ಸ್ಥಾನದಲ್ಲಿ ಕುಳಿತು ಕೊಂಡಿದ್ದಾಗ ನಮಗೆ ಅವರು ಹೇಳಲಿಕ್ಕೆ ಬಿಡುತ್ತಿರಲಿಲ್ಲ. ನಾನು ಏನು ಹೇಳುತ್ತಿದ್ದೇನೆ. ಅಂದರೆ ಹೊಸ ಸರ್ಕಾರ ಬಂದ ಮೇಲೆ ತರಾತುರಿಯಲ್ಲಿ ಬಜೆಟ್ ಮಂಡನೆಯಾಗಿದೆ. ತಾವು ಬಂದು ನಲವತ್ತು ದಿವಸವಾಯಿತು. ಬಜೆಟ್ ಮಂಡನೆ ಕಾಲದಲ್ಲಿ ಈ ಒಂದು ಸದನದಲ್ಲಿ ಬರತಕ್ಕಂಥ ವಿಚಾರಗಳನ್ನು ಅಳವಡಿಸಿಕೊಂಡು ನ್ಯೂ ಸರ್ವೀಸಸ್‌ಗೆ ಇವತ್ತು ನಾವು ಹೆಚ್ಚಿನ ಹಣವನ್ನು ಕೊಟ್ಟಿದ್ದೇವೆ. ಈ ಜ್ವರವನ್ನು ನಿಯಂತ್ರಣ ಮಾಡುವ ರೀತಿಯಲ್ಲಿ ಅದಕ್ಕೆ ನಾವು ಮಾಡುತ್ತಿದ್ದೇವೆ. ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿಯ ಬಗ್ಗೆ ಹೇಳಬೇಕಾದರೆ ಹೈದರಾಬಾದ್ – ಕರ್ನಾಟಕ ಅಭಿವೃದ್ಧಿ ಮಂಟಳಿಯ ಪ್ಲಾನ್‌ನಲ್ಲಿ ಆರುಕೋಟಿರೂ ಕಟ್ ಮಾಡಿ ಶಿವಮೊಗ್ಗದ ಮಲ್ನಾಡು ಡೆವಲೆಪ್‌ಮೆಂಟ್ ಬೋರ್ಡ್‌ಗೆ ಕೊಡುತ್ತಿದ್ದೀರಿ. ಇವೆಲ್ಲಾ ಆಗಲೇಬಾರದು. ಇವತ್ತು ರೀಜನಲ್ imbalance ಇದೆ. ಅದ್ದರಿಂದ ರಾಜ್ಯದಲ್ಲಿ ಎಲ್ಲಾ ಕಡೆಗೆ ಹಣವನ್ನು ಕೊಡತಕ್ಕಂಥದ್ದ ರೀತಿಯಲ್ಲಿ ಅಗಬೇಕು, ಕುಡಿಯುವ ನೀರಿನ ಬಗ್ಗೆ ನಾನು ಒಪ್ಪುತ್ತೇನೆ. ಇವತ್ತು ಕುಡಿಯುವ ನೀರಿನ ಬಗ್ಗೆ ಅಕ್ಷನ್ ಪ್ಲಾನ್ ಪ್ರಿಪೇರ್ ಮಾಡಿ ಕರ್ನಾಟಕ ರಾಜ್ಯದಲ್ಲಿ ಎಫೆಕ್ಟೀವ್ ಆಗಿ ಈಗಿನ ಸರ್ಕಾರ ಹೆಚ್ಚಿನ ಒತ್ತು ಕೊಟ್ಟದೆ ಎನ್ನತಕ್ಕಂಥ ಅಭಿಪ್ರಾಯ ಬರಬೇಕು; ಕೆಲವು ವಿಷಯಗಳು ಪ್ರಸ್ತಾಪ ಮಾಡಿದ್ದೇವೆ, ಇನ್ನೂ ಕೂಡ ನಮ್ಮ ಸದಸ್ಯರು ಮಾತನಾಡುವವರಿದ್ದಾರೆ ಪೂರಕ ಅಂದಾಜುಗಳಲ್ಲಿ 1692 ಕೋಟಿ 80 ಲಕ್ಷ ಏನು ಕೇಳಿದ್ದೀರಿ, ಇದಕ್ಕೆ ತಾವು ಸಮಗ್ರವಾದಂಥ ಉತ್ತರವನ್ನು ಕೊಡಬೇಕು. ಇದಕ್ಕೆ ನಾವು ಪಾಸ್‌ಮಾಡಲೇಬೇಕಾಗುತ್ತದೆ, ಕೊನೆಯ ದಿನ ಇದೆ, ಅದರ ಬಗ್ಗೆ ಏನೂ ಅಭ್ಯಂತರವಿಲ್ಲ. ಕೆಲವು ವಿವರಗಳನ್ನು ಹೇಳಿದಿರಿ, ರಾಜ್ಯದ ಸಮಗ್ರ ಅಭಿವೃದ್ಧಿ ದೃಷ್ಟಿಯಿಂದ ಜನರ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಹೆಚ್ಚಿನ ರೀತಿಯಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡತಕ್ಕಂಥದ್ದಕ್ಕೆ ಇದರಿಂದ ಸಹಾಯ ಆಗುತ್ತದೆ ಎಂದು ಹೇಳಿದಿರಿ ಆದರೆ ಸರ್ಕಾರ requires a commitment. Political commitment ಸರ್ಕಾರ ಈ ಎಲ್ಲಾ ಕಾರ್ಯಕ್ರಮಗಳನ್ನು ಮಾಡಬೇಕಾದರೆ, it requires a commitment. ಅದು ಮಾಡಬೇಕೆಂದು ಹೇಳಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೆ. ಪೂರಕ ಅಂದಾಜುಗಳು ಇರುವಂಥದ್ದೇ, ಅದನ್ನು ಪಾಸ್ ಮಾಡಬೇಕಾಗಿರುವುದು ಸರಿ; ಅದರೆ ಫೈನಾನ್ಷಿಯಲ್ ಡಿಸಿಪ್ಲೇನ್ ಅನ್ನು ಎಷ್ಟು ವರ್ಷವಾದರೂ ತಂದು ಕೊಳ್ಳಲಿಲ್ಲ ಎನ್ನುವುದು ಒಂದು ನೋವು. ಮಾನ್ಯ ಸಿದ್ದರಾಮಯ್ಯನವರು ಇದ್ದಾಗಲೇ ನಾವು ಮಾತನಾಡಿದೆವು, ಯಾವುದೋ ಎರ್ಮಜೆನ್ಸಿ, ನಿಮಗೆ ಗೊತ್ತಿಲ್ಲದ್ದನ್ನು ನೀವು ಪೂರಕ ಅಂದಾಜುಗಳಲ್ಲಿ ತರುವುದು ಅಭಿಯಾಚನೆ ಕೇಳುವುದು ಸಂಪ್ರದಾಯ. 1600, ಕೋಟಿ ರೂ 1700 ಕೋಟಿ ರೂ ಪೂರಕ ಅಂದಾಜಿನಲ್ಲಿ ಬರುತ್ತದೆ ಅವರೇ 25ರಲ್ಲಿ ಹೇಳಿದ್ದಾರೆ. "If the amount authorised by any Law made in accordance with the provisions of article 204 to be expended for a particular service for the current financial year if found to be insufficient for the purposes of that year or when a need has arisen during the current financial year for supplementary or additional

expeniture upon some new service not contemplated in the annual financial statement for that year ...." ಸಾರ್ ತಾವು ನೋಡಬೇಕು. ಸಂವಿಧಾನ ನಿಮಗೆ ಇಲ್ಲಿ ಏನು ಅಗತ್ಯ ಮಾಡಿದೆ, ಅನುಕೂಲ ಮಾಡಿದೆ, ಅದರ ಬಗ್ಗೆ ಸ್ಪಷ್ಟವಾಗಿ ಹೇಳಿರುತ್ತದೆ, ಏತಕ್ಕೆಬೇಕು ಪೂರಕ ಅಂದಾಜುಗಳು ಅಂತ ಬಜೆಟ್ ಪ್ರಿಪೇರ್ ಮಾಡಿದ ಮೇಲೆ ಯಾವುದಾದರೂ ನ್ಯೂ ಸರ್ವೀಸ್ ತಾವು ಘೋಷಣೆ ಮಾಡುವ ಹಾಗಿದ್ದರೆ, ಹೇಳುವ ಹಾಗಿದ್ದರೆ ಸರ್ಕಾರದ ಮುಂದೆ ನಿಂತುಕೊಂಡು ಅಥವಾ ಯಾವುದೋ ಪರ್ಟಿಕ್ಯೂಲರ್ ಸರ್ವೀಸ್‌ನಲ್ಲಿ ನಿಮಗೆ ಕರೆಂಟ್ ಫೈನಾನ್ಸ್ ಇಯರ್‌ನಲ್ಲಿ ನಾವು ಮಾಡ ಬೇಕಾದಂಥ ವೆಚ್ಚವನ್ನು ನಾವು ಅದರಲ್ಲಿ ಕೊಡಲಿಕ್ಕೆ ಆಗಿಲ್ಲ ಈಗ ಜಾಸ್ತಿ ಬೇಕು ಎಂದರೆ, ಪೂರಕ ಅಂದಾಜಿನಲ್ಲಿ ತಾವು ಕೇಳಬಹುದು. ಆದರೆ ನಿಮ್ಮ ಪೂರಕ ಅಂದಾಜನ್ನು ನಾನು ಪೂರಾ ಓದಿದ್ದೇನೆ. ಸಂಬಳಕ್ಕೆ, ಸಾಲಲಿಲ್ಲ, ಅನುದಾನ ಕೊಡಲಿಕ್ಕೆ ಸಾಲಲಿಲ್ಲ, ನೀವು ಇಟ್ಟಿದ್ದು ಸಾಲಲಿಲ್ಲ, ಈ ಪುಸ್ತಕದ ತುಂಬಾ ಅಗತ್ಯ ಇದ್ದಷ್ಟು ಅನುದಾನ ಕೊಟ್ಟಿರಲಿಲ್ಲ, ಅದಕ್ಕೆ ಪೂರಕ ಬಜೆಟ್‌ನಲ್ಲಿ ನಾವು ಸೇರಿಸಿಕೊಂಡಿದ್ದೇವೆಂದು ಹೇಳುತ್ತೀರಿ. ಇದೇನು ಎಂಬುದು ನಮಗೆ ಅರ್ಥವಾಗುತ್ತಿಲ್ಲ, ಹಾಗಾದರೆ ಬಜೆಟ್ ಇಲ್ಲಿ ಮಾಡಿರುವುದೇ ತಪ್ಪು ಎಂದು ನಾವು ವ್ಯಾಖ್ಯಾನ ಮಾಡಬಹುದಾಗುತ್ತದೆ. ಆಯವ್ಯಯದಲ್ಲಿ ಒದಗಿಸಿ ಅನುಮಾನ ಸಾಲದೇ ಇರುವುದರಿಂದ ಸಂಚಾರ ವ್ಯವಸ್ಥೆ ಸುಧಾರಣೆ ನಿಧಿಗೆ ಮತ್ತೆ ಆಯವ್ಯಯದಲ್ಲಿ ಒದಗಿಸಿದ ಅನುದಾನ ಸಾಲದೇ ಇರುವುದರಿಂದ ಸಾಮಾನ್ಯ ವೆಚ್ಚಕ್ಕಾಗಿ ಮತ್ತೆ ಆಯವ್ಯಯದಲ್ಲಿ ಒದಗಿಸಿದ ಅನುದಾನ ಸಾಲದೇ ಇರುವುದರಿಂದ ಆಹಾರ ವೆಚ್ಚಕ್ಕಾಗಿ ಎಂದು ಹೇಳಿರುತ್ತೀರಿ. ನಾನು ಈ ಸಂದರ್ಭದಲ್ಲಿ ಕೇಳವುದೇನೆಂದರೆ, ಈ ಆಯವ್ಯಯವನ್ನು ಯಾರು ಮಾಡಿದರು? ತಾವು ಮತ್ತು ತಮ್ಮ ಇಲಾಖೆ ತಾನೇ ಮಾಡಿರುವುದು? ಆಯವ್ಯಯ ಮಾಡಬೇಕಾದರೆ ಕನಿಷ್ಟ ಸ್ಯಾಲರಿ ಹೆಡ್‌ನಲ್ಲಿ ಎಷ್ಟು ದುಡ್ಡು ಇಡಬೇಕಾಗಿತ್ತೆಂದು ಮತ್ತು ಟಿ.ಎ:ಡಿ.ಎ ಹೆಡ್‌ನಲ್ಲಿ ಎಷ್ಟು ದುಡ್ಡು ಇಡಬೇಕಾಗಿತ್ತೆಂದು ಗೊತ್ತಾಗಿಲ್ಲವೆ? ಹಾಗಾದರೆ ಕಣ್ಣು ಮುಚ್ಚಿಕೊಂಡು ಈ ಸರ್ಕಾರ ಆಯವ್ಯಯ ಮಾಡುತ್ತದೆಯೇ ಎಂದು ನಾವು ಈ ಶಾಸನಸಭೆಯಲ್ಲಿ ಕೇಳಬೇಕಾಗುತ್ತದೆ? ನಿದ್ದೆ ಮಾಡುತ್ತಿದ್ದಿರಾ? ಕಣ್ಣು ಮುಚ್ಚಿಕೊಂಡಿದ್ದೀರಾ? ಅಂಕಿ ಸಂಖ್ಯೆಗಳು ಗೊತ್ತಿರಲಿಲ್ಲವೇ? ಇಲಾಖಾಧಿಕಾರಿಗಳು ಕಡಬು ತಿನ್ನುತಿದ್ದಾರೆಯೆ? ನೀವು ಈಗ ಇಟ್ಟಿರತಕ್ಕಂಥ ಆಯವ್ಯಯವನ್ನು ಆಯವ್ಯಯವೆಂದು ಯಾರಾದರೂ ಒಪ್ಪುವುದಕ್ಕೆ ಆಗುತ್ತದೆಯೇ? ಪ್ರತಿ ಸಲ ಇಲ್ಲಿ ಅಪ್ರೋಪ್ರಿಯೇಷನ್ ಬಿಲ್, ಸಪ್ಲಿಮೆಂಟರಿ ಡಿಮಾಂಡ್ಸ್‌ನಲ್ಲಿ ಇವುಗಳು ಬರುವುದೇ ಆದರೆ ಇನ್ನು ಮೇಲೆ ನೀವು ಬಜೆಟ್ ಮಂಡನೆ ಮಾಡುವುದಕ್ಕೆ ಹೋಗಬೇಡಿ. ಇದರ ಮೇಲೆ ಒಂದು ಗಂಟೆ ಭಾಷಣ ಮಾಡುತ್ತೇವೆಂದು ಮಾನ್ಯ ಅಧ್ಯಕ್ಷರ ಹತ್ತಿರ ಟೀಕೆಗೆ ಒಳಗಾಗುತ್ತೇವೆ. ಇದರ ಮೇಲೆ ಮತ್ತೆ ಮಾತನಾಡುತ್ತೇವೆಂದು ಹೊಸದಾಗಿ ಬಂದಿರತಕ್ಕಂಥವರು ನಮ್ಮನ್ನು ಮತ್ತೆ ಟೀಕೆ ಮಾಡತಕ್ಕಂಥ ಸ್ಥಿತಿಗೆ ತರುತ್ತೀರಿ. ಮತ್ತೆ ಇದನ್ನು ಪಾಸ್ ಮಾಡುವುದಕ್ಕೆ ನಮ್ಮ ಆತ್ಮ ಸಾಕ್ಷಿ ಒಪ್ಪುವುದಿಲ್ಲ. ಈ ಸರ್ಕಾರಗಳು ಎಲ್ಲಿಗೆ ಹೋಗುತ್ತಿವೆ? ಈ ಡಿಮ್ಯಾಂಡ್‌ನ್ನು ಅಧ್ಯಕ್ಷರು ತರಿಸಿಕೊಂಡು ಓದಬೇಕು. ಅಭಿಯಾಚನೆ – ೩ ರಲ್ಲಿ ಇಡೀಲೈನ್‌ನಲ್ಲಿ ಏನಿದೆ ಎಂದರೆ ಆಯವ್ಯಯದಲ್ಲಿ ಪೂರಕ ವೆಚ್ಚಗಳ ಬಾಬ್ತಿಗಾಗಿ ಕಡಿಮೆ ಅನುದಾನ ಒದಗಿಸಿದ್ದರಿಂದ, ಅಯವ್ಯಯ ಪ್ರಮಾಣಗಳ ವೆಚ್ಚ ಬಾಬ್ತಿಗಾಗಿ ಕಡಿಮೆ ಅನುದಾನ ಒದಗಿಸಿದ್ದರಿಂದ ಎಂದು ಹೇಳಿದ್ದೀರಿ. ರೆವಿನ್ಯೂ ಸರ್ಪ್ಲಸ್ ಬಜೆಟ್ ಇಡುತ್ತೇವೆಂದು ಭಾಷಣ ಮಾಡುತ್ತೀರಿ. ಸರ್ವಿಸಸ್‌ಗೆ ಸ್ಯಾಲರಿಗೆ ಬೇಕಾಗಿರತಕ್ಕಂಥ ಖರ್ಚಿನ ಹಣವನ್ನು ನೀವು ಆಯವ್ಯಯದಲ್ಲಿ ಒದಗಿಸುವುದಿಲ್ಲ ಎಂದರೆ ನೀವು ಮೋಸ ಮಾಡಿದ್ದೀರೆಂದು ನಾವು

ಕಾರ್ಯದರ್ಶಿಯವರು ಮತ್ತು ನಿಮ್ಮ ಪ್ರಧಾನ ಕಾರ್ಯ ದರ್ಶಿಯವರು ಹಾಗೂ ಚೀಫ್ ಇಂಜಿನಿಯರ್ ಕೂಡ ಶರಣಾಗಿರುತ್ತಾರೆ. ಆದ್ದರಿಂದ ಯಾರ ತೆವಲಿಗೆ ಈ ಸರ್ಕಾರವನ್ನು ನಡೆಸುತ್ತಿದ್ದೀರೆಂದು ಕೇಳಬೇಕಾಗುತ್ತದೆ. ನಾವು ಒಂದು ಗುಂಡಿ ಮುಚ್ಚಿ ಎಂದರೆ ಹಣ ಇಲ್ಲವೆಂದು ಹೇಳುತ್ತಾರೆ. ವಿಧಾನಸೌಧದಲ್ಲಿ ಓಡಾಡುವಂಥ ಭಟ್ಟಂಗಿಗಳು ಚೀಟಿ ತೆಗೆದುಕೊಂಡು ಬಂದು 20, 50, 50 ಲಕ್ಷ ರೂಪಾಯಿಗಳ ವರ್ಕ್ ತೆಗೆದುಕೊಂಡು ಬರುತ್ತಾರೆ. ಆದ್ದರಿಂದ ಇದರ ಬಗ್ಗೆ ಒಂದು ತನಿಖೆ ಆಗಬೇಕು. ನಾನು ಇಲ್ಲಿ ಚಾರ್ಜ್ ಮಾಡುತ್ತೇನೆ. ನಾವು ಇಂಥವುಗಳೆಲ್ಲವನ್ನೂ ಪಾಸ್ ಮಾಡುವುದಕ್ಕೆ ನಾವು ಇಲ್ಲಿದ್ದೇವೆಯೆ? Contigency ಫಂಡ್‌ನಿಂದ ಡ್ರಾ ಮಾಡಿರತಕ್ಕಂಥ 230 ಕೋಟಿ ರೂಪಾಯಿಗಳ ಅಕೌಂಟ್‌ನ್ನು ವಿಧಾನಸಭೆಯ ಮುಂದೆ ಕೊಡಿ ಎಂದು ಅವತ್ತು ನಾನು ಹೇಳಿದ್ದೆ. ಅವತ್ತು ಯಾವುದೋ ಗಲಾಟೆಯಲ್ಲಿ ಅಪ್ರೋಪ್ರಿಯೇಷನ್ ಬಿಲ್ ಪಾಸ್ ಆಯಿತು. ಆದ್ದರಿಂದ ಅವೆಲ್ಲವನ್ನೂ ತಂದು ಇಡಬೇಕೆಂದು ನಾವು ಕೇಳುತ್ತಿದ್ದೇವೆ. ಅದನ್ನು ಪ್ಲಾನ್‌ನಲ್ಲಿ ಮತ್ತು ಬಜೆಟ್‌ನಲ್ಲಿ ಏಕೆ ತರಲಿಲ್ಲ? ಈ ರಾಜ್ಯಕ್ಕೆ 200 ಚಿಲ್ಲರೆ ಕೋಟಿ ರೂ ಸಿಗುವಂಥ ಹಣವನ್ನು ಹೊರಗಡೆ ಇಟ್ಟು ಏತಕ್ಕಾಗಿ ಖರ್ಚು ಮಾಡಿದ್ದೀರೆಂದು ಮತ್ತು ನಮ್ಮನೆಲ್ಲಾ ಏಕೆ ಚೀಟ್ ಮಾಡುತ್ತಿದ್ದೀರೆಂದು ತಾವು ಹೇಳಬೇಕಾಗುತ್ತದೆ. ದಯಮಾಡಿ ಇಂಥ ಶಿಸ್ತನ್ನು ಪಾಲಿಸದೇ ಹೋದರೆ ಈ ರಾಜ್ಯದ ಅಭಿವೃದ್ಧಿ ಆಗುವುದಿಲ್ಲ. ಗಿಡ ಕತ್ತರಿಸಿದೆ, ಮಣ್ಣು ಹಾಕಿದೆ ಎಂದು ಹೇಳುತ್ತಾರೆ ಆದರೆ ಅದೇ ರೋಡ್‌ನಲ್ಲಿ ಒಂದು ಗುಂಡಿ ಸಹ ಮುಚ್ಚಿಲ್ಲ. ಎರಡನೇಯದಾಗಿ ಹೇಳುವುದಾದರೆ ನಮ್ಮ ರಸ್ತೆಗಳಿಗೆ ಪ್ಯಾಕೇಜ್ ಕೊಟ್ಟಿದ್ದೀರಿ. ಇಡೀ ವರ್ಷದಲ್ಲಿ ಈ ಪ್ಯಾಕೇಜ್‌ನಲ್ಲಿ ಏನು ಕೆಲಸ ಮಾಡಿದ್ದೀರಿ? ಪಿ.ಡಬ್ಲ್ಯೂ.ಡಿ ಗೆ ಇದರಿಂದ 7, 8 ಕೋಟಿ ರೂಪಾಯಿ ತೆಗೆದುಕೊಂಡು ಚಿಕ್ಕನಾಯಕನ ಹಳ್ಳಿಗೆ 1 ಕೋಟಿ 86 ಲಕ್ಷ ರೂಪಾಯಿ ಪ್ಯಾಕೇಜ್‌ನಲ್ಲಿದೆ. ಟೆಂಡರ್ ಆಗಿಲ್ಲ. ಕೆಲಸ ಕೂಡ ಆಗಿಲ್ಲ ಮತ್ತೆ ಹಣ ಖರ್ಚು ಕೂಡ ಆಗಲಿಲ್ಲ. ತಾವು ಇಟ್ಟಿರತಕ್ಕಂಥ ಹಣ ಎಷ್ಟು? ಖರ್ಚು ಮಾಡಿರತಕ್ಕಂಥ ಹಣ ಎಷ್ಟು? ಆ ಹಣ ಖರ್ಚು ಆಗದೆ ಸಪ್ಲಿಮೆಂಟರಿ ಡಿಮಾಂಡ್ಸ್‌ನ್ನು ಏತಕ್ಕಾಗಿ ತರುತಿದ್ದೀರಿ? ಈ ದುಡ್ಡು ಏತಕ್ಕೆ ಖರ್ಚು ಆಗುತ್ತದೆ ಎಂಬ ಮಾಹಿತಿ ನೀಡಬೇಕು. ಯಾವುದೊಂದು ಜಿಲ್ಲೆಗೆ, ಕ್ಷೇತ್ರಕ್ಕೆ ಖರ್ಚಾಗುವ ಹಣಕ್ಕೆ ಅಪ್ರೂಲ್ ಮಾಡುವುದಕ್ಕೆ ನಾವೆಲ್ಲಾ ಶಾಸಕರಾಗಿ ಇಲ್ಲಿಗೆ ಬರಬೇಕೆ? ತಾವು ಇವತ್ತು ಮಾಹಿತಿ ತರಿಸಬೇಕು ಯಾವ್ಯಾವ ಕ್ಷೇತ್ರಕ್ಕೆ ಎಷ್ಟು ಲೆಂಗ್ತಾ ರೋಡ್‌ಗೆ ಎಷ್ಟು ಹಣ ಖರ್ಚಾಗಿದೆ ಎನ್ನುತಕ್ಕಂಥ ಮಾಹಿತಿಯನ್ನು ಇಲ್ಲಿ ಟೇಬಲ್ ಮೇಲೆ ಮಂಡಿಸಬೇಕು. ಅನಂತರ ಇಂಥವೆಲ್ಲವನ್ನೂ ಇಲ್ಲಿಗೆ ಚರ್ಚೆಗೆ ತರಬೇಕು. ಇಲ್ಲದೇ ಇದ್ದರೆ ಈ ರಾಜ್ಯದಲ್ಲಿ Fiscal ಡಿಸಿಪ್ಲಿನ್ ಇರುತ್ತದೆಂದು ತಿಳಿದು ಕೊಳ್ಳುವುದಕ್ಕೆ ಆಗುವುದಿಲ್ಲ. ಕರ್ನಾಟಕ ರಾಜ್ಯ ಅಭಿವೃದ್ಧಿ ಅಗಿದೆ ಎಂದರೆ ನಮ್ಮ ಕ್ಷೇತ್ರವೂ ಕೂಡ ಅಭಿವೃದ್ಧಿಯಾಗಬೇಕಲ್ಲವೇ? ಡಾ:ಎಂ ನಂಜುಂಡಪ್ಪನವರು ವರದಿಯನ್ನು ಬರೆದು ಹೋಗಿದ್ದಾರೆಯೆ? ಇಂಥಿಂಥ ತಾಲ್ಲೂಕುಗಳು ಬ್ಯಾಕ್‌ವರ್ಡ್ ಇವೆ. ಆದ್ದರಿಂದ ಹೆಚ್ಚಿನ ಕಾನ್‌ಸೆಂಟ್ರೇಟ್ ಮಾಡಿ ಎಂದು ಹೇಳಿದ್ದಾರೆ. ಅದರೆ ಯಾವುದೇ ಕೆಲಸ ಆಗಿಲ್ಲ ಈ ಕಡೆ ಪೂರ್ವಕ್ಕೆ ಮತ್ತು ಉತ್ತರಕ್ಕ ಮಾತ್ರ ಈ ರಾಜ್ಯದಲ್ಲಿ ಖರ್ಚಾಗುತ್ತಿದೆ. ಯಾವುದೊಂದು ಕ್ಷೇತ್ರ, ಜಿಲ್ಲೆ ಅಭಿವೃದ್ಧಿ ಮಾಡುವುದಕ್ಕೆ ಇಡೀ ಶಾಸನಸಭೆಯನ್ನು ಇವತ್ತಿನದಿವಸ ಸಲಾಂ ಮಾಡುವ ಸ್ಟೇಜಿಗೆ ತಂದಿರತಕ್ಕಂಥದನ್ನು ತಾವು ತಪ್ಪಿಸಬೇಕು. ಮತ್ತೆ ಇದಕ್ಕೆ ಸಂಬಂಧಪಟ್ಟಂಥ ವಿವರಣೆಯನ್ನು ತಾವು ನನಗೆ ಕೊಡಬೇಕು. ಈ ಸ್ಕೀಂನ್ನು ಒದಗಿಸಿದವರು ಯಾರು? 9,10 ಕೋಟಿ ರೂಪಾಯಿಗಳ ಯೋಜನೆಗಳನ್ನು ಹೇಳದೆ ಕೇಳದೆ ಆರಂಭ ಮಾಡಿ ಹಣ ಏತಕ್ಕೆ ಖರ್ಚು ಮಾಡಿದರು?

ಗಾಲಿಯ ಮೇಲೆ ಅರಮನೆ ಯೋಜನೆಗೆ ಸರ್ಕಾರದ ಆದೇಶ ಇತ್ತೇ? ಆರ್ಥಿಕ ಇಲಾಖೆಯವರು ಅನುಮತಿ ಕೊಟ್ಟಿದ್ದಾರೆಯೆ? ಮತ್ತೆ ಶಾಸನಸಭೆ ಮುಂದೆ ಬಂದಿತ್ತೇ? ಸಣ್ಣ ಇಲಾಖೆಗಳಾಗಿರತಕ್ಕಂಥ ಟೂರಿಸಂ ಇಲಾಖೆಯವರು 9–10 ಕೋಟಿ ರೂಪಾಯಿ ಖರ್ಚು ಮಾಡುತ್ತಾರೆಂದರೆ ಏನು ಶಿಸ್ತು ಈ ಸರ್ಕಾರದಲ್ಲಿ ಉಳಿದಿದೆ? ಭಾರತ ಸರ್ಕಾರ ಇದಕ್ಕೆ ದುಡ್ಡು ಕೊಟ್ಟರೂ ಸಹ ಅದರ ಬಗ್ಗೆ ಒಂದು ಕಡೆ ಎಲ್ಲಿಯಾದರು ಹೇಳಬೇಕಲ್ಲವೆ? ಭಾರತ ಸರ್ಕಾರ ಪುಕ್ಸಟ್ಟೆ ಏನೂ ಕೊಡುವುದಿಲ್ಲ. ಈ ದೇಶದ ಪ್ರಜೆಗಳಿಗೆ ತಲವಾರು ಇಷ್ಟೆಂದು ಕೊಡುತ್ತಾರೆ. ಧಾನ–ಧರ್ಮ ಮಾಡುವುದಕ್ಕೆ ಭಾರತ ಸರ್ಕಾರ ದುಡ್ಡು ಕೊಡುವುದಿಲ್ಲ. ಮೂರನೆಯದಾಗಿ, ಹೇಳುವುದಾದರೆ ವಿಶ್ವವಿದ್ಯಾಲಯಗಳಿಗೆ ತಾವು ಹಣ ಖರ್ಚು ಮಾಡಿದ್ದೀರಿ. ತುಮಕೂರಿನಲ್ಲಿ ಒಂದು ವಿಶ್ವವಿದ್ಯಾಲಯ ಆಗಿದೆ ಎಂದು ತಮಗೆ ಎಲ್ಲಿಯಾದರೂ ಕಲ್ಪನೆಯಲ್ಲಿದೆಯೇ ಎಂದು ಕೇಳುವುದಕ್ಕೆ ಬಯಸುತ್ತೇನೆ. ತುಮಕೂರು ವಿಶ್ವವಿದ್ಯಾಲಯಕ್ಕೆ ಬಜೆಟ್‌ನಲ್ಲಿ 10 ರೂಪಾಯಿ ಪ್ರಾವಿಜನ್ ಮಾಡಿಲ್ಲ. ಯೂನಿವರ್ಸಿಟಿಯನ್ನು ಪ್ರಾರಂಭ ಮಾಡಿ ಎರಡು ವರ್ಷ ಆಯಿತು. ನಮ್ಮ ಅಧಿಕಾರಿಗಳು ಯಾರೂ ನೋಡುವುದಿಲ್ಲ. ಇದಕ್ಕೋಸ್ಕರ ಅಲ್ಲೊಂದು ಲ್ಯಾಂಡ್ ತೆಗೆದುಕೊಳ್ಳಬೇಕೆಂದು ನಮ್ಮ ಅಧಿಕಾರಿಗಳಿಗೆ ಗೊತ್ತಿಲ್ಲವೆ? 400 ಎಕರೆ ಲ್ಯಾಂಡ್ ತೆಗೆದುಕೊಳ್ಳಬೇಕಾಗಿರುವ ಕಡೆ ಕೇವಲ 76 ಎಕರೆಗೆ ನಿಲ್ಲಿಸಿದ್ದಾರೆ. ಅದ್ದರಿಂದ, ತುಮಕೂರು ವಿಶ್ವವಿದ್ಯಾಲಯ ಯಾವರೀತಿಯಾಗಿ ನಡೆಯುತ್ತಿದೆ ಎಂದು ನಾನು ತಮ್ಮಲ್ಲಿ ಕೇಳುವುದಕ್ಕೆ ಬಯಸುತ್ತೇನೆ. ಇದ್ಯಾವುದನ್ನು ಗಣನೆಗೆ ತೆಗೆದುಕೊಳ್ಳದೆ ಈ ತರಹ ಸಪ್ಲಿಮೆಂಟರಿ ಡಿಮ್ಯಾಂಡ್ಸ್‌ನ್ನು 1600 ರಿಂದ 1700 ಕೋಟಿ ರೂಪಾಯಿಗಳಿಗೆ ಹೋಗುವಂತಹ ಸ್ಥಿತಿಯನ್ನು ಮಾನ್ಯ ಯಡಿಯೂರಪ್ಪನವರು ತಪ್ಪಿಸಬೇಕು. ಹೆಲ್ತ್‌ನಲ್ಲಿ ತಾವು ಕೊಡುತ್ತಿದ್ದೀರಿ. ಜಯದೇವ ಆಸ್ಪತ್ರೆಗೆ 6 ಕೋಟಿ ರೂಪಾಯಿಗಳ ಉಪಕರಣ ಬಹುಶ : ವಿಕ್ಟೋರಿಯಾಗೆ ಕೊಟ್ಟಿರಬಹುದು. ಬೌರಿಂಗ್ ಆಸ್ಪತ್ರೆಗೆ ಕೊಟ್ಟಿರಬಹುದೆಂದು ನಾನು ತಿಳಿದುಕೊಳ್ಳುತ್ತೇನೆ. ಬೆಂಗಳೂರಿನ ಆಸ್ಪತ್ರೆಗಳಿಗೆ ಅಭಿವೃದ್ಧಿ ಮಾಡುವ ಕಡೆಗೆ ಕೊಟ್ಟರೆ ನಮಗೆ ಏನೂ ವಿರೋಧವಿಲ್ಲ. ಬೆಂಗಳೂರಿನ ಆಸ್ಪತ್ರೆಗಳನ್ನು ಅಭಿವೃದ್ಧಿ ಮಾಡುವ ಬಗ್ಗೆ ನಮ್ಮದು ವಿರೋಧವಿಲ್ಲ. ಸಾರ್, ವಿಕ್ಟೋರಿಯಾ ಆಸ್ಪತ್ರೆಯದು ಒಂದು ಕಥೆ ಹೇಳುತ್ತೇನೆ. ಮೆಡಿಕಲ್ ಕೌನ್ಸಿಲ್ ಅಫ್ ಇಂಡಿಯಾದವರು ಬರೆದು 6–8 ವರ್ಷವಾಯಿತು. ನಿಮ್ಮಲ್ಲಿ ಕಾರ್ಡಿಯಾಲಜಿ ಯೂನಿಟ್ ಇಲ್ಲ. ನಿಮ್ಮಲ್ಲಿ ನೆಫ್ರೋಲಜಿ ಚೆನ್ನಾಗಿಲ್ಲ. ಒಂದು ಕ್ಯಾಥ್ ಲ್ಯಾಬ್ ಹಾಕಿಕೊಂಡಿಲ್ಲ. ಇಡೀ ಬೆಂಗಳೂರು ಮೆಡಿಕಲ್ ಕಾಲೇಜಿಗೆ ಕೊಟ್ಟಿರುವಂತಹದ್ದು ಮಾನ್ಯತೆಯನ್ನು ರದ್ದು ಮಾಡಬೇಕಾಗುತ್ತದೆ. ಎಂದು ಇವತ್ತಿನವರೆಗೆ ಯಾರೂ ಕೂಡ ಗಮನವನ್ನು ಹರಿಸಿಲ್ಲ. ನಾನು ಮೂರನೇ ಸಲ ಬಜೆಟ್ ಭಾಷಣದಲ್ಲಿ ಹೇಳುತ್ತಿದ್ದೇನೆ. ಒಂದು ಯೂನಿಟ್‌ನ್ನು ತಾವು ಇಟ್ಟಿದ್ದೀರಿ. ಒಬ್ಬರು ಪ್ರೊಫೆಸರ್ ಆಫ್ ಕಾರ್ಡಿಯಾಲಜಿ ಇಟ್ಟಿದ್ದೀರಿ, ಅವನ ಕೈ ಕೆಳಗೆ 4–5 ಜನ ಡಾಕ್ಟರ್‌ಗಳನ್ನು ಇಟ್ಟಿದ್ದೀರಿ. ಒಂದು ಕ್ಯಾಥ್‌ಲಾಬ್ ಇಲ್ಲಾ. ಅವನಿಗೆ ಏನೂ ಕೆಲಸವಿಲ್ಲ.ಜನರಲ್ ಮೆಡಿಸನ್ ಒಬ್ಬ ಫಿಸಿಷಿಯನ್ ಮಾಡುವ ಕೆಲಸವನ್ನು ಮಾಡುತ್ತಿದ್ದಾರೆ. ಮತ್ತೆ ನಿಮ್ಮ ಸ್ಟೂಡೆಂಟ್ಸ್‌ಗೆ ಅದು ಕ್ಲಿನಿಕಲ್ ಫಿಲಿಸಿಟಿ ಇರುವಂತಹ ಆಸ್ಪತ್ರೆ ಬೆಂಗಳೂರು ಮೆಡಿಕಲ್ ಕಾಲೇಜಿಗೆ ಅದನ್ನು ನೋಡುವುದೇ ಇಲ್ಲ. ಇನ್ನು ಮೈಸೂರು ಮೆಡಿಕಲ್ ಕಾಲೇಜ್ ಬಗ್ಗೆ ಹೇಳುವುದಾದರೆ ನಾವು ಅವತ್ತು ಮಾತನಾಡಬೇಕಾಗಿತ್ತು. ಮೈಸೂರು ಮೆಡಿಕಲ್ ಕಾಲೇಜ್ ಯಾವ ಸ್ಥಿತಿಗೆ ಹೋಗಿದೆ ಸ್ವಾಮಿ. ಅದು ಮುಚ್ಚಿಹೋಗಿಬಿಡುತ್ತದೆ ಸ್ವಾಮಿ. ಜೆಎಸ್‌ಎಸ್ ಕಾಲೇಜ್ ಬಹಳ ಚೆನ್ನಾಗಿ ಟೇಕ್ ಆಫ್

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ರಾಯರೆಡ್ಡಿಯವರು ಅನಾವಶ್ಯಕವಾಗಿ ನಮಗೂ ಮತ್ತು ಅವರಿಗೂ ತಕರಾರು ಹಿಡಿಸುವುದಕ್ಕೆ ನೋಡುತ್ತಿದ್ದಾರೆ. ಅದಕ್ಕೆ ಖಂಡಿತವಾಗಿಯೂ ಏನೂ ಅವಕಾಶವಿಲ್ಲ. ನಾನು ಯಡಿಯೂರಪ್ಪನವರಿಗೆ ಹೇಳಿರುವುದು ನಿಜ.

ಶ್ರೀ ಬಸವರಾಜ ರಾಯರೆಡ್ಡಿ : ನೀವು ಯಾವಾಗ ಅವರ ಜೊತೆಗೆ ಹೋಗಿದ್ದೀರಿ?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ನಾನು ಯಾವತ್ತೂ ಯಾರ ಜೊತೆಯಲ್ಲಿ ಇಲ್ಲ. ನಾನು ನನ್ನ ಜೊತೆಯಲ್ಲಿಯೇ ಇರುವುದು. ನಾನು ಯಾರ ಜೊತೆಯಲ್ಲೂ ಇಲ್ಲ. ನಾನು ಯಡಿಯೂರಪ್ಪನವರನ್ನು ಅಭಿನಂದಿಸಿದ್ದೇನೆ. ಅದು ನನ್ನ ಕರ್ತವ್ಯ.

ಶ್ರೀ ಜೆ.ಸಿ.ಮಾಧುಸ್ವಾಮಿ: ಯಡಿಯೂರಪ್ಪನವರೆ ಅವರು ಅ ಕಡೆಗೆ ಹೋದಾಗ ಹೊಟ್ಟೆ ಉರಿಯಲಿಲ್ಲ. ಯುಡ್ಡಿ ಆ ಕಡೆಗೆ ಹೋದಾಗ ಹೊಟ್ಟೆ ಉರಿಯಿತು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಇವರು ಯಾರ ಜೊತೆ ಹೋದರೂ ಹೊಟ್ಟೆ ಉರಿಯುವುದಿಲ್ಲ. ಬೇರೆಯವರ ಹೋದರೆ ಮಾತ್ರ ಹೊಟ್ಟೆ ಉರಿಯುತ್ತದೆ ನಾನು ಯಡಿಯೂರಪ್ಪನವರನ್ನು ಈಗಲೂ ಕೂಡ ಅಭಿನಂದಿಸುತ್ತೇನೆ. ಅದರಲ್ಲಿ ಯಾವುದೇ ರೀತಿಯಾದಂತಹ ಅನುಮಾನ ಬೇಡ. ಯಾವುದೇ ಬೂಟಾಟಿಕೆಗೆ ಅಭಿನಂದನೆಯನ್ನು ಮಾಡುತ್ತಿರುವುದಲ್ಲ. ನಾನು ಅವತ್ತು ಹೇಳಿರುವುದು ಇಷ್ಟೆ. ನಾನು ಮತ್ತು ರಾಜೇಂದ್ರನ್ ಇಬ್ಬರೂ ಹೋಗಿ. ಅವರಿಗೆ ಅಭಿನಂದನೆಯನ್ನು ಸಲ್ಲಿಸಿದ್ದೇವೆ. ಮೊದಲನೆಯದಾಗಿ ತಾವು ಬಜೆಟ್‌ನ್ನು ಮಂಡಿಸಿದ್ದೀರಿ. ನಿಮಗೆ ಅಭಿನಂದನೆಗಳು, ನೀವು ಆಶಯಗಳನ್ನು ಇಟ್ಟುಕೊಂಡಿದ್ದೀರಿ ಇದಕ್ಕೆ ದುಡ್ಡು ಎಲ್ಲಿಂದ ತರುತ್ತೀರಿ? ನೀವು ಇದನ್ನು ಹೇಗೆ ಜಾರಿಗೆ ಮಾಡುತ್ತೀರಿ? ಇದನ್ನು ಹೇಗೆ ತರುತ್ತೀರಿ ಇವರಿಗೂ ಹಾಗೂ ಮಾನ್ಯ ಮುಖ್ಯಮಂತ್ರಿಗಳಿಗೂ ಕೂಡ ಹೇಳಿದ್ದೇನೆ. ಈಗಲೂ ಕೂಡ ನಾನು ಬದ್ಧನಾಗಿದ್ದೇನೆ. ನನ್ನ ಪ್ರಶ್ನೆ ಏನೆಂದರೆ ಬಜೆಟ್ ಎಂದರೆ ಅದಕ್ಕೆ ಕೆಲವು ನಿಯಮಗಳು ಇವೆ. ಅದಕ್ಕೆ ಬದ್ದತೆ ಇದೆ. ಆ ಪದ್ದತಿಯ ಪ್ರಕಾರ ಬಜೆಟ್‌ನ್ನು ಮಂಡನೆ ಮಾಡಲಿಲ್ಲ ಎಂದು ನಾನು ಹೇಳಿರುವುದು. ನಾನು ನಿನ್ನೆ ಕೂಡ ಮಾತನಾಡುವಾಗ ಹೇಳಿದ್ದೇನೆ. ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ಹೇಳಿರುವುದನ್ನು ನಾನು ರಿಪೀಟ್ ಮಾಡುವುದಕ್ಕೆ ಹೋಗುವುದಿಲ್ಲ. ಈ ಪೂರಕ ಅಂದಾಜುಗಳು ಬರತಕ್ಕಂತಹ ಸಂದರ್ಭಗಳು ಮತ್ತು ಅವಶ್ಯಕತೆ ಬಹಳ ಮುಖ್ಯ. ಅಂತಹ ಪರಿಸ್ಥಿತಿ 20ನೇ ತಾರೀಖಿನಿಂದ ಈಚೆಗೆ ನಿರ್ಮಾಣವಾಯಿತಾ? 20ನೇ ತಾರೀಖು ಮಾನ್ಯ ಯಡಿಯೂರಪ್ಪನವರು ಬಜೆಟ್‌ನ್ನು ಮಂಡನೆ ಮಾಡಿದ್ದಾರೆ. ಇವತ್ತು 28ನೇ ತಾರೀಖು. ಈ 8 ದಿವಸಗಳಲ್ಲಿ ಯಾವುದಾದರೂ ಅಂತಹ ಸಂದರ್ಭ ಉಂಟಾಯಿತೇ? ಅಂತಹ ಪರಿಸ್ಥಿತಿ ನಿರ್ಮಾಣವಾಯಿತೆ? ಏಕೆ ಇಷ್ಟೆಲ್ಲಾ ಹಣ 1600 ಕೋಟಿ ರೂಪಾಯಿಗಳು ಪೂರಕ ಅಂದಾಜುಗಳು ಬಂದಿದೆ? ನನ್ನ ಅಭಿಪ್ರಾಯದಲ್ಲಿ this exactly shows not only financial indiscipline but it is an unplanned budget. ಇದಕ್ಕೆ ಯಾವುದೇ ರೀತಿಯಲ್ಲೂ ಪ್ಲಾನ್ ಆಗಿ ಬಜೆಟ್‌ನ್ನು ಮಾಡಲಿಲ್ಲ.

ಡಾ.ವಿ.ಎಸ್.ಆಚಾರ್ಯ(ವೈದ್ಯಕೀಯ ಶಿಕ್ಷಣ ಸಚಿವರು): ಮಾನ್ಯ ಶ್ರೀರಾಮರೆಡ್ಡಿ ಯವರು ಒಂದು ನಿಮಿಷ ಕುಳಿತುಕೊಂಡರೆ ಒಳ್ಳೆಯದು. ಮಾನ್ಯ ರೆಡ್ಡಿಯವರು ಬಜೆಟ್‌ನ್ನು ಇಟ್ಟ ನಂತರ ಇದು ಏನಾಯಿತು ಎಂದು ಕೇಳುತ್ತಿದ್ದಾರೆ. ಆದರೆ ನಾನು ಅವರ ಮಾಹಿತಿಗೋಸ್ಕರ ಹೇಳುತ್ತಿದ್ದೇನೆ. ಈಗ ಕೊಟ್ಟಿರುವಂತಹ ಪೂರಕ ಅಂದಾಜು ನಾಡಿದ್ದು ಮಾರ್ಚಿ 31ರವರೆಗೆ ಹಿಂದೆ

ಯೋಜನೆ ಮಾಡಿರುವಂತಹದ್ದು ಈಗ ಮಾನ್ಯ ಶ್ರೀರಾಮರೆಡ್ಡಿಯವರೇ, ನಿಮ್ಮ ಸಲುವಾಗಿ ಮಾಹಿತಿ ಹೇಳುತ್ತಿದ್ದೇನೆ. ಇದು ನಾಡಿದ್ದು ಮಾರ್ಚಿ 31 ರವರೆಗೆ ಹಿಂದಿನ ವರ್ಷ ಮಾನ್ಯ ಸಿದ್ದರಾಮಯ್ಯನವರು ಮಂಡಿಸಿದಂತಹ ಬಜೆಟ್‌ನಲ್ಲಿ ಯೋಜನೆಗೆ ಮಾಡಿರುವಂತಹ ಖರ್ಚುಗಳು. ಜಮೆಗಳು ಇದರ ಬಗ್ಗೆ ಪೂರಕ ಅಂದಾಜಿನಲ್ಲಿ ಕೊಟ್ಟಿದ್ದಾರೆ. ಮೊನ್ನೆ ಯಡಿಯೂರಪ್ಪನವರು ಮಂಡನೆ ಮಾಡಿರುವುದು ನಾಡಿದ್ದು 1ನೇ ತಾರೀಖಿನ ನಂತರ ಜಾರಿಗೆ ಬರುವಂತಹದ್ದು. ದಯವಿಟ್ಟು ತಾವು ಇದನ್ನು ಗಮನಿಸಬೇಕು. ಹಾಗಾಗಿ ಸರ್ಕಾರ ಕಂಟಿನ್ಯೂಯಸ್ ಬಾಡಿ, ತಮಗೆ ಗೊತ್ತಿಲ್ಲವೇ? ಆದರೆ ಸರ್ಕಾರಕ್ಕೆ ಪ್ರತಿವರ್ಷ ಇದು ಈ ಬಜೆಟ್ ಮಂಡನೆ ಮಾಡಿರುವಂತಹ ಸಮಯದಲ್ಲಿ ಮತ್ತೆ ಮಾರ್ಚಿ 31ರ ಆ ವರ್ಷದ ಒಳಗಡೆ ಹಿಂದೆ ನಿರೀಕ್ಷೆ ಮಾಡಿರುವಂತಹ, ಆದರೆ ಖರ್ಚು ಮಾಡಲೇಬೇಕಾದಂತಹ ತಮ್ಮೆಲ್ಲರ ಆ ವರ್ಷದ ಅವಧಿಯಲ್ಲಿ ಬೇಡಿಕೆಯನ್ನು ಸಲ್ಲಿಸಿರುವುದನ್ನು ಪೂರೈಸಲಿಕ್ಕೆ ಮಾಡಿರುವಂತಹ ಪ್ರಯತ್ನದ ಫಲವಾಗಿ ಆಗಿರುವಂತಹ ಖರ್ಚುಗಳನ್ನು ಹೊಂದಾಣಿಕೆ ಮಾಡಿಕೊಳ್ಳುವಂತಹದರ ಬಗ್ಗೆ ಮಂಡನೆ ಮಾಡಿದ್ದಾರೆ. ತಾವು ದಯವಿಟ್ಟು ಅದನ್ನು ಗಮನಿಸಬೇಕು.

ಶ್ರೀ ಜೆ.ಪಿ. ಶ್ರೀರಾಮರೆಡ್ಡಿ : ಬಜೆಟ್‌ನ್ನು ಹೊಸದಾಗಿ ಮಾಡಿದಾಗ ಇದೆಲ್ಲಾ ಆಗುತ್ತದೆ. ನಾನು ನೀವು ಹೇಳಿದ್ದಕ್ಕೆ ಉದಾಹರಣೆಯನ್ನು ಹೇಳುತ್ತೇನೆ. ಮಾನ್ಯ ಅಚಾರ್ಯರವರಿಗೆ, ಮಸ್ತಕಾಭಿಷೇಕ ಬರುತ್ತದೆಂದು ನೀವು ಬಜೆಟ್ ಮಾಡುವಾಗ ನಿಮಗೆ ಗೊತ್ತಿರಲಿಲ್ಲವೇ? ಮಾನ್ಯ ಸಿದ್ದರಾಮಯ್ಯನವರಿಗೆ ಆಗ 100 ಕೋಟಿ ರೂಪಾಯಿಗಳನ್ನು ತೆಗೆದು ಇಟ್ಟಿದ್ದಾರೆ ಮಸ್ತಕಾಭಿಷೇಕಕ್ಕೆಂದು 100 ಕೋಟಿ ರೂಪಾಯಿಗಳನ್ನು ಅವತ್ತು ಸಿದ್ದರಾಮಯ್ಯನವರು ಬಜೆಟ್‌ನಲ್ಲಿ ತೆಗೆದಿಟ್ಟಿದ್ದರು. ಹೌದೋ ಅಥವಾ ಇಲ್ಲವೋ? ಅದಾದ ಮೇಲೆ ಮತ್ತೆ ಖರ್ಚು ಆಗುತ್ತದೆ. ನೀವು ಖರ್ಚಾಗಿರುವುದನ್ನು ಸೇರಿಸುತ್ತಿದ್ದೀರಿ 100 ಕೋಟಿ ರೂಪಾಯಿಗಳನ್ನು ಏನೇನು ಖರ್ಚು ಮಾಡಿದ್ದೀರಿ ಎಲ್ಲಿ ಮಾಡಿದ್ದೀರಿ ಹೇಳತಕ್ಕಂತಹ ವಿವರಗಳನ್ನು ಕೊಟ್ಟು ಆಕಸ್ಮಾತ್ ಆ 100 ಕೋಟಿ ರೂಪಾಯಿಗಳು ಸಾಕಾಗಲಿಲ್ಲ ಎನ್ನುವ ಕಾರಣಕ್ಕೋಸ್ಕರ ಇದು ಬಂದಿದೆ ಈ ರೀತಿಯಾಗಿ ತಂದಿದ್ದೇವೆ ಎಂದು ಹೇಳಿದರೆ ಅದನ್ನು ಒಪ್ಪ ಬಹುದು. Everybody has to agree. ಈ ಬಡ್ಜೆಟ್ ಅನ್ನು ಸಿದ್ಧರಾಮಯ್ಯ ಅವರು ತಯಾರು ಮಾಡುವಾಗಲೇ 100 ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೀರಿ. Was it planned or unplanned; was it definitely planned? According to me, ಆ ಪ್ಲಾನ್ ಮಾಡುವಾಗ ಮಹಾಮಸ್ತಕಾಭಿಷೇಕ ಬರುತ್ತದೆಂದು ಗೊತ್ತಾದಾಗ ನೀವು ಈ ಅಡಿಷನಲ್ ಎಕ್ಸ್‌ಪೆಂಡಿಚರ್ ಬರಬಹುದು, ಎಂದರೆ 100 ಕೋಟಿ ರೂಪಾಯಿಗಳನ್ನು ಯಾವ ರೀತಿಯಲ್ಲಿ ತೆಗೆದುಕೊಂಡಿರಿ, ಯಾವ ಯಾವ ಬಾಬತ್ತಿಗೆ ತೆಗೆದಿರಿಸಿದಿರಿ. ಅದನ್ನು ಪ್ಲಾನ್ ಮಾಡುವಾಗ ಮಹಾಮಸ್ತಕಾಭಿಷೇಕಕ್ಕೆ ಇಷ್ಟಿಷ್ಟು ಖರ್ಚಾಗುತ್ತದೆ ಎಂದು ಅವತ್ತೇ ಏಕೆ ನೀವು ಪ್ಲಾನ್ ಮಾಡಲಿಲ್ಲ? ಅವತ್ತೇಕೆ ಪ್ಲಾನ್ ಮಾಡಲಿಲ್ಲ ಎಂದರೆ 100 ಕೋಟಿ ರೂಪಾಯಿಗಳನ್ನು ಮಹಾಮಸ್ತಕಾಭಿಷೇಕಕ್ಕೆ ಬಡ್ಜೆಟ್‌ನಲ್ಲಿ ಏನು ತೆಗೆದಿಟ್ಟರು, Afterthought ಏನೇನು ಮಾಡಬೇಕು ಎಂದು ಬಂದಿದೆ. Afterthought ಎಂದರೆ ಹೇಗೆ? It is a personal whims, afterthoughts means, every body, anybody, it is a personal whims afterthoughts ಬರುವುದು, ಆ personal whims ಗೋಸ್ಕರ ನೀವು ಖರ್ಚು ಮಾಡುವುದನ್ನು ಹೇಗೆ ಇವತ್ತು ನಾವು ಒಪ್ಪಬೇಕು? ಇದೇರೀತಿಯಲ್ಲಿ ಬೇರೆ

ಇಲಾಖೆಗಳಿಗೆ ಏನೇನು ಕೊಟ್ಟಿದ್ದೀರಿ ಎಂಬುದನ್ನು ನೋಡೋಣ ಲೋಕೋಪಯೋಗಿ ಇಲಾಖೆಯನ್ನು ತೆಗೆದುಕೊಳ್ಳಿ, ಇದು ಮಹಾಮಸ್ತಕಾಭಿಷೇಕದ್ದಾಯಿತು, It is an after-thought expenditure ಅಂದರೆ self-whims ಅದು; ಹೌದು, ಮಹಾಮಸ್ತಕಾಭಿಷೇಕಕ್ಕೆ ನೂರು ಕೋಟಿ ರೂಪಾಯಿಗಳನ್ನು ತೆಗೆದಿಟ್ಟರಲ್ಲಾ ಯಾವ ಆಧಾರದ ಮೇಲೆ ತೆಗೆದಿಟ್ಟಿರಿ, ಯಾವ್ಯಾವುದಕ್ಕೆಂದು ಎಷ್ಟೆಷ್ಟು ಖರ್ಚು ಆಗುತ್ತದೆಂದು ಲೆಕ್ಕ ಹಾಕಿ ತಾನೇ ನೀವು ನೂರು ಕೋಟಿ ತೆಗೆದಿಟ್ಟಿರುವುದು? ಅದಾದ ಮೇಲೆ ಮತ್ತೆ ಎಕ್ಸಟ್ರಾ ಖರ್ಚಾಗಿದೆ, ಆ ಎಕ್ಸಟ್ರಾ ಖರ್ಚು ಮಾಡುವ ಬಗ್ಗೆ ನಿಮಗೆ ನಿಜವಾಗಿಯೂ ಮೊದಲೇ ಯೋಜನೆ ಇದಿದ್ದರೆ ನೂರು ಕೋಟಿಗೆ ಬದಲು ನೂರೈವತ್ತು ಕೋಟಿ ರೂಪಾಯಿಗಳನ್ನು ತೆಗೆದಿರಿಸುತ್ತಿದ್ದಿರಿ, ಆಗ ಅದು ಪ್ಲಾನ್ಡ್ ಬಜ್ಜೆಟ್ ಆಗುತ್ತಿತ್ತು. ಆದರೆ ಹಾಗೆ ತೆಗೆದಿಡಲಿಲ್ಲ, ಲೋಕೋಪಯೋಗಿ ಇಲಾಖೆಯನ್ನು ತೆಗೆದುಕೊಳ್ಳಿ, ಆ ಇಲಾಖೆಯಲ್ಲಿ ನೀವೀಗ ಪೂರಕ ಅಂದಾಜುಗಳನ್ನು ಕೇಳಿದ್ದೀರಿ. ಕರ್ನಾಟಕ ರಾಜ್ಯದಲ್ಲಿ P.W.D is one of the oldest departments. ಹೌದಾ, ಇನ್ನೈದು ವರ್ಷಕ್ಕೆ ಏನೇನಾಗಬೇಕು ಎಂಬ ಬಗ್ಗೆ ನಿಮಗೆ ಲೆಕ್ಕ ಇರುತ್ತದೆ, ಬರೇ ಈ ವರ್ಷದ್ದು ಮಾತ್ರವಲ್ಲ, ಇನ್ನೈದು ಹತ್ತು ವರ್ಷಕ್ಕೆ ಏನಾಗಬೇಕು ಎಂಬ ಬಗ್ಗೆ ಉದಾಹರಣೆಗೆ ಮಾಧುಸ್ವಾಮಿಯವರು ಹೇಳಿದರು, ಮೂಡಿಗೆರೆ, ಮುಳಬಾಗಿಲು, ಚಿತ್ತೂರು ರಸ್ತೆ ಎಂದು ಹೇಳಿದರೆ, ಬೆಂಗಳೂರು ಮೇಲೆ ಬರತಕ್ಕಂಥ ಸಾರಿಗೆ ಒತ್ತಡವನ್ನು ತಪ್ಪಿಸಬೇಕೆಂದು ಹೇಳಿ ಅದನ್ನು ನ್ಯಾಷನಲ್ ಹೈವೇ ಆಗಿ ಕನ್ವರ್ಟ್ ಮಾಡಿ ಅಭಿವೃದ್ಧಿ ಮಾಡಬೇಕೆಂದು ಮೂರು ವರ್ಷಗಳಿಂದ ಪ್ಲಾನ್‌ನಲ್ಲಿದೆ. ಅದಕ್ಕೆ ಕೇಂದ್ರ ಸರ್ಕಾರ ಹಣ ಕೊಟ್ಟಿದ್ದಾರೆ. ಮೂಡಿಗೆರೆ ಚಿತ್ತೂರು ವಯಾ ಮುಳಬಾಗಿಲು, ಶಿರಾ ಇದರ ಮೇಲೆ, ಏನು ಮೂರು ವರ್ಷದ ಹಿಂದೆ ಮಾಡಿರುವ ಯೋಜನೆಗೆ ನೀವು ಇವತ್ತು ಅಲ್ಲೆಲ್ಲೋ ಐದು ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದೇವೆ ಎಂದು ಹೇಳಿದರೆ, ಹೇಗೆ ಐದು ಕೋಟಿ ರೂಪಾಯಿಗಳಿಗೆ ಮೂಡಿಗೆರೆ ಮುಳಬಾಗಿಲು ರಸ್ತೆಯನ್ನು ಮಾಡಲಿಕ್ಕಾಗುತ್ತದೆಯೇ? ಚಿತ್ತೂರು ರಸ್ತೆ ಮಾಡಲಿಕ್ಕಾಗುತ್ತದೆಯೇ? ಹೋಗಲಿ ಆ ಐದು ಕೋಟಿ ರೂಪಾಯಿಗಳಲ್ಲಿ ಚಿಕ್ಕನಾಯಕನಹಳ್ಳಿಯಿಂದ ಶಿರಾಗೆ ರಸ್ತೆಯನ್ನು ಮಾಡಲಿಕ್ಕಾಗುತ್ತದೆ? ಆದರೆ how it was unplannned?. ಅದು ಏನೂ ಇಲ್ಲದೇನೇ ನೀವು ಪೂರಕ ಅಂದಾಜಿನ ಮೇಲೆ ಹಣ ಕೊಡಿ, ಹಣ ಕೊಡಿ ಎಂದು ಹೇಳಿಬಿಟ್ಟರೆ Finally, it will lead to financial indiscipline, or financial crisis. ಯಾರೋ ಮಾಡಿದ ತಪ್ಪಿಗೆ ಈಶ್ವರಪ್ಪನವರೇ ನೀವು ತಲೆ ದಂಡ ಕೊಡಬೇಕಾಗುತ್ತದೆ. ನಾವು ಇದನ್ನೆಲ್ಲಾ ನೀವು ಮಾಡಿರುವ ತಪ್ಪು ಎಂದು ಹೇಳುತ್ತಿಲ್ಲ, ಹಿಂದಿನ ಸರ್ಕಾರಗಳು ಮಾಡಿರುವಂಥ unplannned way of Budget ಗೆ ನೀವು ತಲೆದಂಡ ಕೊಡಬೇಕಾದಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ, ಆದ್ದರಿಂದ ನೀವೂ ಕೂಡ ಇದನ್ನು ಮುಂದಕ್ಕೆ ಮುಂದುವರೆಸಬೇಡಿ ನಾನು ನಿನ್ನೆ ಬಜ್ಜೆಟ್‌ನ ಮೇಲೆ ಮಾತನಾಡುವಾಗ ಅದನ್ನೇ ಹೇಳಿದ್ದು. ನೀವು ಯಾವುದಾದರೂ ಒಂದು ಪ್ಲಾನ್ ಡೆವಲಪ್ ಮಾಡುವಾಗ ಅದಕ್ಕೆ ಒಂದು ಸ್ಪಷ್ಟವಾದಂಥ ಯೋಜನೆಯಿರಬೇಕು. ಆ ಯೋಜನೆಗೆ ಇಷ್ಟು ಖರ್ಚಾಗುತ್ತದೆಂದು ಬಜ್ಜೆಟರಿ ಸಪೋರ್ಟ್ ಅನ್ನು ಕೊಟ್ಟು ಹಣ ಇಷ್ಟೆಂದು ತೆಗೆದಿಡಬೇಕು. ಇದಕ್ಕಾಗಿ ಪ್ರತ್ಯೇಕವಾಗಿ ಹಣವನ್ನು ತೆಗೆದಿಡದೇ ಯೋಜನೆ ಮಾಡದರೆ ಇದೇ ಪರಿಸ್ಥಿತಿ ಬರುತ್ತದೆ ಅಥವಾ ಆ ಯೋಜನೆಯನ್ನು ಸಹ ಸರಿಯಾಗಿ ಮಾಡದಿದ್ದರೆ

ಇದೇ ಪರಿಸ್ಥಿತಿ ಬರುತ್ತದೆ, ಆದರೆ ಇದು ಆರೋಗ್ಯಕರವಾದಂಥ ಆರ್ಥಿಕ ಬೆಳವಣಿಗೆ ಸೂಚನೆ ಅಲ್ಲ, ಪೂರಕ ಅಂದಾಜುಗಳು 1600 ಕೋಟಿ ರೂಪಾಯಿಗಳನ್ನು ಸುನಾಮಿಯಂಥಾದ್ದು ಏನಾದರೂ ಪ್ರಕೃತಿ ವಿಕೋಪ ಬಂದು ಬಿಟ್ಟರೆ ಏನೂ ಮಾಡಲಿಕ್ಕಾಗುವುದಿಲ್ಲ ಖರ್ಚು ಮಾಡಬೇಕಾಗುತ್ತದೆ, ಸುನಾಮಿ ಅಥವಾ ಭೂಕಂಪ ಬೇರೆ ಏನಾದರೂ if immediately happens, we are all helpless in natural calamities, ನಾವು ಅದನ್ನು ಮಾಡಲೇಬೇಕಾಗುತ್ತದೆ. it is everybodyies duty. But, ಇದು ನಿಮ್ಮ ಇಲಾಖೆಯ ಇನ್‌ಎಫಿಷಿಯೆನ್ಸಿ; ಮತ್ತೆ ಈಶ್ವರಪ್ಪನವರೇ ನಿಮಗೆ ಗೊತ್ತಿದೆ, ಎಲ್.ಓ.ಸಿ.ಗಳನ್ನು ಹೇಗೆ ಬಿಡುಗಡೆ ಮಾಡುತ್ತಿದ್ದಾರೆ? ಇಲ್ಲಿಂದ ಪರ್ಸನಲ್ ಆಗಿ ಬರೆಕೊಂಡು ಹೋಗಿಬಿಡುತ್ತಾರೆ. ಇಂಥ ಹೊತ್ತಿಗೆ ನೀನು ಹಣ ಕೊಡಬೇಕು, ಎಂದು ಕಂಟ್ರಾಕ್ಟರ್ಸ್ ಇಲ್ಲಿಂದ ಬರೆಸಿಕೊಂಡು ಹೋಗಿಬಿಡುತ್ತಾರೆ. ಇಲ್ಲಿಂದಲೇ ಬರೆಸಿಕೊಂಡು ಹೋಗಿ ಅಲ್ಲಿರುವ ಎಕ್ಸಿಕ್ಯುಟೀವ್ ಇಂಜಿನಿಯರ್ಸ್‌ಗೆ ಕೊಟ್ಟುಬಿಡುವುದು. ಆಗ ಆ ಎಕ್ಸಿಕ್ಯುಟೀವ್ ಇಂಜಿನಿಯರ್ ಏನು ಮಾಡುತ್ತಾರೆ ಹೈಯರ್ ಆಫೀಸರ್ಸ್ ಬರೆದುಕೊಟ್ಟ ಮೇಲೆ ನಾನೇನು ಮಾಡುವುದು? ಯಾರಿಗೆ ಇನ್‌ಫ್ಲುಯೆನ್ಸ್ ಇರುತ್ತದೆ ಅವರಿಗೆ ಹಣ ಎಲ್.ಓ.ಸಿ. ಸಿಗುತ್ತದೆ. ಯಾರಿಗೆ ಇನ್‌ಫ್ಲುಯೆನ್ಸ್ ಇರುವುದಿಲ್ಲ ಅವರಿಗೆ ಎಲ್.ಓ.ಸಿ. ಸಿಗುವುದಿಲ್ಲ. ಅದರ ಪರಿಣಾಮವೇನಾಗುತ್ತದೆ ನೀವೇ ಹೇಳಿ? ಆಗ ಎಲ್ಲಾ ಉಲ್ಲಂಘನೆ ಮಾಡಬೇಕಾಗುತ್ತದೆ, ಇಲ್ಲಿಂದ ಎಲ್.ಓ.ಸಿ ಯನ್ನು ನೀಡಿ ಇಂಥವರಿಗೆ ಹಣ ಬಿಡುಗಡೆ ಮಾಡುತ್ತಿದ್ದೇವೆ ಎಂದು ಹೇಳಲಿಕ್ಕೆ ಅದು ಯಾವುದೇ ನಿಯಮದಲ್ಲಿಲ್ಲ, ಒಂದೊಂದು ಡಿವಿಷನ್‌ಗೆ ಇಷ್ಟು ಎಂದು ಬಿಡುಗಡೆ ಮಾಡಬೇಕೆಂಬುದಷ್ಟೇ ಇರುವಂತಹದ್ದು, ಯಾವ ಊರಿಗೆ ಎಷ್ಟೆಂದು ಅಲ್ಲಿ ಎಕ್ಸಿಕ್ಯುಟೀವ್ ಇಂಜಿನಿಯರ್ ಸೀನಿಯಾರಿಟಿ ಪ್ರಕಾರ ಅಥವಾ ಅವರ ಒಂದು ನಾರ್ಮ್ಸ್ ಇಟ್ಟುಕೊಂಡು ತೀರ್ಮಾನ ಮಾಡಬೇಕು that is the norms, ಆದರೆ ಇಲ್ಲಿಂದ ಒಂದು ಪ್ರತ್ಯೇಕವಾದ ಕೆಲಸಕ್ಕೆ ನಾನು ಬಿಡುಗಡೆ ಮಾಡುತ್ತೇನೆಂದು ಹೇಳಿದರೆ ಇದು ಯಾವ ನಿಯಮಕ್ಕೆ ಬರುತ್ತದೆ? ಎಲ್ಲಾ ನಿಯಮಗಳು ಉಲ್ಲಂಘನೆಯಾದಂತೆಯೇ. ಇಂತಹ ಪರಿಸ್ಥಿತಿ ನಿರ್ಮಾಣವಾಗಿ ಇವತ್ತು ಇಂಥ ಅರಾಜಕತೆ ವ್ಯವಸ್ಥೆಯನ್ನು ಆರ್ಥಿಕ ಇಲಾಖೆಯಲ್ಲಿ ತಂದಿಟ್ಟು 1600 ಕೋಟಿ ರೂಪಾಯಿಗಳ ಪೂರಕ ಅಂದಾಜುಗಳೆಂದರೆ ಏನು ಗತಿ? ಅಂದರೆ ನಿಮ್ಮ ಅಕ್ರಮ ವ್ಯವಹಾರಗಳು, ನಿಮ್ಮ ಕಾನೂನು ಬಾಹಿರ ವ್ಯವಹಾರಗಳಿಗೆಲ್ಲಾ ಈ ಸದನ ಅನುಮತಿಯನ್ನು ಕೊಡಬೇಕೇ? ಅದಕ್ಕಾ ನಾವಿರುವುದು? ಇಂಥ ಕಾನೂನು ಬಾಹಿರವಾದಂಥ ಎಕ್ಸ್‌ಪೆಂಡಿಚರ್ಸ್‌ಗೆ ಅಕ್ರಮವಾದಂಥ ಎಕ್ಸ್‌ಪೆಂಡಿಚರ್ಸ್‌ಗೆ ಅನುಮತಿಯನ್ನು ಕೊಡಲಿಕ್ಕೆ ನಾವೆಲ್ಲಾ ಇಲ್ಲಿದ್ದೇವೆಯೇ? ಇಂಥ ಪರಿಸ್ಥಿತಿಯನ್ನು ದಯವಿಟ್ಟು ಈ ಸದನಕ್ಕೆ ತರಬಾರದು. ಇದರಿಂದ ಈ ರಾಜ್ಯಕ್ಕೆ ಭಾರಿ ಅನಾಹುತವಾಗುವಂತಹ ಅನಾರೋಗ್ಯಕರ ಆರ್ಥಿಕ ವ್ಯವಸ್ಥೆಯ ಬೆಳವಣಿಗೆಯಾಗುತ್ತದೆ. ಆದ್ದರಿಂದ ಇನ್ನು ಮುಂದೆ ಇಂಥದ್ದಕ್ಕೆ ದಯವಿಟ್ಟು ಅವಕಾಶವನ್ನು ಮಾಡಿಕೊಡಬೇಡಿ ಎಂದು ನಾನು ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತಾ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ) : 2005-06ನೇ ಮೂರನೇ ಕಂತಿನ ಪೂರಕ ಅಂದಾಜನ್ನು ಒಪ್ಪಿಗೆಗಾಗಿ ಸದನಕ್ಕೆ ಮಾನ್ಯ ಉಪ ಮುಖ್ಯಮಂತ್ರಿಗಳು ಇವತ್ತು ಮಂಡಿಸಿದ್ದಾರೆ. ಸಂವಿಧಾನದ 250ನೇ ಕಲಮಿನ ಪ್ರಕಾರ ಈ ಅನುದಾನವನ್ನು ಒಪ್ಪಿಗೆ ತೆಗೆದುಕೊಳ್ಳಲಿಕ್ಕೆ ಅವರಿಗೆ

ಕಾನೂನಿನ ಅವಕಾಶವಿದೆ, ಅದಕ್ಕೆ ಸದನದ ಒಪ್ಪಿಗೆಯನ್ನು ತೆಗೆದುಕೊಳ್ಳಲಿಕ್ಕೆ ಮಂಡಿಸಿದ್ದಾರೆ. ಮಾನ್ಯ ಶ್ರೀರಾಮರೆಡ್ಡಿ, ಮಾಧುಸ್ವಾಮಿಯವರು ಮತ್ತು ಇನ್ನಿತರ ನಮ್ಮ ಕೆಲವು ಸದಸ್ಯರು ಈ ವಿಚಾರದಲ್ಲಿ ಮಾತನಾಡಿದ್ದಾರೆ, ಅವರು ಮಾತನಾಡಿದಂಥ ಎಲ್ಲಾ ವಿಚಾರಗಳನ್ನು ಒಪ್ಪಲಿಕ್ಕೆ ಅಗುವುದಿಲ್ಲ. ಏಕೆಂದರೆ ಪೂರಕ ಅಂದಾಜುಗಳನ್ನು ಏತಕ್ಕೆ ಮಂಡಿಸುತ್ತಾರೆಂದರೆ ಕೆಲವೊಮ್ಮೆ ಕೇಂದ್ರ ಸರ್ಕಾರದಿಂದ ಹಣ ಬರುತ್ತದೆ. ಪ್ಲಾನ್ಡ್ ಸ್ಕೀಮ್‌ನಲ್ಲಿ 15, 20, 80% ಹೆಚ್ಚುವರಿಯಾಗಿ ಹಣ ಕೊಡುತ್ತಾರೆ. ಆ ಹಣ ಬಂದಂಥ ಸಂದರ್ಭದಲ್ಲಿ ರಾಜ್ಯ ಸರ್ಕಾರ ಅದಕ್ಕೆ ಹೆಚ್ಚಿನ ಹಣವನ್ನು ಕೊಟ್ಟು ಆ ಯೋಜನೆಗಳನ್ನು ಜಾರಿಗೊಳಿಸಬೇಕಾಗುತ್ತದೆ, ಆ ಸಂದರ್ಭದಲ್ಲಿ ಬಡ್ಜೆಟ್ ತಯಾರಿಸುವ ಸಂದರ್ಭದಲ್ಲಿ ಇದೆಲ್ಲಾ ಇರುವುದಿಲ್ಲ. ಹೀಗಾಗಿ ಕೇಂದ್ರಸರ್ಕಾರದಿಂದ ಬರುವಂಥ ಯೋಜನೆಗಳ ಲಾಭವನ್ನು ರಾಜ್ಯ ಸರ್ಕಾರ ಬಿಡುವುದಕ್ಕಾಗುವುದಿಲ್ಲ. ಅಂಥ ಸಂದರ್ಭದಲ್ಲಿ ಅನಿವಾರ್ಯವಾಗಿ ಅದಕ್ಕೆ ಒಪ್ಪಿಗೆ ಪಡೆದುಕೊಂಡು ಮುಂದೆ ಅದನ್ನು ಸದನದಲ್ಲಿ ಮಂಡಿಸಿ ಅದರ ಒಪ್ಪಿಗೆಯನ್ನು ತೆಗೆದುಕೊಂಡು ಜಾರಿಗೊಳಿಸಿದ್ದನ್ನು ರ್‍ಯಾಟಿಫೈ ಮಾಡಿಕೊಳ್ಳಬೇಕಾಗುತ್ತದೆ. ಅಂಥದ್ದಕ್ಕೆ ನಾವು ಒಪ್ಪಿಗೆ ನೀಡಬೇಕಾಗುತ್ತದೆ. ಇದಕ್ಕಾಗಿಯೇ ಸಂವಿಧಾನದಲ್ಲಿ ಪೂರಕ ಅಂದಾಜುಗಳನ್ನು ಸದನದಲ್ಲಿ ಮಂಡಿಸಿ ಒಪ್ಪಿಗೆ ಪಡೆಯಲಿಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಆದರೆ ಕೆಲವು ಮಾತುಗಳನ್ನು ನಾನು ಒಪ್ಪುತ್ತೇನೆ, ಇವತ್ತು ಕೆಲವು ಯೋಜನೆಗಳನ್ನು ತಯಾರು ಮಾಡುತ್ತಾರೆ ಕೆಲವು ಕಟ್ಟಡಗಳನ್ನು ನಿರ್ಮಾಣ ಮಾಡುತ್ತಾರೆ, ಕೆಲವು ರಸ್ತೆಗಳನ್ನು ಮಾಡುತ್ತಾರೆ, ಇವುಗಳಿಗೆ ನಿರ್ದಿಷ್ಟವಾಗಿ ಇಂತಿಷ್ಟು ಹಣ ಬೇಕೆಂದು ಆಯಾಯ ಇಲಾಖೆಗಳಿಗೆ ಮೊದಲೇ ಗೊತ್ತಿರುತ್ತದೆ. ಆದರೆ ಅದನ್ನು ತಯಾರು ಮಾಡಿದಂಥ ಇಂಜಿನಿಯರ್‌ಗಳು, ಇಲಾಖೆಯ ಮುಖ್ಯಸ್ಥರು ಮತ್ತೆ ಅದನ್ನು ರಿವೈಸ್ಡ್ ಎಸ್ಟಿಮೇಟ್ ಎಂದು ಮಾಡಿ ಹಣವನ್ನು ಅನಾವಶ್ಯಕವಾಗಿ ಸ್ಪೆಂಡ್ ಮಾಡುತ್ತಾರೆ. ಇದರಿಂದ ನಿಜವಾಗಿಯೂ ಕೂಡ ಹಣ ಪೋಲಾಗುತ್ತದೆ. ಇಂಥದ್ದನ್ನು ತಾವು ನಿಲ್ಲಿಸಬೇಕಾಗುತ್ತದೆ. ಮತ್ತೆ ಅದರೊಂದಿಗೆ ಪ್ರಯಾಣ ಭತ್ಯೆ ಇಷ್ಟೊಂದು ಹೆಚ್ಚಾಗಿ ಏತಕ್ಕೆ ಬೇಕಾಗುತ್ತದೆ? ಉದಾಹರಣೆಗೆ ಮೈನರ್ ಇರಿಗೇಷನ್ ಡಿಪಾರ್ಟಮೆಂಟ್, ಆ ವಿಚಾರವನ್ನು ಇಲ್ಲಿ ಹೇಳಬೇಕಾಗುತ್ತದೆ, ಕೆಲವೊಂದು ಇಲಾಖೆಗಳಲ್ಲಿ ಅನಾವಶ್ಯಕವಾಗಿ ಪ್ರಯಾಣ ಭತ್ಯೆ ವೇತನದಲ್ಲಿ ಹೆಚ್ಚಳ ಎನ್ನುವ ಮಾತನ್ನು ಹೇಳಿದ್ದಾರೆ. ಇಲ್ಲಿ ನಾನು ಮೈನರ್ ಇರಿಗೇಷನ್ ಡಿಪಾರ್ಟಮೆಂಟಿನಲ್ಲಿ ಮುಖ್ಯ ಇಂಜಿನಿಯರ್ ಬಿಜಾಪುರ, ಇವರ ಕಚೇರಿಗೆ ಆಯವ್ಯಯದಲ್ಲಿ ಒದಗಿಸಿರುವ ಅನುದಾನವು ಸಾಕಾಗದೆ ಇರುವುದರಿಂದ ಪ್ರಯಾಣಭತ್ಯೆಯ ವೆಚ್ಚಕ್ಕಾಗಿ 40.00 ಲಕ್ಷ ರೂಪಾಯಿಗಳನ್ನು ಸೇರಿಸಲಾಗಿದೆ. ಅಂದರೆ ಚೀಫ್ ಇಂಜಿನಿಯರ್ ಪ್ರಯಾಣಕ್ಕಾಗಿ ಈ ಮೊದಲು ಎಷ್ಟು ಹಣವನ್ನು ಇಟ್ಟಿದ್ದಿರಿ? ಅಂದರೆ ಸುಮಾರು 10–20 ಲಕ್ಷ ರೂಪಾಯಿಗಳನ್ನು ಈ ಮೊದಲು ಕೊಟ್ಟಿರಬಹುದು. ಅಂದರೆ ಒಬ್ಬ ಚೀಫ್ ಇಂನಿಯರ್ ಒಂದು ವರ್ಷದಲ್ಲಿ 60–70 ಲಕ್ಷ ರೂಪಾಯಿಗಳನ್ನು ಪ್ರಯಾಣ ಭತ್ಯೆಗಾಗಿ ಖರ್ಚು ಮಾಡುತ್ತಾರೆ. ಮತ್ತೆ ಅಷ್ಟೇ ಅಲ್ಲ, ಇನ್ನೂ ಒಂದು ಬಾಬ್ತು ಸಂಖ್ಯೆ 7 ಮತ್ತು 8 ಬಿಜಾಪುರ ಎಗ್ಜಿಕ್ಯೂಟಿವ್ ಇಂಜಿನಿಯರ್ ಇವರಿಗೆ 8 ಲಕ್ಷ, ರೂಪಾಯಿ ಪ್ರಯಾಣ ಭತ್ಯೆಕ್ಕೆ ವೆಚ್ಚ ವಾಗುತ್ತದೆ. ಎಲ್ಲಿಗೆ ಹೋಗುತ್ತಾರೆ ಅವರು? 8 ಲಕ್ಷ, 60 ಲಕ್ಷ, 70 ಲಕ್ಷರೂ ಈ ರೀತಿ ಖರ್ಚುಮಾಡಿ ಎಲ್ಲಿಗೆ ಹೋಗುತ್ತಾರೆ ಅವರು? ಯಾವ ಊರಿಗೆ ಹೋಗುತ್ತಾರೆ? ಏತಕ್ಕೆ ಇಷ್ಟು ಖರ್ಚಾಗುತ್ತದೆ?

ಇದನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಸುಮ್ಮ ಸುಮ್ಮನೆ ಕೊಡುವುದಲ್ಲ. ದಯಮಾಡಿ ಮಾನ್ಯ ಅರ್ಥ ಮಂತ್ರಿಗಳು ಇಂತಹ ಅನಾವಶ್ಯಕವಾಗಿ ಏನು ಪೋಲಾಗುತ್ತಿದೆ ಇದನ್ನು ತಡೆಯಬೇಕು. ಮತ್ತೆ ಇದರ ಜೊತೆಗೆ ಮಾನ್ಯ ಅಧ್ಯಕ್ಷರೇ, ಇವತ್ತು ಪಶುಸಂಗೋಪನಾ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿ ವರ್ಗಕ್ಕೆ ವೇತನ ಮತ್ತು ಭತ್ಯೆಯನ್ನು ಪಾವತಿ ಮಾಡುವುದರ ಸಲುವಾಗಿ ಹೆಚ್ಚುವರಿಯಾಗಿ ಸುಮಾರು 8 ಕೋಟಿ 10 ಲಕ್ಷ ರೂ ಕೊಟ್ಟಿದ್ದಾರೆ. ಏಕೆ ಅವರಿಗೆ ವೇತನ ಮತ್ತು ಭತ್ಯೆಯನ್ನು ಮೊದಲೇ ಫಿಕ್ಸ್ ಮಾಡಿರುವುದಿಲ್ಲವೇ? ಏಕೆ ಹೆಚ್ಚುವರಿಯಾಗಿ ಕೊಡುತ್ತಿದ್ದೀರಿ? ಅದಕ್ಕೆ ತಾವು ಎಕ್ಸ್‌ಪ್ಲನೇಶನ್ ಕೊಟ್ಟಿಲ್ಲ. ಇಂತಹ ಅನಾವಶ್ಯಕವಾದಂತಹ ವೆಚ್ಚಗಳು ಏಕೆ ಬರುತ್ತವೆ? ನಾನ್ ಪ್ರೊಡಕ್ಟೀವ್ ಎಕ್ಸ್‌ಪೆಂಡಿಚರ್ ಏನಿವೆ ಅದರ ಬಗ್ಗೆ ಸಮಗ್ರವಾಗಿ ತಾವು ಹೇಳಬೇಕಾಗುತ್ತದೆ. ಅದರ ಬಗ್ಗೆ ದಯಮಾಡಿ ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳುತ್ತಾರೆ ಅಂತ ನಾನು ಅಪೇಕ್ಷೆ ಪಡುತ್ತಿದ್ದೇನೆ. ಮತ್ತು ಇದಾದ ಮೇಲೆ ಮಾನ್ಯ ಅಧ್ಯಕ್ಷರೇ, ಇವತ್ತು ಏನು ಇನ್ನೂ ಒಂದು ಅನಾವಶ್ಯಕವಾದಂತಹ ವೆಚ್ಚ ಡಿಪಾರ್ಟ್‌ಮೆಂಟ್ ಆಫ್ ಪರ್ಸನಲ್ ಅಡ್ಮಿನಿಸ್ಟ್ರೇಟಿವ್ ರಿಫಾರಮ್ಸ್, ನಲ್ಲಿ ಆಗುತ್ತದೆ ಬಾಬ್ತು ಸಂಖ್ಯೆ 18 ಮತ್ತು 20 ರಾಜ್ಯದ ವಿವಿಧ ಜಿಲ್ಲೆಗಳಡಿ ಭಾರಿ ವಾಹನಗಳ ನಿರ್ವಹಣೆಗಾಗಿ 51 ಲಕ್ಷ ರೂಪಾಯಿ. ಹೆಚ್ಚುವರಿಯಾಗಿ ಕೊಡುತ್ತಿದ್ದೀರಿ. ಈಗಾಗಲೇ ರಿಪೇರಿಗಾಗಿ ಡಿ ವಿ ಕಾರುಗಳು ಮತ್ತು ಇತರೇ ಕಾರುಗಳಿಗೆ ಸಾಕಷ್ಟು ಹಣ ಅದರಲ್ಲಿ ನೀಡಿದ್ದೀರಿ. ಆದರೆ ಅದೂ ಸಾಲುವುದಿಲ್ಲ ಅಂತ ಹೇಳಿ 51 ಲಕ್ಷ ರೂಪಾಯಿಗಳು, ಅಂದರೆ ಡಿ ವಿ ಕಾರುಗಳು ಎಷ್ಟು ಇದೆ. 27 ಜಿಲ್ಲೆ, ಅಂದರೆ ಸುಮಾರು 27 ರಿಂದ 30 ಕಾರು ಇರುತ್ತದೆ. ಆ ಕಾರಿನ ದುರಸ್ಥಿಗಾಗಿ 51 ಲಕ್ಷ ರೂಪಾಯಿ ಹೆಚ್ಚುವರಿಯಾಗಿ ಕೊಡುತ್ತಿದ್ದೀರಲ್ಲಾ, ಇದರಲ್ಲಿ ಬಹಳ ಮೋಸ ನಡೆಯುತ್ತಿದೆ. ರಿಪೇರಿ ಮಾಡದೇ ಕೆಲವು ಗ್ಯಾರೇಜುಗಳಿಗೆ ಹೋಗಿ ಬಿಲ್‌ಗಳನ್ನು ತೆಗೆದುಕೊಂಡು ಲಕ್ಷಾಂತರ ರೂಪಾಯಿ ಹಣ ಇವತ್ತು ಪೋಲಾಗುತ್ತಿದೆ. ಇದನ್ನು ತಡೆಯಬೇಕು. ಈ ವಾಹನ ದುರಸ್ತಿಗಾಗಿ ಏನು ಅನಾವಶ್ಯಕವಾದಂತಹ ಹಣ ವೆಚ್ಚವಾಗುತ್ತದೆ ಇದನ್ನು ತಡೆಯಬೇಕು. ಒಟ್ಟಾರೆ ನಾನು ಹೇಳುವುದು ಇಷ್ಟೇ....

ಶ್ರೀ ಡಿ ಆರ್ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಹಾರಾಷ್ಟ್ರ ಸರ್ಕಾರದಲ್ಲಿ ಈ ಡಿವಿ ಕಾರುಗಳು ಇವೆಲ್ಲಾ ಔಟ್ ಸೋರ್ಸ್ ಮಾಡುತ್ತಾರೆ. ತಾವು ಆ ಪದ್ಧತಿಯನ್ನು ಜಾರಿಗೆ ತರುತ್ತೀರಾ?

ಶ್ರೀ ಬಸವರಾಜ ರಾಯರೆಡ್ಡಿ : ಅದಕ್ಕೆ ಇದರ ಬಗ್ಗೆ ಗಂಭೀರವಾಗಿ ಸ್ವಲ್ಪ ಯೋಚನೆ ಮಾಡಿ. ನಾನ್ ಪ್ರೊಡಕ್ಟೀವ್ ಎಕ್ಸ್‌ಪೆಂಡಿಚರ್ ಏನಿದೆ, ಇದರ ಬಗ್ಗೆ ಬಹಳ ಗಂಭೀರವಾಗಿ ಯೋಚನೆ ಮಾಡಬೇಕು. ಮಾನ್ಯ ಅಧ್ಯಕ್ಷರೇ, ಇನ್ನೊಂದು ಮಾತು ಹೇಳುತ್ತೇನೆ, ಇನ್‌ಫ್ರಾಸ್ಟ್ರಕ್ಚರ್ ಡವಲಪ್‌ಮೆಂಟ್‌ನಲ್ಲಿ ಈ ಶೋಲಾಪುರ್-ಗದಗ ಗೇಜ್ ಕನ್‌ವರ್ಷನ್‌ಗೆ ಸುಮಾರು 20 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ ಬಹಳ ಸಂತೋಷ ಇದಕ್ಕೆ ಹೆಚ್ಚುವರಿಯಾಗಿ ಹಣ ಕೊಟ್ಟು ಅದರ ಗೇಜ್‌ಕನ್ ವರ್ಷನ್ ಮಾಡಬೇಕು. ಇಂತಹ ಯೋಜನೆಗಳಿಗೆ ಕೊಟ್ಟರೆ ನಮಗೆ ಬಹಳ ಸಂತೋಷವಾಗುತ್ತದೆ. ಇನ್ನೂ ಹಲವಾರು ಯೋಜನೆಗಳಿಗೆ ಕೊಟ್ಟಿದ್ದೀರಿ. ಈಗ ನಮ್ಮ ಸ್ನೇಹಿತರು ಗಾಲಿಯ ಮೇಲೆ ಅರಮನೆ ಅಂತ ಹೇಳಿದರಲ್ಲಾ, ಕೇಂದ್ರ ಸರ್ಕಾರ ಅದಕ್ಕೆ ಹಣ ಕೊಟ್ಟಿದೆ, ಪ್ರವಾಸೋದ್ಯಮ ಇಲಾಖೆಯ ಅಭಿವೃದ್ಧಿ ಅಗಲಿ ಎನ್ನುವ ದೃಷ್ಟಿಯಿಂದ ಕೇಂದ್ರ ಸರ್ಕಾರ ಅದಕ್ಕೆ

ಹಣ ಕೊಟ್ಟಿದೆ. ಅದಕ್ಕೆ ಮ್ಯಾಚಿಂಗ್ ಗ್ರ್ಯಾಂಟ್‌ನ್ನು ನೀವು ಕೊಡುತ್ತಿದ್ದೀರಿ. ಮತ್ತು ಅದರಿಂದ ಹಣ ವಾಪಸ್ಸು ಬರುತ್ತದೆ. ಅದರಲ್ಲಿ ಏನೂ ಸರ್ಕಾರಕ್ಕೆ ನಷ್ಟ ಇಲ್ಲ. ಹೀಗಾಗಿ ಅಂತಹ ಯೋಜನೆಗಳನ್ನು ನಾವು ಪ್ರೋತ್ಸಾಹಿಸಬೇಕಾಗುತ್ತದೆ. ಮಾನ್ಯ ಅರ್ಥ ಮಂತ್ರಿಗಳೇ, ಇದು ಈ ಪೂರಕ ಅಂದಾಜಿನಲ್ಲಿ ಸಂದರ್ಭ ಅಲ್ಲದಿದ್ದರೂ ಕೂಡ ಒಂದು ಮಾತನ್ನು ನಾನು ಹೇಳುತ್ತೇನೆ. ಏನು ಇನ್‌ಫ್ರಾಸ್ಟ್ರಕ್ಚರ್ ಸಲುವಾಗಿ ಈಗಾಗಲೇ ಕೇರೆಡ್‌ನಿಂದ ಕೆಲವು ರೈಲ್ವೆಗಳಿಗೆ ಹಣ ಕೊಡುತ್ತಿದ್ದೀರಿ, ಅದರಲ್ಲಿ ಉತ್ತರ ಕರ್ನಾಟಕದ, ಅದರಲ್ಲೂ ವಿಶೇಷವಾಗಿ ಹೈದ್ರಾಬಾದ್ ಕರ್ನಾಟಕಕ್ಕೆ ಒಂದೂ ಯೋಜನೆಗಳನ್ನು ತೆಗೆದುಕೊಂಡಿಲ್ಲ. ಒಂದೂ ಯೋಜನೆಗಳನ್ನು, ಕೇರೆಡ್ ನಿಂದ, ತೆಗೆದಕೊಂಡಿಲ್ಲ ನೋಡಿ ಈಗ ಬಾಂಬೆ ಕರ್ನಾಟಕದಲ್ಲಿ ಹುಬ್ಬಳಿ–ಅಂಕೋಲ, ಮತ್ತು ಗದಗ–ಶೋಲಾಪುರ್ ಹಣ ಕೊಟ್ಟಿದ್ದೀರಿ, ಇಲ್ಲಿ ಹಾಸನ–ಮಂಗಳೂರು ಕೊಟ್ಟಿದ್ದೀರಿ, ಬಳ್ಳಾರಿ ಜಿಲ್ಲೆಯ ಕೊಟ್ಟೂರು ಹರಿಹರಕ್ಕೆ ಕೊಟ್ಟಿದ್ದೀರಿ. ಆದರೆ ಹೈದ್ರಾಬಾದ್ ಕರ್ನಾಟಕ, ಬಳ್ಳಾರಿ ಹೈದ್ರಾಬಾದ್ ಕರ್ನಾಟಕ ಅಲ್ಲ. ಅದು ಮದ್ರಾಸ್–ಕರ್ನಾಟಕ, ಹೈದ್ರಾಬಾದ್ ಅಂದರೆ ಹೈದ್ರಾಬಾದ್ ನಿಜಾಮರು ನಾವು. ಮೂರು ಜಿಲ್ಲೆ. ಈಗ ಕೊಪ್ಪಳ ಒಂದು ಆಯಿತು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಗುಲ್ಬರ್ಗ ಯುನಿವರ್ಸಿಟಿ ಬೇಕು ಅಂದರೆ ಬಳ್ಳಾರಿ ಬೇಕು. ಅಂತ ಹೇಳುತ್ತಾರೆ. ಅಭಿವೃದ್ಧಿ ವಿಚಾರಕ್ಕೆ ಸಂಬಂಧಪಟ್ಟಂತೆ ಹೈದ್ರಾಬಾದ್ ಕರ್ನಾಟಕ ಬಳ್ಳಾರಿ ಅಲ್ಲ ಎನ್ನುವುದು ಸರಿಯಾದದ್ದು ಅಲ್ಲ. ಅದರೆ ಬಳ್ಳಾರಿ ಹೈದ್ರಾಬಾದ್ ಕರ್ನಾಟಕ ಅಲ್ಲ ಅಂದಿರಿ ತಾವು. ಮಾನ್ಯ ಅಧ್ಯಕ್ಷರೇ, ಹಿಂದೆ ನಮ್ಮ ಬಳ್ಳಾರಿ ಜಿಲ್ಲೆ ಕೂಡ ಅನಂತಪುರ, ಕಡಪ, ಕರ್ನೂಲ್ ಕೂಡ ನಿಜಾಮಶಾಹಿಯಲ್ಲಿತ್ತು.

ಶ್ರೀ ಬಸವರಾಜ ರಾಯರೆಡ್ಡಿ : ಇಲ್ಲ ಇಲ್ಲ.....

ಶ್ರೀ ಎಂ.ಪಿ. ಪ್ರಕಾಶ್ : ದಯಮಾಡಿ ಇತಿಹಾಸವನ್ನು ಸ್ವಲ್ಪ ಕೇಳಬೇಕು. 1799 ರಲ್ಲಿ ಟಿಪ್ಪು ಸುಲ್ತಾನ್ ಸತ್ತ ನಂತರ ನಾಲ್ಕನೇ ಮೈಸೂರು ಯುದ್ಧದ ನಂತರ ಯಾರಾದರೂ ಕೂಡ ಸಹಾಯ ಮಾಡಿದಂತಹವರಿಗೆ ಬ್ರಿಟೀಷ್‌ನವರು ಅವರಿಗೆ ಸಹಾಯ ಮಾಡಬೇಕಾಗಿತ್ತು ಅಥವಾ ಅವರಿಗೆ ಬಳುವಳಿಯನ್ನು ಕೊಡಬೇಕಾಗಿತ್ತು. ಅದರೆ ನಿಜಾಮಶಾಹಿ ಇಷ್ಟು ಗುಲಾಮಗಿರಿಯಲ್ಲಿದ್ದರೂ ಅವರಿಗೆ ಸಹಾಯ ಮಾಡಿ ಗೆದ್ದು ಬಂದಿದ್ದರೂ ಕೂಡ ಈ ನಾಲ್ಕು ಜಿಲ್ಲೆಗಳನ್ನು ನಿಜಾಮರು ಈಸ್ಟ್ ಇಂಡಿಯಾ ಕಂಪನಿಗೆ ಕೊಟ್ಟರು. ಅದಕ್ಕಾಗಿಯೇ ಅವನ್ನು ಸೀಡೆಡ್ ಡಿಸ್ಟ್ರಿಕ್ಟ್ಸ್ ಅಂತ ಕರೆದೆವು ಮೊಗಲರ ಕಾಲದಲ್ಲಿ ರಾಯಲಸೀಮೆ ಅಂತ ಕರೆಯುತ್ತಿದ್ದರು. ಬ್ಯಾಕ್ ಅಂತ. ಬಳ್ಳಾರಿ ಅನಂತಪುರ. ಕಡಪ, ಕರ್ನೂಲ್, ಬ್ಯಾಕ್ ಅಂತ ಹೇಳಿ, ಅದ್ದರಿಂದ ಮೊದಲಿನಿಂದಲೂ ಕೂಡ ನಿಜಾಮಶಾಹಿಯವರೇ ಆಗಿದ್ದೆವು. ನೀವು ಗುಲಾಮಗಿರಿಗೆ ಹೋಗಿ ನಿಜಾಮಶಾಹಿಗಳು ನಮ್ಮನ್ನು ಈಸ್ಟ್ ಇಂಡಿಯಾ ಕಂಪನಿಗೆ ಕಳುಹಿಸಿದಿರಿ. ಆದಾದ ಮೇಲೆ ಧರ್ಮಸಿಂಗ್‌ರವರ ನೇತೃತ್ವದಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಇದನ್ನು ಮತ್ತೆ ಹೈದ್ರಾಬಾದ್ ಅಭಿವೃದ್ಧಿ ಮಂಡಲಿಗೆ ಸೇರಿಸಿದೆವು. ಆದ್ದರಿಂದ ನೀವು ಕೃತಿಮವಾಗಿ ಮಾಡತಕ್ಕಂಥಾದ್ದು ಸರಿಯಾದುದು ಅಲ್ಲ.

ಶ್ರೀ ಬಿಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೇ, ನಾನು ಹೇಳುತ್ತಿರುವುದು ಇಷ್ಟೇ. ನಾನು ಹೇಳಿದ್ದು ನೀವು ನಮ್ಮ ಹಳೆಯ ಹೈದ್ರಾಬಾದ್ ಸಂಸ್ಥಾನಕ್ಕೆ ಸೇರಿಲ್ಲ, ಮದ್ರಾಸ್ ಪ್ರೆಸಿಡೆನ್ಸಿಯಲ್ಲಿದ್ದಿರಿ. ನಾನು ಅದಕ್ಕಿಂತ ಹಿಂದೆ ಹೋದರೆ ಕಾಗತಿ ಡೈನೆಸ್ಟಿಗೆ ಹೋಗುತ್ತೇವೆ. ಅಶೋಕ ಮೌರ್ಯರು ಒಟ್ಟಿಗೆ ಆಳಿದ್ದರು ಅದು ಅದಲ್ಲ. ನಾನು ಇತ್ತೀಚಿನ ದಿನಮಾನಗಳ ಬಗ್ಗೆ ಮಾತನಾಡುತ್ತೇನೆ. ನೀವು ಸಂಗಮ ಸಂಸ್ಕೃತಿಗೆ, ಹೋಗುತ್ತೀರಿ ಎಂಬುದು ನನಗೆ ಗೊತ್ತು. ಆ ಸಂಗಮ ಸಂಸ್ಕೃತಿ ಬಗ್ಗೆ ನಾನು ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಈಗ ಒಂದು ನೂರು, ಇನ್ನೂರು ಶತಮಾನಗಳ ಹಿಂದಕ್ಕೆ ಹೋದರೆ.........

ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಅವರು ಬುದ್ಧಿವಂತಿಕೆ ಮಾಡಿ ಹೈದ್ರಾಬಾದ್ ಅಭಿವೃದ್ಧಿ ಮಂಡಳಿಯೊಳಗೆ ತಮ್ಮ ಬಳ್ಳಾರಿ ಜಿಲ್ಲೆಯನ್ನು ಸೇರಿಸಿಕೊಂಡಿದ್ದಾರೆ. ಅದನ್ನು ಸಮರ್ಥನೆಮಾಡಿ ಮಾತನಾಡುತ್ತಾರೆ ತಪ್ಪೇನಿದೆ?

ಶ್ರೀ ಬಸವರಾಜ ರಾಯರೆಡ್ಡಿ : ಸಾರ್, ನಾನು ತಪ್ಪು ಅಂತ ಹೇಳಲಿಲ್ಲ. ಅದಕ್ಕೆ ಅಧ್ಯಕ್ಷರೇ, ಈ ಸಂದರ್ಭದಲ್ಲಿ ಒಂದು ಮಾತು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ ಹೈದ್ರಾಬಾದ್ ಕರ್ನಾಟಕ ಏನು ಈ ನಿಜಾಮಶಾಹಿ ಇದರಲ್ಲಿ ಬಹಳ ಹಿಂದುಳಿದ ಪ್ರದೇಶ ಇದೆ ಅಲ್ಲಿ ಎರಡು ಪ್ರಮುಖವಾದಂತಹ ರೈಲ್ವೆಗಳು ಒಂದು ಬೀದರ್-ಗುಲ್ಬರ್ಗ, ಇನ್ನೊಂದು ಮುನಿರಾಬಾದ್-ಮೆಹಬೂಬ್ ನಗರ ; ಬಹುಶಃ ಮುನಿರಾಬಾದ್ - ಮೆಹಬೂಬ್ ನಗರ ಅಂದ ಕೂಡಲೇ ಅದು ಕರ್ನಾಟಕದಲ್ಲಿ ಇಲ್ಲ ಅಂತ ಎಲ್ಲರೂ ತಿಳಿದುಕೊಂಡು ಬಿಡುತ್ತಾರೆ ಉತ್ತರ ಕರ್ನಾಟಕದಲ್ಲಿ ಬಹಳ ಪ್ರಮುಖವಾದಂತಹ ರೈಲ್ವೆ ಲೈನ್ ಯಾವುದಾದರೂ ಇದ್ದರೆ ಅದು ಮುನಿರಾಬಾದ್ - ಮೆಹಬೂಬ್‌ನಗರ ಈ ಬಾಂಬೇ ಕರ್ನಾಟಕ ಮತ್ತು ಹೈದ್ರಾಬಾದ್ ಕರ್ನಾಟಕ ಲಿಂಕ್ ಆಗುತ್ತದೆ. ಮತ್ತು ಕೊಪ್ಪಳ -ಗಂಗಾವತಿ, ಮಾನ್ವಿ, ಸಿಂಧನೂರು ಮುಖಾಂತರ ರಾಯಚೂರು ಥರ್ಮಲ್ ಪವರ್ ಸ್ಟೇಷನ್‌ನಿಂದ ಹೈದ್ರಾಬಾದ್‌ಗೆ ಹೋಗುತ್ತದೆ. ಈ ರೈಲ್ವೆ ಲೈನ್‌ಗೆ ತಾವು ರಾಜ್ಯ ಸರ್ಕಾರದಿಂದ ಒಂದು ಸಹಾಯಧನವನ್ನು ಮುಂದಿನ ವರ್ಷ ಕೊಡುವುದರ ಬಗ್ಗೆ ಕೂಡ ಚಿಂತನೆ ಮಾಡಬೇಕಾಗುತ್ತದೆ. ಇದು ಪೂರಕ ಅಂದಾಜುಗಳಿಗೆ ಸಂಬಂಧ ಇಲ್ಲದಿದ್ದರೂ ಕೂಡ ಕರ್ನಾಟಕ ಅಭಿವೃದ್ಧಿ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ ಕೇವಲ ತಾವು ಏನು ಈಗ ಶೋಲಾಪುರ - ಗದಗ ಹುಬ್ಬಳ್ಳಿ-ಅಂಕೋಲ, ಹಳೆಯ ಮೈಸೂರಿನ ಕೆಲವನ್ನು ತೆಗೆದುಕೊಂಡಿದ್ದೀರಿ ಅದಕ್ಕಿಂತ ಮುಖ್ಯವಾಗಿ ಈ ಎರಡು ಪ್ರಮುಖವಾದಂತಹ ರೈಲ್ವೆ ಲೈನ್‌ಗಳಿಗೆ ಮುಂದಿನ ಸಾರಿ ತಾವು ಹಣವನ್ನು ಕೊಡಬೇಕು ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಏಕೆಂದರೆ ಈಗ ಕೊಟ್ಟಿದ್ದನ್ನು ನಾನು ಪ್ರಶಂಸೆ ಮಾಡುತ್ತೇನೆ ಅದೇ ತರಹ ಮಾನ್ಯ ಅಧ್ಯಕ್ಷರೇ ಇನ್ನು ಕೊನೆಯದಾಗಿ ಈಗ ಏನು ಈ ಪೂರಕ ಅಂದಾಜುಗಳನ್ನು 1692 ಕೋಟಿ ರೂಗೆ ಮಂಡಿಸಿದ್ದಾರೆ, ಇದರಲ್ಲಿ ಬಹುತೇಕ ಕೆಲವು ಯೋಜನೆಗಳಿಗೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರದ ಹಣ ವಿನಿಯೋಗ ಮಾಡಲಿಕ್ಕೆ ಮಾಡಿದ್ದಾರೆ. ಹೀಗಾಗಿ ಇದರಲ್ಲಿ ನಾವು ಎಲ್ಲವನ್ನೂ ಟೀಕೆ ಮಾಡುವುದಕ್ಕೆ ಆಗುವುದಿಲ್ಲ. ಇವತ್ತು ನಾವು ವಿರೋಧಪಕ್ಷದಲ್ಲಿದ್ದೇವೆ ಅಂದ ಕೂಡಲೇ ಎಲ್ಲಾ ಟೀಕೆ ಮಾಡುವುದು ಅಲ್ಲ. ಇದರಲ್ಲಿ ಬಹುತೇಕ ನೂರಕ್ಕೆ ಎಂಬತ್ತರಷ್ಟು ಭಾಗ ಯೋಜನೆಗಳಿಗೆ ಸಂಬಂಧಿಸಿದ್ದು ಇದೆ, ಆದರೆ ಕೆಲವು ಕಡೆ

ಅನಿವಾರ್ಯವಾಗಿ ಈ ದುಂದುವೆಚ್ಚ ಮಾಡುವಂತಾದ್ದನ್ನು ಕಡಿಮೆ ಮಾಡಬೇಕು ಈ ಪ್ರಯಾಣ ಭತ್ಯೆ, ವೇತನಗಳು, ಅನಾವಶ್ಯಕವಾಗಿ ಏನು ನಾನ್ ಪ್ರೊಡಕ್ಟೀವ್ ಎಕ್ಸ್‌ಪೆಂಡಿಚರ್ ಇದೆ, ಅದಕ್ಕೆ ಕಡಿವಾಣವನ್ನು ಹಾಕಲಿಕ್ಕೆ ಮುಂದೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ ಎನ್ನುವಂತಹ ಮಾತನ್ನು ಹೇಳಿ ಈ ಪೂರಕ ಅಂದಾಜುಗಳಿಗೆ ಬಹುತೇಕ ನಾವೆಲ್ಲಾ ಒಪ್ಪಿಗೆ ನೀಡಬೇಕಾಗುತ್ತದೆ ಎನ್ನುವ ಮಾತನ್ನು ಹೇಳಿ ತಮಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ.ಎಸ್.ರಾಜೇಂದ್ರನ್ (ಕೆ.ಜಿ.ಎಫ್) : ಮಾನ್ಯ ಅಧ್ಯಕ್ಷರೆ, ಈಗ ಹಣಕಾಸಿನ ಮಂತ್ರಿಗಳು ಸ್ವಲ್ಪ ನೋಡಬೇಕು. ಕೋಲಾರ ಕ್ಷೇತ್ರದಲ್ಲಿ ರಿಸರ್ವ್ಡ್ ಕಾನ್‌ಸ್ಟಿಟ್ಯುಯೆನ್ಸಿ: ಎಂಪಿ, ಎಂಎಲ್‌ಎಗಳೆಲ್ಲಾ ಇದ್ದಾರೆ ಶೆಡ್ಯೂಲ್ಡ್ ಕಾಸ್ಟ್ ಜನ ಮೇಲೆ ಬರಲು ತಾವು ಕೊಟ್ಟಿರುವ ಹಣ 20 ಲಕ್ಷರೂಗಳನ್ನು ಖರ್ಚು ಮಾಡಿರುವುದು ಪೇಜ್ 10 ರಲ್ಲಿದೆ, ಶೆಡ್ಯೂಲ್ಡ್ ಕಾಸ್ಟ್ ಜನಕ್ಕೆ ಇಷ್ಟೆ ಮಂಡ್ಯದಲ್ಲಿ 36 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಎಲ್ಲಿ ಬಡವರಿದ್ದಾರೋ ಅಲ್ಲಿಗೆ ಹಣ ಕೊಡುವುದಿಲ್ಲ ಖರ್ಚು ಮಾಡುವುದಿಲ್ಲ. ಅಲ್ಲೂ ಕೂಡ ಬಡವರಿದ್ದಾರೆ, ನಾನು ಆರ್ಗಮೆಂಟ್ ಬಗ್ಗೆ ಮಾತನಾಡುವುದಿಲ್ಲ. ಮಂಡ್ಯದಲ್ಲೂ ಬಡವರಿದ್ದಾರೆ, ಮಂಡ್ಯದಲ್ಲಿ ಎಲ್ಲರೂ ಶ್ರೀಮಂತರಿದ್ದಾರೆಂದು ನಾನು ಹೇಳಲಿಲ್ಲ. ಕೋಲಾರ ಜಿಲ್ಲೆ ತಮಗೆ ಗೊತ್ತಿರುವಂತೆ, ಶೆಡ್ಯೂಲ್ಡ್ ಕಾಸ್ಟ್ : ಶೆಡ್ಯುಲ್ಡ್ ಟ್ರೈಬ್ ಜನರಿರುವ ಬಿಗ್ಗೆಸ್ಟ್ ಡಿಸ್ಟ್ರಿಕ್ ಅಲ್ಲಿಗೆ 20 ಲಕ್ಷ ರೂ, ಇವರಿಗೆ ಮೂವತ್ತಾರು ಲಕ್ಷ ರೂ. ಇನ್ನೂಂದು ಪೇಜ್ ನಂ. 10 ನಲ್ಲಿ ಕೋಲಾರಕ್ಕೆ 23 ಲಕ್ಷ ರೂ ಕೊಟ್ಟಿದ್ದೀರಿ. ಈ 23 ಲಕ್ಷ ರೂಪಾಯಿಗಳನ್ನು ಕೊಟ್ಟು ಇವರು ಏನು ಮಾಡುತ್ತಾರೆ ಸಾಲ ಕೊಟ್ಟಿದ್ದೇವೆ, ಬಡವರನ್ನು ಮೇಲೆ ತರುತ್ತೇವೆ, ಅಂದರೆ ಈ 23 ಲಕ್ಷದಲ್ಲಿ ಹೇಗೆ ಸಾಧ್ಯವಾಗುತ್ತದೆ? ಭಾಷಣದಲ್ಲಿ ಇಂಡಸ್ಟ್ರೀಸ್‌ಗೆ ಎಷ್ಟು ಬೇಕಾದರೂ ದುಡ್ಡು ಕೊಡುತ್ತೇವೆಂದು ಹೇಳಿದ್ದಾರೆ, ಏನೇನು ಬೇಕಾದರೂ ಕೊಡುತ್ತೇವೆಂದು ಹೇಳುತ್ತಾರೆ, ಎಷ್ಟು ಜನಕ್ಕೆ ಕೊಡುತ್ತೀರಿ? 50 ಜನಕ್ಕೆ ಜೆರಾಕ್ಸ್ ಮೆಷನ್ ಎಂದರೆ 23 ಲಕ್ಷ ರೂ ವೆಚ್ಚವಾಗುತ್ತದೆ, ಉಳಿದ ಜನಕ್ಕೆ ಏನು ಮಾಡುತ್ತೀರಿ? ಅವರನ್ನು ಯಾವರೀತಿಯಾಗಿ ಇಂಪ್ರೂವ್ ಮಾಡುತ್ತೀರಿ?You just think over it. why tihs partiality is shown in the administration. ನಿಮ್ಮ ಫೈನಾನ್ಸ್ ಡಿಪಾರ್ಟಮೆಂಟ್‌ನಲ್ಲಿ ದುಡ್ಡಿಲ್ಲವಾ? ಮಾತೆತ್ತಿದರೆ ಕೇಂದ್ರ ಸರ್ಕಾರದಿಂದ ಇಷ್ಟು ಹಣ ಬರುತ್ತದೆ, ರಾಜ್ಯ ಸರ್ಕಾರದಲ್ಲಿ ಇಷ್ಟು ಕೊಡುತ್ತೇವೆ ಅನ್ನುತ್ತೀರಿ ಹೇಗೆ ಕೊಟ್ಟಿದ್ದೀರಿ? ನಿಜವಾಗಿ ಶೆಡ್ಯೂಲ್ಡ್ ಕಾಸ್ಟ್ ಎಲ್ಲಿದ್ದಾರೋ ಅಲ್ಲಿಗೆ ಕೊಟ್ಟಿಲ್ಲದಿರುವುದಕ್ಕೆ ಏನು ಕಾರಣ ಸ್ವಾಮಿ ? ತಾವು ಅದನ್ನು ಫೈನಲೈಸ್ ಮಾಡುವಾಗ ಕೋಲಾರ ಜಿಲ್ಲೆಯನ್ನು ಗಮನದಲ್ಲಿಟ್ಟುಕೊಂಡು ನಮಗೆ, ಒಳ್ಳೆಯ ಅವಕಾಶ ಮಾಡಿ ಕೊಡಬೇಕು, ಅಲ್ಲಿರುವ ಶೆಡ್ಯೂಲ್ಡ್ ಕಾಸ್ಟ್ ಜನರಿಗೆಲ್ಲಾ ಅನುಕೂಲವಾಗುವ ರೀತಿ ಮಾಡಬೇಕು. ಈಗ ಏನು ಮಾಡುತ್ತಾರೆಂದರೆ ಎಬೊ ದಿ ಪಾವರ್ಟಿ ಲೈನೆಗ್ ಲೋನ್ ಕೊಡುವುದಿಲ್ಲ. ಕಾರ್ಪೊರೇಷನ್‌ನಲ್ಲಿ ಏನು ಮಾಡುತ್ತಾರೆಂದರೆ, ಬಿಲೊದಿ ಪಾವರ್ಟಿಲೈನ್‌ನಲ್ಲಿರುವವರಿಗೆ ಮಾತ್ರ ಕೊಡುತ್ತೇವೆಂದು ಹೇಳುತ್ತಾರೆ. ಈ ಬಿಲೊ ದಿ ಪಾವರ್ಟಿ ಲೈನ್ ಅನ್ನು ಕಮಿಷನರ್, ಜಿಲ್ಲಾಪರಿಷತ್‌ನ ಚೀಫ್ ಆಫೀಸರ್ ಸರ್ಟಿಫೈ ಮಾಡಬೇಕು ಎಂದು ಹೇಳುತ್ತಾರೆ. ದಿ ಮೊಸ್ಟ್ ವರ್ಸ್ಟ್ ಕಮಿಷನರ್ ಲಂಚ ತೆಗೆದುಕೊಂಡೇ ಜೀವನ ಮಾಡುವವನ ಹತ್ತಿರ ಹೋಗಿ ಶೆಡ್ಯೂಲ್ಡ್ ಕಾಸ್ಟ್ ಅವನಿಗೆ : ಬಿಲೊ ದಿ ಪಾವರ್ಟಿ ಲೈನ್ ಎಂದು ಸರ್ಟಿಫೈ ಮಾಡಿ ಕೊಡಿ ಎಂದರೆ, ಅವನು ಮಾಡಿ ಕೊಡುವುದಕ್ಕೆ 200

ರೂಪಾಯಿ ಒಂದು ಅಪ್ಲಿಕೇಷನ್‌ಗೆ, ತೆಗೆದುಕೊಳ್ಳುತ್ತಾನೆ ಹೇಗೆ ಅವನು ಮೇಲಕ್ಕೆ ಬರುವುದಕ್ಕಾಗುತ್ತದೆ.? ಬಿಲೊ ದಿ ಪಾವರ್ಟಿ ಲೈನ್ ಎಂದು ಸರ್ಟಿಫೈ ಮಾಡುವುದಕ್ಕೂ ಈಗ ಹೊಸದೊಂದನ್ನು ಕ್ರಿಯೇಟ್ ಮಾಡಿದ್ದಾರೆ; ಹಿಂದೆಲ್ಲಾ ಸೋಷಿಯಲ್ ವೆಲ್‌ಫೇರ್ ಡಿಪಾರ್ಟಮೆಂಟ್‌ಗೆ ಹೋದರೆ ಅವರು ನೇರವಾಗಿ ಲೋನ್ ಕೊಡುತ್ತಿದ್ದರು, ಈಗ ಸರ್ಟಿಫೈ ಮಾಡಿಕೊಂಡು ಬನ್ನಿ ಎಂದು ಹೇಳಿದ್ದಾರೆ, ಸರ್ಟಿಫಿಕೇಟ್‌ಗೆ 200 ರೂಪಾಯಿಗಳನ್ನು ಕೇಳುತ್ತಾನೆ ಇನ್ನು ನಾಳೆ ಕ್ಲರ್ಕ್ ಸರ್ಟಿಫೈ ಮಾಡಬೇಕಾದರೆ, ಇನ್ನೊಂದು ನೂರು ರೂಪಾಯಿಗಳನ್ನು ಕೇಳುತ್ತಾನೆ. ಅಡಿಷನಲ್ ಅಡ್ಮಿನಿಸ್ಟ್ರೇಷನ್ ಕೊಟ್ಟುಕೊಂಡು ಹೋದರೆ, ಅಡಿಷನಲ್ ಆಗಿ ಲಂಚ ಕೊಟ್ಟುಕೊಂಡು ಬರಬೇಕು; ಅದನ್ನು ತಾವು ಸರಿಪಡಿಸಬೇಕು. ಹೋಂ ಡಿಪಾರ್ಟನಲ್ಲಿ ಮನೆ ಕಟ್ಟುವುದಕ್ಕೆ, ಹೌಸಿಂಗ್‌ಗೆ ಎಷ್ಟು ಹಣ ಖರ್ಚು ಮಾಡಬೇಕು, ಏನು ಮಾಡಬೇಕೆಂಬುದನ್ನು ಹೇಳಿದ್ದೀರಿ, ಆದರೆ ಎಲ್ಲಿ ನಿಲ್ ಹಾಕಿದ್ದೀರಿ, 4500 ಎಸ್ಟಿಮೇಷನ್, ಕಟ್ಟಿದ್ದಾರೋ ಇಲ್ಲವೋ? ಕರ್ನಾಟಕ ಪೋಲಿಸ್ ಹೌಸಿಂಗ್ ಕಾರ್ಪೊರೇಷನ್ ಕನ್‌ಸ್ಟ್ರಕ್ಷನ್ ಆಫ್ ಪೋಲಿಸ್ ಕ್ವಾರ್ಟರ್ಸ್ : 4500 ಲಕ್ಷವೆಂದು ಕೊಟ್ಟಿದ್ದೀರಿ, ಪಕ್ಕದಲ್ಲಿ 009 ನಮಗೆ ಅರ್ಥವಾಗಲಿಲ್ಲ. ಅದೇನು ಡಿಮ್ಯಾಂಡಾ, ಇಲ್ಲ ಕಟ್ಟುವುದಿಲ್ಲವೇ ಇಲ್ಲ ಹಣ ಒದಗಿಸಿಲ್ಲವೇ ಏನು ಎಂಬುದು ನಮಗೆ ಅರ್ಥವೇ ಆಗುತ್ತಿಲ್ಲ. ಹಣಕಾಸು ಸಚಿವರೇ ತಮಗಾದರೂ ಗೊತ್ತಿದ್ದರೆ ತಿಳಿಸಿ. 4500 ಲಕ್ಷ ರೂಪಾಯಿಗಳನ್ನು ಕೊಡಲಾಗಿದೆ.You have mentioned here that an amount of Rs. 4,500 lakhs is earmarked for Karnataka polisc Housing Corporation for the construction of police quarters. Hence the demand. .ಇದಕ್ಕೆ ಬಜೆಟ್ ಒದಗಿಸಿಲ್ಲವೆ? ಏತಕ್ಕೆ ಇಟ್ಟಿಲ್ಲ? When you have demand for Rs.4,500 lakhs, you not shown even Rs.10/- here. ಪೇಜ್ ನಂ. 18 ರಲ್ಲಿ ನೋಡಿ ಸ್ವಾಮಿ? ಅದು ನನಗೆ ಅರ್ಥವೇ ಆಗಲಿಲ್ಲ, ಇದು ಬಹಳ ಮುಖ್ಯ, ಪೋಲಿಸ್ ಡಿಪಾರ್ಟ್‌ಮೆಂಟ್‌ಗೆ ಊಟ ಹಾಕುವುದಕ್ಕೆ ವ್ಯವಸ್ಥೆ ಮಾಡುವುದಿಲ್ಲ, ಅವರಿಗೆ ಟಿಫನ್ ಇಲ್ಲ. 35 ರೂಪಾಯಿಗಳನ್ನು ಕೊಟ್ಟು ಅವರು ಹೇಗಾದರೂ ಹೋಗಿ ಸಾಯಲಿ ಅನ್ನುತ್ತಾರೆ. ಅದೂ ಕಾಂಟ್ರಾಕ್ಟ್‌ನಲ್ಲಿ ಊಟ ಕೊಡುವುದು, ಅವನು ಯಾವ ಊಟ ಕೊಡುತ್ತಾನೋ ತಿನ್ನುತ್ತಾನೋ ಸಾಯುತ್ತಾನೋ ಯಾರಿಗೂ ಗೊತ್ತಿಲ್ಲ ಕೊನೆಯ ಪಕ್ಷ ಅವರ ಮಕ್ಕಳಿಗಾದರೂ ಮನೆ ಇರಬೇಕಲ್ಲವೇ. You have taken a stand. ಆದರೆ ಅವರಿಗೇನು ಪ್ರಾವಿಷನ್ ತೋರಿಸಿಲ್ಲವೇ? ಎಷ್ಟು ಹಣವೆಂಬುದನ್ನು ತೋರಿಸಿಲ್ಲವೇ, ಬರೀ 4500 ಲಕ್ಷ ರೂ ಆದರೆ ಇದಕ್ಕೆ ಒದಗಿಸಿರುವುದು 10 ಲಕ್ಷನಾ, 20 ಲಕ್ಷನಾ, 1 ಕೋಟಿರೂಗಳೇ ಏನೂ ಕೊಟ್ಟಿಲ್ಲ, ತಾವು ಅದನ್ನು ಸ್ವಲ್ಪ ನೋಡಬೇಕು. ಸ್ಪೋರ್ಟ್ಸ್‌ಗೆ ಲೋನ್ ಕೊಡುತ್ತೇವೆಂದು ಹೇಳಿದಿರಿ, ಎಲ್ಲಿದೆ ಸ್ವಾಮಿ? ಅದರಲ್ಲೂ ನಿಲ್ ಹಾಕಲಾಗಿದೆ ಮತ್ತೆ ಸ್ಪೋರ್ಟ್ಸ್ ಬಗ್ಗೆ ನಾವೇಕೆ ಹೇಳಬೇಕು? ನಾವು ಮಾತನಾಡುವ ಸಮಯದಲ್ಲಿ ಎಷ್ಟು ಗಂಭೀರವಾಗಿ ಮಾತನಾಡುತ್ತೇವೆ, ಸ್ಪೋರ್ಟ್ಸ್ ಅಂಡ್ ಯೂತ್ ವೆಲ್‌ಫೇರ್, ಕ್ರಿಕೆಟ್‌ನಲ್ಲಿ ಯಾರು ಗೆದ್ದು ಬಂದಿದ್ದಾರೊ ಅವರು ಹೇಳಿದ್ದಕೋಸ್ಕರ ಜಮೀನು ಕೊಡಬೇಕು, ಅವರ ಪರ the whole House appreciated. ನಾನು ಮಾತ್ರವಿಲ್ಲ ಕಾರಣವೇನೆಂದರೆ what is the use one man showing up in sports ? ಅಂದರೆ. It is with his talent

he has proved. That is why, he is called a sportsman. ಆದರೆ ನಾವು ಏನೋ ಆಕಾಶದಿಂದ ಗೆದ್ದು ಬಂದಿರುವ ರೀತಿ ಸ್ಪೋರ್ಟ್ಸ್‌ಮನ್ ಕ್ರಿಕೆಟ್‌ನಲ್ಲಿ ವರ್ಲ್ಡ್‌ಗೆ ಹೋಗಿದ್ದಾರೆಂದು ಹೇಳಿಬಿಟ್ಟು, ಇಲ್ಲಿ ಯೂತ್ಸ್‌ಗೆ ಏನು ಡೆವಲಪ್‌ಮೆಂಟ್ ಅಂದರೆ ನತಿಂಗ್ ಅದಕ್ಕೆ ಹಣವನ್ನೇ ಒದಗಿಸಿಲ್ಲ. ಅವನೇ ಕಷ್ಟಪಟ್ಟು ಮೇಲೆ ಬಂದರೆ, ಅಮೇಲೆ ನಮ್ಮ ಕರ್ನಾಟಕಕ್ಕೆ ಒಂದು ಒಳ್ಳೆಯ ಹೆಸರು, ಏನು ನೀವು ಕೊಟ್ಟ ಹಣದಲ್ಲಿ ಅವನು ಕರ್ನಾಟಕಕ್ಕೆ ಒಳ್ಳೆಯ ಹೆಸರನ್ನು ತೆಗೆದುಕೊಂಡು ಬಂದಿದ್ದಾನೆಯೇ ಅವನನ್ನು ನೀವು ಟ್ರೈನ್ ಮಾಡಿದ್ದೀರಾ? ನೀವು ಅವನಿಗೆ ಸ್ಕಾಲರ್‌ಶಿಫ್ ಒದಗಿಸಿದ್ದೀರಾ? ಏನೂ ಇಲ್ಲ, ಆಮೇಲೆ ಇವನು ನಮ್ಮ ರಾಜ್ಯದಲ್ಲಿ ಹುಟ್ಟಿರುವವನು, ಇಡೀ ದೇಶಕ್ಕೆ ಗೌರವ ಎಂದು ಹೇಳುವುದು. ಏನುಗೌರವ ! ಯಾವನೋ ಕಷ್ಟಪಟ್ಟು ಅವನ ತಂದೆತಾಯಿಗಳು ಊಟ ಕೊಟ್ಟು ಅವರು ಬೆಳೆಸಿ, ಅವನು ಒಬ್ಬ ಒಳ್ಳೆಯ ಸ್ಪೋರ್ಟ್ಸ್‌ಮನ್ ಆಗಿ ಬಂದ ಮೇಲೆ, ತಾವು ತೆಗೆದುಕೊಂಡು ತಲೆಯ ಮೇಲಿಟ್ಟುಕೊಂಡು ಅವನಿಗೋಸ್ಕರ ನಾವು ಮಾತನಾಡುತ್ತೇವೆ, ಅವರು ಕೇಳಿದ ಜಾಗವನ್ನು ನಾವು ಕೊಡಬೇಕು, ಒಂದೇ ಒಂದು ಕ್ರಿಕೆಟ್ ಮಾತ್ರ ಈ ದೇಶದಲ್ಲಿರುವುದು? ಬೇರೆ ಸ್ಪೋರ್ಟ್ಸ್‌ಮನ್ ಅಥ್ಲೆಟಿಕ್ ಇಲ್ಲ. ಫುಟ್‌ಬಾಲ್‌ನಲ್ಲಿ ಯಾರೂ ಇಲ್ಲ, ಟೆನ್ನಿಸ್‌ನಲ್ಲಿ ಯಾರೂ ಇಲ್ಲ? ಹೀಗೆ ಹೇಳಿಕೊಂಡು ಹೋದರೆ, I don't think it is reasonable. ಈಗ ತಾವೇ ನೋಡಿLoans for Education, Sports, Culture and Youth Welfare ಗೆ ಏನು ಕೊಟ್ಟಿದ್ದೀರಿ ಸ್ವಾಮಿ ? ಎಷ್ಟು ಹಣ ಒದಗಿಸಿದ್ದೀರಿ? ಡಿಸ್ಟ್ರಿಕ್ಟ್‌ವೈಸ್ ಎಷ್ಟು ಕೊಟ್ಟಿದ್ದೀರಿ? ಯವ್ಯಾವ ಡಿಸ್ಟ್ರಿಕ್ಟ್‌ಗೆ ಎಷ್ಟೆಷ್ಟು ಕೊಟ್ಟಿದ್ದೀರಿ? ಕಬ್ಬಡಿನಲ್ಲಿ ಇಲ್ಲವಾ? ಹಳ್ಳಿಯಲ್ಲಿರುವ ಜನರನ್ನು ಬಳೆಸಿ ಮೇಲೆ ಬರಬೇಕು, ಹಳ್ಳಿಯವರನ್ನು ನಾವು ಪಂಪ್ ಮಾಡುತ್ತೇವೆ, ನಮ್ಮ ಸರ್ಕಾರ ಮಣ್ಣಿನ ಮಗ ಸರ್ಕಾರ ನಾವು ಬರೀ ಹಳ್ಳಿಯ ಕಡೆ ಡೆವಲಪ್ ಮಾಡುವವರು ಅಂತ ಹೇಳುತ್ತೇವೆ ಆದರೆ ಏನೂ ಮಾಡಿಲ್ಲಾ ಸ್ವಾಮಿ? ಯಾವ ವರ್ಷದ್ದಾದರೂ ಆಗಲಿ, Government is a government. ಪಕ್ಷ ಬೇರೆ ಬರುತ್ತದೆ, ನಾಳೆ ಇನ್ನೂಂದು ಪಕ್ಷದವರು ಬಂದು ಮುಖ್ಯಮಂತ್ರಿಗಳಾಗಿ ಕುಳಿತುಕೊಳ್ಳಬಹುದು, ಕರ್ನಾಟಕ ಸರ್ಕಾರ ಯಾವಾಗಲೂ ಚೆಂಚ್ ಆಗುವುದಿಲ್ಲ.theIt is a Karnataka Government . politics may change, party may change, but government will never change. ಎಲ್ಲಿ ಕೊಟ್ಟಿದ್ದೀರಿ? ಸರಿ ಕಳೆದ ವರ್ಷದ್ದಾಯಿತು, ಈ ವರ್ಷ ಏನು ಮಾಡಿದ್ದೀರಿ? ಬಜೆಟ್‌ನಲ್ಲಿ ಏನು ಒದಗಿಸಿದ್ದೀರಿ? ಅಡಿಷನಲ್ ಬಜೆಟ್‌ನಲ್ಲಿ ಏನು ಕೊಟ್ಟಿದ್ದೀರಿ? ಕಳೆದ ವರ್ಷ ತಪ್ಪು ಮಾಡಿದರು, ನಿಮ್ಮ ಧರ್ಮಸಿಂಗ್‌ರವರು ಸ್ಪೋರ್ಟ್ಸ್‌ಮನ್ನೇ ಅಲ್ಲ, ತಾವು ಅಪಾರ ಸ್ಪೋರ್ಟ್ಸಮನ್‌ಗಳು ಯುನಿವರ್ಸಿಟಿ ರೆಪ್ರೆಸೆಂಟೆಟೀವ್‌ಗಳು ಏತಕ್ಕೆ ಮಾಡಲಿಲ್ಲ? ಬರೀ ಕಲ್ಪನೇ ಕಲ್ಪನೇ ಬರೀ ನಾವು ಕಿವಿಗೆ ಮೈಕ್ ಹಾಕಿಕೊಂಡು ಕೇಳಿಕೊಂಡಿರಬೇಕಷ್ಟೆ, ಜನರಿಗೆ ರೀಚ್ ಆಗುತ್ತದೆಯಾ? ಇಲ್ಲ. therefore, as Finance Minister, kindly look into this matter and give more importance. Sports, it is not only in the name, but it is good for health. Students who are engaged in the sports ay young age will not get attracted towards alcohol, smoking, but will naturally develop their personality in the

society. Therefore, kinldy give a boost, encouragement and moral support to the sportsman. ಅವರಿಗೆ ಎಷ್ಟು ಹಣ ಒದಗಿಸಬೇಕೋ ಅದನ್ನು ನೀವು ಫೈನಲೈಸ್ ಮಾಡುವುದಕ್ಕೆ ಮುಂಚೆ ಡಿಸ್ಟ್ರಿಕ್ಟ್‌ವೈಸ್ ಇಷ್ಟಿಷ್ಟು ಜನರಿಗೆ ಸ್ಪೋರ್ಟ್‌ಗಾಗಿ ತಲುಪಬೇಕು, ಇದಕ್ಕಾಗಿ ಕ್ಯಾಂಪಿಂಗ್ ಮಾಡಬೇಕು. ಈ ರೀತಿ ಅದಕ್ಕೊಂದು ಎಕ್ಸ್‌ಪೆಂಡಿಚರ್ ಮಾಡಿ ನೀವು ಡೆವಲಪ್ ಮಾಡಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತಗಳನ್ನು ಮುಗಿಸುತ್ತೇನೆ.

ಶ್ರೀ. ಕೆ. ಜಯಪ್ರಕಾಶ ಹೆಗಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಧುಸ್ವಾಮಿಯವರೇನು ಹೇಳಿದರು ಅದನ್ನು ನಾನು ಒಪ್ಪುತ್ತೇನೆ ಏಕೆಂದರೆ ಹಿಂದೆ ಹಣವಿದ್ದು ಇನ್‌ಸಫಿಶಿಯೆಂಟ್ ಆದರೆ ಹೊಸದಾಗಿ ಅವಕಾಶ ಬಂದಾಗ ಇದನ್ನು ತರಬೇಕಾಗುತ್ತದೆ ಇದು ಮೂರನೆಯ ಅಪ್ರೋಪ್ರಿಯೇಷನ್ ಬಿಲ್. ಈ ಸಾರಿ 1600 ಕೋಟಿರೂ ಆದರೆ ಹಿಂದಿದೆಲ್ಲಾ ತೆಗೆದಾಗ ಒಂದು ಪ್ಯಾರಲಲ್ಲೇ ಆಗುತ್ತದೆ, ಹಿಂದಿನ ಬಜೆಟ್‌ಗೆ ಸಾಧಾರಣ ಮ್ಯಾಚ್ ಆಗುತ್ತದೆ ಎನ್ನುವ ಒಂದು ಅಭಿಪ್ರಾಯ ಏಕೆಂದರೆ ಇದನ್ನು ಸರ್ಪ್ಲಸ್ ಬಜೆಟ್ ಎಂದು ತೋರಿಸುವುದಕ್ಕೋಸ್ಕರ ಹೆಚ್ಚಿನದ್ದನ್ನು ಹಿಂದೆ ತೋರಿಸಲಿಲ್ಲವೆಂದು ಕಾಣುತ್ತದೆ. ನಂತರ ಇದನ್ನು ಅಪ್ರೋಪ್ರಿಯೇಶನ್ ಬಿಲ್‌ನಲ್ಲಿ ತಂದು ಪಾಸ್ ಮಾಡಿಕೊಂಡು ಹೋಗುವ ಪದ್ಧತಿ ಪ್ರಾರಂಭವಾಗಿದೆ. ಇದನ್ನು ನಿಲ್ಲಿಸಬೇಕಾಗುತ್ತದೆ. ಆರ್ಥಿಕ ಶಿಸ್ತು ಬರುತ್ತಾ ಇದೆ ಇಲ್ಲ ಎನ್ನುವುದಿಲ್ಲ. ಆದರೆ ಮುಂದಿನ ದಿನಗಳಲ್ಲಿ ಇವತ್ತು ವಿಶೇಷ ಏನು ಅಂದರೆ ವಿರೋಧ ಪಕ್ಷದವರು ಸಪೋರ್ಟ್ ಮಾಡುತ್ತಾರೆ ಏಕೆಂದರೆ ಅವರು ಮಾಡಿದ ಖರ್ಚಿದು. ಅವರು ವಿರೋಧ ಮಾಡುವ ಹಾಗಿಲ್ಲ. ಅವರು ಅದನ್ನು ಪಾಸ್ ಮಾಡಿಕೊಂಡು ಹೋಗಬೇಕಾಗಿದೆ. ಒಂದು ಗುಂಪಿನವರು ಆದರಲ್ಲಿ ಭಾಗಿಗಳಾಗಿದ್ದರೆ ಇನ್ನೊಂದಕ್ಕೆ They have no option. ಅದನ್ನು ಪಾಸ್ ಮಾಡಿಕೊಂಡು ಹೋಗಲೇಬೇಕು. ನಾವು ನಾಲ್ಕು ಜನ ಮಾತ್ರ ವಿರೋಧ ಮಾಡುವಂತಹ ಪರಿಸ್ಥಿತಿ ಈಗ ಕೇಂದ್ರದಿಂದ ಬಂದದ್ದಕ್ಕೆ ಮ್ಯಾಚಿಂಗ್‌ಗ್ರಾಂಟ್ ಕೊಡಬೇಕು, ಹೌದು, ಒಪ್ಪುತೇವೆ. ಆದರೆ ಕೆಲವು ಅನಾವಶ್ಯಕ ಖರ್ಚುಗಳನ್ನು ನಿಲ್ಲಿಸಬೇಕು ನಾವು ನಿನ್ನೆ ಮಾತನಾಡುವಾಗ ಹೇಳಿದ್ದೆವು, ರೆವಿನ್ಯೂ ಖರ್ಚು ಎಷ್ಟು ಟೋಟಲ್ ಉಳಿದುದ್ದಕ್ಕೆ ಪ್ಲಾನ್ ಖರ್ಚು ಎಷ್ಟು ಬರುತ್ತಾ ಇದೆ ಅಂತ. ಅದನ್ನು ಕಟ್ ಮಾಡಲು ಸಾಧ್ಯವಾದರೆ ಪ್ರೋಬಬ್ಲಿ ಮೂರನೇ ಅಪ್ರೋಪ್ರಿಯೇಷನ್ ಬಿಲ್ ಮಂಡಿಸುವ ಅವಕಾಶ ಬರುವುದಿಲ್ಲ. ಇದೆಲ್ಲಾ ನೀವು ಮಾಡಿದ್ದು ಅಂತ ಹೇಳುವುದಿಲ್ಲ. ಮುಂದೆ ಇದರಲ್ಲಿ ನೀವು ಡಿಸಿಪ್ಲಿನ್ ತರುವುದು ಬಹಳ ಅವಶ್ಯಕತೆ ಇದೆ. ಈಗ ಟೂರಿಸಂ ಬಗ್ಗೆ, ಟೂರಿಸಂ ಡೆವಲಪ್ ಆಗಲೇಬೇಕು. ನಮ್ಮ ಗಾಲಿಗಳ ಮೇಲಿನ ಅರಮನೆ ಕೇಂದ್ರದಿಂದ ಬರುತ್ತದೆ. ಕೆಲವು ರಾಷ್ಟ್ರಗಳು ಬರೇ ಟೂರಿಸಂನ್ನು ಹೊಂದಿಕೊಂಡೇ ಆದಾಯ ಇದೆ. ಅದೇ ರೀತಿ ಕರಾವಳಿಯಲ್ಲಿ ಟೂರಿಸಂನ್ನು ಡೆವಲಪ್ ಮಾಡಲಿಕ್ಕೆ ಇನ್ನೂ ಹೆಚ್ಚು ಖರ್ಚು ಮಾಡಬೇಕಾಗುತ್ತದೆ. ಟೂರಿಸಂ ಮತ್ತು ಕ್ರೀಡೆಗಳಿಗೆ ಹೆಚ್ಚು ಅನುದಾನ ಇಡುವುದಕ್ಕೆ ನನ್ನ ವಿರೋಧವಿಲ್ಲ. ಅವೆರಡನ್ನೂ ಡೆವಲಪ್‌ಮಾಡುವ ಅವಶ್ಯಕತೆ ಬಹಳ ಇದೆ ಆದರೆ ರೆವಿನ್ಯೂನಲ್ಲಿ ಮಹಾಮಸ್ತಾಕಾಭಿಷೇಕ ಮತ್ತಿತರ ಖರ್ಚು ತೋರಿದ್ದೀರಿ. ನಮಗೆ ಮನೆಗಳನ್ನು ಕಟ್ಟಲಿಕ್ಕೆ ದುಡ್ಡಿಲ್ಲ ಆದರೆ ಕೆಲವು ಕಾರ್ಯಕ್ರಮಗಳನ್ನು ವಿಜೃಂಭಣೆಯಿಂದ ಮಾಡಲು ನಮ್ಮಲ್ಲಿ ಸಾಕಷ್ಟು ಹಣ ಇದೆ ಅಂತ ನಾನಲ್ಲ ಜನ ಅಂದುಕೊಳ್ಳಲು

ಪ್ರಾರಂಭ ಮಾಡಿದ್ದಾರೆ. ಇದನ್ನು ದಯವಿಟ್ಟು ಅಲೋಚನೆ ಮಾಡಿ. ಮನೆಗಳಿಗೆ ಕೊಡಲು ಹಾಗೂ ರಸ್ತೆಗಳನ್ನು ಮಾಡಲು ಹಣ ಬೇಕು ಇವೆಲ್ಲಾ ಅದ ಮೇಲೆ ವಿಜೃಂಭಣೆಯಿಂದ ಮಾಡೋಣ ಯಾವುದನ್ನೂ ಮಾಡುವುದು ಬೇಡ ಅನ್ನುವುದಿಲ್ಲ ಅದಕ್ಕೆ ಸಾಕಷ್ಟು ಸಂಗ್ರಹ ಮಾಡುವ ಶಕ್ತಿ ಯಾರು ಅದನ್ನು ಮಾಡುತ್ತಾರೆ ಅವರ ಹತ್ತಿರವೇ ಇದೆ ಅದಕ್ಕಾಗಿ ಸರ್ಕಾರ ಹೆಚ್ಚು ಖರ್ಚು ಮಾಡುವ ಅವಶ್ಯಕತೆ ಇಲ್ಲ ಅಂತ ಹೇಳುತ್ತಾ ಈ ಮೆಡಿಕಲ್ ಕಾಲೇಜುಗಳ ಬಗ್ಗೆ, ಮಾನ್ಯ ಸಿದ್ದರಾಮಯ್ಯನವರು ಹಿಂದೆ ಬಜೆಟ್ ಮಂಡಿಸಿದಾಗಲೇ ನಾನು ಹೇಳಿದೆ : ನೀವು ಲೀಟರ್ ಆಫ್ ಇಂಟೆಂಟನ್ನು ಕೊಟ್ಟಿಲ್ಲ, ಈ ವರ್ಷ ನಿಮಗೆ ಕಾಲೇಜು ಪ್ರಾರಂಭ ಮಾಡಲು ಆಗುವುದಿಲ್ಲ ಅದಕ್ಕೆ ಹೆಚ್ಚು ಹಣ ಇಡುವ ಅವಶ್ಯಕತೆ ಇಲ್ಲ ಅಂತ. ಈಗ ಪುನ : ಹೊಸ ಕಾಲೇಜು ಕಟ್ಟಡ ಕಟ್ಟಲು 450 ಕೋಟಿ ರೂ ತಂದಿದ್ದೀರಿ ಅಂತ ಕಾಣುತ್ತದೆ. ಇದ್ದ ಕಾಲೇಜುಗಳಿಗೇ ಫೆಸಿಲಿಟಿ ಇಲ್ಲ. ಸ್ಟ್ಯಾಫಿಲ್ಲ, ಅದಕ್ಕೋಸ್ಕರ ಮೆಡಿಕಲ್ ಕೌನ್ಸಿಲ್ಅಫ್ ಇಂಡಿಯಾದವರು ಅಡ್ಮಿಷನ್ ಸ್ಟ್ರೆಂಗ್ತ್ ಕಡಿಮೆ ಮಾಡಿದ್ದಾರೆ. ಆದ್ದರಿಂದ ಇದ್ದ ಕಾಲೇಜುಗಳಿಗೇ ನೀವು ಜಾಸ್ತಿ ಫೆಸಿಲಿಟೀಸ್ ಕೊಡಿ. ಅಲ್ಲಿ ಹೆಚ್ಚು ಸೀಟನ್ನು ತೆಗೆದುಕೊಳ್ಳಿ ಅದು ಬಹಳ ಸುಲಭ. ಹೊಸ ಕಾಲೇಜನ್ನು ಪ್ರಾರಂಭ ಮಾಡಲಿಕ್ಕೆ ಈ ವರ್ಷವೂ ಆಗುವುದಿಲ್ಲ. ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಒಂದು ಹೇಳಿಕೆ ಕೊಟ್ಟಿದ್ದಾರೆ. ಈ ಬಾರಿ ಎರಡು ಕಾಲೇಜು ಅಂತ ಪ್ರಾರಂಭ ಮಾಡುತ್ತೇವೆ ಆದರೆ ಅದನ್ನೂ ಪ್ರಾರಂಭಿಸಲು ನಿಮ್ಮಿಂದ ಆಗುವುದಿಲ್ಲ.

ಡಾ: ವಿ.ಎಸ್.ಆಚಾರ್ಯ(ವೈದ್ಯಕೀಯ ಶಿಕ್ಷಣ ಸಚಿವರು): ಅಧ್ಯಕ್ಷರೇ, ಹೊಸ ಮೆಡಿಕಲ್ ಕಾಲೇಜು ಪ್ರಾರಂಭಿಸುವ ಜೊತೆಗೆ ಇದ್ದ ಕಾಲೇಜುಗಳಲ್ಲಿ ಸ್ಥಾನಗಳನ್ನು ಹೆಚ್ಚು ಮಾಡಲು ಪ್ರಯತ್ನ ಮಾಡಬೇಕು ಅಂತ ಅವರು ಹೇಳಿದ್ದಾರೆ. ಆ ದಿಸೆಯಲ್ಲೂ ಪ್ರಯತ್ನವಾಗುತ್ತಾ ಇದೆ. ನಮ್ಮ ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ ಮಾತ್ರ 150 ಸೀಟಿದೆ. ಉಳಿದ ಮೂರು ಸರ್ಕಾರಿ ಮೆಡಿಕಲ್ ಕಾಲೇಜುಗಳಲ್ಲಿ ನೂರುನೂರಿದೆ. ಅದರ ಪೈಕಿ ಹುಬ್ಬಳಿಯಲ್ಲಿ ಎಂಸಿಐನವರ ಈ ವರ್ಷದ ಭೇಟಿ ಸಂದರ್ಭದಲ್ಲಿ ನೂರು ಇದ್ದುದ್ದನ್ನು 150ಕ್ಕೆ ಮಾಡಲು ಬೇಕಾದ ಸಿದ್ಧತೆಯನ್ನು ನಾವು ಮಾಡಿಕೊಂಡಿದ್ದೇವೆ. ಆದರೆ 6 ಹೊಸ ಮೆಡಿಕಲ್ ಕಾಲೇಜು ಪ್ರಾರಂಭ ಮಾಡಬೇಕು ಎಂಬ ಒಂದು ತೀರ್ಮಾನ ಹಿಂದಿನ ಸರ್ಕಾರ ತೆಗೆದುಕೊಂಡಿರುವುದನ್ನು ಕಾರ್ಯರೂಪಕ್ಕೆ ತರಲು ಎಲ್ಲಾ ಪ್ರಯತ್ನವನ್ನೂ ಮಾಡುತ್ತಿದ್ದೇನೆ. ಮತ್ತು ಈ ಸದನದಲ್ಲಿ ಒಂದು ಸ್ಪಷ್ಟೀಕರಣ ಕೊಡಲು ನಾನು ಬಯಸುತ್ತಿದ್ದೇನೆ : ನಾನು ಎಲ್ಲಿಯೂ ಈ ವರ್ಷ ಎರಡೇ ಮಾಡಲಿಕ್ಕೆ ಆಗಬಹುದು ಎಂದು ಹೇಳುವ ಪ್ರಯತ್ನಮಾಡಲಿಲ್ಲ. ಆದರೆ ಪತ್ರಿಕೆಯಲ್ಲಿ ಆ ರೀತಿ ಬಂದಿದೆ, ನಾನು ಗಮನಿಸಿದ್ದೇನೆ, ಆದರೆ 6 ಮೆಡಿಕಲ್ ಕಾಲೇಜುಗಳನ್ನೂ ಅದಷ್ಟು ಶೀಘ್ರ ಪ್ರಾರಂಭಿಸುವ ಬಗ್ಗೆ ಎಲ್ಲಾ ಪ್ರಯತ್ನ ಮಾಡುತ್ತಾ ಇದ್ದೇವೆ. ಪತ್ರಿಕೆಯವರು ಪದೇಪದೇ ಈ ವಿಷಯದಲ್ಲಿ ಕಟ್ಟಡ, ವಿಸ್ತರಣೆ ಸಿಬ್ಬಂದಿ – ಇವುಗಳ ಬಗ್ಗೆ ತಯಾರಿ ಹೇಗಿದೆ ಎಂದು ಕೇಳುತ್ತಿದ್ದಾಗ ಇಬ್ಬರು ಸ್ವಲ್ಪ ಮುಂದಿದ್ದಾರೆ, ಬೆಳಗಾಂನವರು, ಮಂಡ್ಯದವರು, ಎಂದು ಹೇಳಿದ್ದು ಬಿಟ್ಟರೆ ನಾವು ಎರಡೇ ಮೆಡಿಕಲ್ ಕಾಲೇಜು ಪ್ರಾರಂಭ ಮಾಡುತ್ತೇವೆ ಅಂತ ಎಲ್ಲೂ ಹೇಳಲಿಲ್ಲ. ಆರಕ್ಕೂ ಬೇಕಾದ ಪ್ರಯತ್ನ ಮಾಡುತ್ತಿದ್ದೇವೆ. ಅದು ಯಶಸ್ವಿಯಾಗುವುದು ಎಂಸಿಐನವರ ಮರ್ಜಿ ಮೇಲಿದೆ ಏಕೆಂದರೆ ಅವರದು ಬಹಳ ರಿಜಿಡ್ ರೆಗ್ಯುಲೇಶನ್ನಿದೆ. ಆ ದೃಷ್ಟಿಯಲ್ಲಿ ನಾನು ಹೇಳಿದ್ದಷ್ಟೇ.

ಡಾ : ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಸೇಡಂ: ನಾನು ಡಾಕ್ಟರಾಗಿರುವುದಕ್ಕಾಗಿ ಒಂದು ಸಲಹೆ ಕೊಡಲು ಇಚ್ಛೆಪಡುತ್ತೇನೆ. ಮಾನ್ಯ ಸಚಿವರು ಗಮನಿಸಬೇಕು. ಎಂಸಿಐ ಮಾನ್ಯತೆ ಕೊಡುವುದು ಅವರಿಗೆ ನಮ್ಮಿಂದ ಏನೇನು ರಿಕ್ವೈರ್ಮೆಂಟ್ಸಿದೆ ಅದನ್ನು ಪೂರೈಸಿದರೆ ಅವರು ಮ್ಯಾನ್ಡೇಟರಿಯಾಗಿ ಕೊಡಬೇಕಾಗುತ್ತದೆ. ಅವರು ಸೀಟುಗಳ ಹೆಚ್ಚಳ ಯಾವ ರೆಫ್ಯೂಸ್ ಮಾಡಬಹುದು ಅಂದರೆ ನಿಮ್ಮಲ್ಲಿ ಸಿಬ್ಬಂದಿ ಕೊರತೆ, ಮೂಲಭೂತ ಸೌಕರ್ಯಗಳ ಕೊರತೆ ಒಳರೋಗಿಗಳ ಕೊರತೆ ಇದ್ದರೆ ಮಾತ್ರ ನಿಮಗೆ ರೆಫ್ಯೂಸ್ ಮಾಡಬಹುದೇ ವಿನಾ ಅವರಿಗೆ ಬೇಕಾದ ಎಲ್ಲಾ ಸವಲತ್ತು ನೀವು ಒದಗಿಸಿದರೆ ಅವರು ರೆಫ್ಯೂಸ್ ಮಾಡಲು ಆಗುವುದಿಲ್ಲ. ಇನ್ನೊಂದು ಬಹಳ ಮುಖ್ಯವಾದುದು ಅಂದರೆ ಪ್ರೋಸ್ಟ್‌ಗ್ರಾಜುಯೇಟ್ಸ್ ಆದಂಥ ತಜ್ಞರಿದ್ದಾರೆ, ಅವರನ್ನು ನೀವು ರಿಕ್ರೂಟ್ ಮಾಡಿಲ್ಲ ಬಹಳಷ್ಟು ಮೆಡಿಕಲ್ ಕಾಲೇಜುಗಳಲ್ಲಿ ಏನಾಗಿದೆ ಅಂದರೆ ಎಲ್ಲಾ ಸರ್ಕಾರಿ ಮೆಡಿಕಲ್ ಕಾಲೇಜುಗಳಲ್ಲಿ ಸಿಬ್ಬಂದಿ ಕೊರತೆ ಬಹಳ ಇದೆ. ಹುಬ್ಬಳಿ ಯಂತಹ ಬಳ್ಳಾರಿಯಂತಹ ಕಾಲೇಜುಗಳು ಹಳೆಯವಾದರೂ ಅಲ್ಲಿ ಸಿಬ್ಬಂದಿ ಕೊರತೆ ಇದೆ. ಯಾರೂ ಅದಕ್ಕೆ ಗಮನ ಕೊಡುತ್ತಿಲ್ಲ. ಆಡಳಿತದಲ್ಲಿ ಬಹಳ ಲೋಪವಾಗಿದೆ. ನೀವು ಸಿದ್ದತೆ ಮಾಡಿಕೊಳ್ಳಬೇಕಾಗಿದ್ದರೆ ಖಂಡಿತ ನಿವು ಅಲ್ಲಿಗೇ ಹೋಗಿ ಸಭೆ ನಡೆಸಿ ಅಲ್ಲಿನ ಕೊರತೆಗಳನ್ನು ಅಲ್ಲಿನವರನ್ನು ಕೇಳಿ ನೀವು ಮಾಡಿದರೆ ಖಂಡಿತ ಮಾಡಲು ಸಾಧ್ಯವಿದೆ. ಅದಕ್ಕೆ ಕಮಿಟ್ಮೆಂಟ್ ಬೇಕು.

ಶ್ರೀ ಎಸ್.ಎಸ್.ಪಾಟೀಲ್: ಅಧ್ಯಕ್ಷರೇ ನಾವು ಅವರೂ ಕೂಡಿ ಇದ್ದಾಗ ಆರು ಕಾಲೇಜುಗಳನ್ನು ಪ್ರಾರಂಭಿಸಲು ಪ್ರಯತ್ನಮಾಡಿದ್ದಾರೆ. ಮಾಡಿರಿ, ತಕರಾರಿಲ್ಲ, ಆದರೆ ಈಗಿನ ಕಾಲೇಜಿಗೆ ನಮ್ಮ ಮಿತ್ರರು ಹೇಳಿದಂತೆ ವ್ಯವಸ್ಥೆ ಇಲ್ಲ. ಹುಬ್ಬಳಿ ಬಹಳ ಹಳೆಯ ನನಗೆ ತಿಳಿದಮಟ್ಟಿಗೆ ಅಲ್ಲಿನ ನಾಲ್ಕೇಂಟು ಜಿಲ್ಲೆಗಳಿಗೆಲ್ಲಾ ದೊಡ್ಡ ಕಾಲೇಜು ಮಾಡಿದ್ದಾರೆ ಆಸ್ಪತ್ರೆ ಮಾಡಿದ್ದಾರೆ, ಎಲ್ಲಾ ಇದೆ. ಅಲ್ಲಿ ಸ್ಪೆಷಲಿಸ್ಟ್ ಯಾರಾದರೂ ಇದ್ದಾರಾ? ಎಷ್ಟು ಜನರಿದ್ದಾರೆ ಹೇಳಿ ನೋಡೋಣ. ಅಲ್ಲಿ ಬಹಳ ಕೊರತೆ ಇದೆ. ಆಮೇಲೆ ನೀವು ಕೊಡುವ ಸಂಬಳಕ್ಕೆ ಯಾರೂ ಬರುವುದಿಲ್ಲ. ಸ್ಪೆಶಲಿಸ್ಟ್ಸ್ ಬರುವುದೇ ಇಲ್ಲ. ಖಾಸಗಿ ಮೆಡಿಕಲ್ ಕಾಲೇಜಿನವರು 50ರಿಂದ ಲಕ್ಷರೂವರೆಗೆ ಕೊಡುತ್ತಿದ್ದಾರೆ, ನೀವು ಕೊಡುವುದಿಲ್ಲ ಅಂದರೆ ಅವರು ಹೇಗೆ ಬರುತ್ತಾರೆ? ಆದ್ದರಿಂದ ಮುಂದೇನು ನೀವು ಸ್ಥಾಪಿಸುವಿರಿ ಅವೂ ಸರಿಯಾಗಿ ನಡೆಯುವುದಿಲ್ಲ. ಕೆಎಂಸಿಯದ್ದು ಮೊದಲು 150 ಸೀಟಿದ್ದುದ್ದು ಈಗ ನೂರಕ್ಕೆ ಇಳಿಸಿದ್ದಾರೆ. ಕಾರಣವೇನು? ಅಲ್ಲಿ ವ್ಯವಸ್ಥೆ ಇವತ್ತೂ ಮಾಡುತ್ತಿಲ್ಲ. ಮೊದಲಿಂದ ನಾವು ಹೇಳುತ್ತಿದ್ದೇವೆ. ದಯವಿಟ್ಟು ನೀವು ಕೆಎಂಸಿಯನ್ನು ಹೆಚ್ಚು ಅಭಿವೃದ್ಧಿಪಡಿಸಲು ಪ್ರಯತ್ನಿಸಬೇಕು.

ಶ್ರೀ ಅರಗ ಜ್ಞಾನೇಂದ್ರ : ಶಿವಮೊಗ್ಗ ಮೆಡಿಕಲ್ ಕಾಲೇಜ್ ಬಗ್ಗೆ ಹಿಂದಿನ ಮುಖ್ಯಮಂತ್ರಿಗಳೇ ಬಂದು ಶಂಕುಸ್ಥಾಪನೆ ಮಾಡಿದರು. ಈಗ ಸರ್ಕಾರದ ಕಾರ್ಯಕ್ರಮಗಳೇನು ಅಂತ ನಮಗೆ ಗೊತ್ತಾಗಲಿಲ್ಲ. ಎಷ್ಟು ಹಣ ಇಟ್ಟುಕೊತಿದ್ದೀರಿ. ಏನಾಗುತ್ತದೆ ಈ ಸಾರಿ ಪ್ರಾರಂಭ ಮಾಡುವ ದೃಷ್ಟಿಯಿಂದ ಏನೇನು ಮಾಡಿದ್ದೀರಿ ಎಂಬ ಬಗ್ಗೆ ದಯವಿಟ್ಟು ಒಂದು ವಿವರಣೆ ಕೊಡಬೇಕು.

ಶ್ರೀ ಕೆ.ಜಯಪ್ರಕಾಶ್ ಕೆ ಹೆಗ್ಡೆ : ಬರೀ ಮೆಡಿಕಲ್ ಕಾಲೇಜಲ್ಲ, ಬಾಕಿಯದಕ್ಕೂ ರಾಜ್ಯದಾದ್ಯಂತ ನೀವು ಎಷ್ಟು ಶಂಕುಸ್ಥಾಪನೆ ಮಾಡಿದ್ದೀರಿ ಅಂತ ಲೆಕ್ಕಹಾಕುತ್ತಾ ಹೋಗಬೇಕು. ಕೆಲಸವಾಗದೇ ಪ್ರಾರಂಭವಾಗದೇ ಉಳಿದಿರುವ ಬಗ್ಗೆ.

ಡಾ: ವಿ.ಎಸ್. ಆಚಾರ್ಯ : ಮಾನ್ಯ ಸದಸ್ಯರು ಕೇಳಿದ್ದರ ಬಗ್ಗೆ ಈ ಸಂದರ್ಭದಲ್ಲಿ ನಾನು ಮಾತನಾಡುತ್ತಿರುವುದು: ಒರಿಜಿನಲ್ ಬಜೆಟ್‌ನಲ್ಲಿ ಕಳೆದ 30 ಕೋಟಿ ರೂ ಮಾತ್ರ ಇಡಲಾಗಿತ್ತು. ನಾವು ಈಗ 82 ಕೋಟಿ ರೂ ಅಂದರೆ ಹೆಚ್ಚುವರಿಯಾಗಿ 50 ಕೋಟಿ ರೂ ಈ ಬೇಡಿಕೆಯಲ್ಲಿ ಬಂದಿದೆ. ಹಾಗಾಗಿ ನೀವು ಎತ್ತಿದ್ದು ಪ್ರಸ್ತುತವೂ ಇದೆ ನಾವು ಅದಕ್ಕೆ ಬೇಕಾದ ವ್ಯವಸ್ಥೆಯನ್ನೂ ಮಾಡಿದ್ದೇವೆ. ಶಿವಮೊಗ್ಗ ಸಹಿತ ಈ ಆರೂ ಕಾಲೇಜುಗಳನ್ನು ಆದಷ್ಟು ಶೀಘ್ರ ಪ್ರಾರಂಭ ಮಾಡಬೇಕು ಎಂಬುದೇ ಸರ್ಕಾರದ ನಿರ್ಧಾರ ಇದೆ. ಮಾನ್ಯ ಸದಸ್ಯರು ಹೇಳಿದಂತೆ ಎಂಸಿಐ ನಿಯಮಗಳು ಬಹಳ ರಿಜಿಡ್ ಇವೆ. ಕಟ್ಟಡದ ವಿಷಯದಲ್ಲಿ ಆಸ್ಪತ್ರೆಯನ್ನು ಪುನರ್‌ನವೀಕರಣಗೊಳಿಸುವ ವಿಚಾರದಲ್ಲಾದರೆ ನಾವು ರಾತ್ರಿಹಗಲು ದುಡ್ಡು ಖರ್ಚು ಮಾಡಿ ಮಾಡಬಹುದು, ಅದರೆ ನಮ್ಮ ರಾಜ್ಯದಲ್ಲಂತೂ ಅಷ್ಟು ಸಿಬ್ಬಂದಿ ಲಭ್ಯವಿಲ್ಲ, ಹೊರರಾಜ್ಯ ಗಡಿರಾಜ್ಯಪ್ರದೇಶ ದಲ್ಲಿರುವವರನ್ನು ಪಡೆಯಲು ವಾಕ್‌ಇನ್ ಇಂಟರ್‌ವ್ಯೂ ಮಾಡಲು, ಐದು ಇನ್‌ಕ್ರಿಮೆಂಟ್ಸ್ ಹೆಚ್ಚಿಗೆ ಕೊಡಲಿಕ್ಕೆ ಈ ರೀತಿ ಸರ್ಕಾರದ ನಿಯಮಾವಳಿಯ ಇತಿಮಿತಿಯೊಳಗೆ ಏನೇನು ಮಾಡಬಹುದು ಎಂಬ ಬಗ್ಗೆ ಮನುಷ್ಯಸಹಜ ಎಲ್ಲಾ ಪ್ರಯತ್ನವನ್ನೂ ನಾವು ಮಾಡುತ್ತಾ ಇದ್ದೇವೆ. ಈಗಾಗಲೇ ನಾನು ಮಂಡ್ಯಕ್ಕೆ ಭೇಟಿ ಕೊಟ್ಟಿದ್ದೇವೆ, ಮುಂದಿನ 15 ದಿವಸಗಳೊಳಗೆ ನಮ್ಮ ಸರ್ಕಾರಿ 3 ಮೆಡಿಕಲ್ ಕಾಲೇಜು ಮತ್ತು ಹೊಸ ಐದು ಮೆಡಿಕಲ್ ಕಾಲೇಜುಗಳಿಗೆ ಭೇಟಿ ಕೊಟ್ಟು ಅಲ್ಲಿ ಈ ಎಲ್ಲಾ ಪರಿಸ್ಥಿತಿ ಕಟ್ಟಡ, ಆಸ್ಪತ್ರೆ, ಮತ್ತು ಸಿಬ್ಬಂದಿ ಈ ಎಲ್ಲಾ ವ್ಯವಸ್ಥೆಗಳನ್ನು ಎಂಸಿಐ ನ ನಾರ್ಮ್ಸ್‌ನ ಪ್ರಕಾರ ಹೇಗೆ ಸಜ್ಜುಗೊಳಿಸಬಹುದು ಎನ್ನುವುದರ ಬಗ್ಗೆ ಒಂದು ವಿಚಾರಣೆಯನ್ನು ಮಾಡಿಕೊಂಡು ಬರುವವನಿದ್ದೇನೆ. ನಿಮ್ಮೆಲ್ಲರ ಸಹಾಯವೂ ಬೇಕು. ನಾನು ಅಲ್ಲಿಗೆ ಆಮಂತ್ರಣ ಮಾಡುತ್ತೇನೆ. ಆ ಬೇಟಿಯ ಸಂದರ್ಭದಲ್ಲಿ ತಾವೆಲ್ಲರೂ ನಮಗೆ ರಚನಾತ್ಮಕವಾಗಿ ಸಲಹೆಯನ್ನು ಕೊಟ್ಟರೆ ನಮ್ಮ ಈ ಒಂದು ಪ್ರಯತ್ನದಲ್ಲಿ ನೀವು ಕೂಡ ಕೈಗೂಡಿಸಿದ ಹಾಗೆ ಆಗುತ್ತದೆ ಎನ್ನತಕ್ಕ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೇ, ಮೆಡಿಕಲ್ ಕಾಲೇಜುಗಳನ್ನು ಪ್ರಾರಂಭ ಮಾಡುವುದಕ್ಕೆ ನಿಮಗೆ trained staff ಎಲ್ಲಿದ್ದಾರೆ? ನಿಮಗೆ staff ಸಿಗುವುದಿಲ್ಲ. Professors ಸಿಗುವುದಿಲ್ಲ. Associate Professors. ಸಿಗುವುದಿಲ್ಲ. ನಿಮಗೆ Nursing Staff ಕೂಡ ಸಿಗುವುದಿಲ್ಲ. ಇದನ್ನೆಲ್ಲಾ ಮಾಡಿದಾಗ ಮಾತ್ರ ಸಾಧ್ಯವಾಗುತ್ತದೆ. ಇನ್ನೊಂದು ದೊಡ್ಡ ಪ್ರಶ್ನೆ. ಇವರುಗಳು ಕಾಲೇಜುಗಳನ್ನು ಸ್ಥಾಪನೆ ಮಾಡುವುದಕ್ಕೆ ಸ್ಟಾಫ್ ಎಲ್ಲಿದೆ? ಏನು? ಮೈಸೂರಿನಲ್ಲೂ ಇಲ್ಲ. ಬೆಂಗಳೂರಿನಲ್ಲೂ ಇಲ್ಲ. ಒಂದು ಒಳ್ಳೆಯದು ಎಂದರೆ ಹಳೆಯ ವಿದ್ಯಾರ್ಥಿಗಳು ಬೆಂಗಳೂರು ಮೆಡಿಕಲ್ ಕಾಲೇಜ್‌ನವರು ವಿದೇಶದಲ್ಲಿ ಇದ್ದವರು ಆ ಕಾಲೇಜನ್ನು ಅಭಿವೃದ್ಧಿ ಮಾಡಿದ್ದಾರೆ. ಅದೇ ರೀತಿ ಎಲ್ಲಾ ಕಾಲೇಜುಗಳಲ್ಲೂ ಪ್ರಯತ್ನ ಮಾಡಿದರೆ ಅಲ್ಲಿ ಅಭಿವೃದ್ಧಿ ಮಾಡುವುದಕ್ಕಾಗುತ್ತದೆ. ಅದನ್ನು ಮಾಡಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಜಯದೇವ ಕಾರ್ಡಿಯಾಲಜಿಯಲ್ಲಿಯೇ ಎರಡು ಪ್ರೊಫೆಸರ್ ಪೋಸ್ಟ್‌ಗಳನ್ನು ತುಂಬುವುದಕ್ಕೆ eligible candidates ಇಲ್ಲ ಮೈಸೂರು ಮೆಡಿಕಲ್ ಕಾಲೇಜಿನಲ್ಲಿ 60 ಪೋಸ್ಟ್‌ಗಳು ಖಾಲಿ ಇವೆ. ಪ್ರೊಫೆಸರ್‌ಗಳು ಮೆಡಿಕಲ್ ಕಾಲೇಜಿಗೆ

ಇಲ್ಲವೇ ಇಲ್ಲ. ಎಂಸಿಐ ನಾರ್ಮ್ಸ್ ಪ್ರಕಾರ ಯಾವ ಮೆಡಿಕಲ್ ಕಾಲೇಜಿಗೆ staff ಅನ್ನು ಹಾಕುತ್ತೀರಿ? ಎಲ್ಲಿಂದ ತಂದು ಹಾಕುತ್ತೀರಿ? ಇವರನ್ನೆಲ್ಲಾ ಆಂಧ್ರದಿಂದ ಕರೆದುಕೊಂಡು ಬರುತ್ತೀರಾ? ಮಹಾರಾಷ್ಟ್ರದಿಂದ ಕರೆದುಕೊಂಡು ಬರುತ್ತೀರಾ? ಅದನ್ನು ನೀವು ಹೇಳಬೇಕಲ್ಲಾ ಆರು ಮೆಡಿಕಲ್ ಕಾಲೇಜುಗಳಿಗೆ ಪೋಸ್ಟಿಂಗ್ ಮಾಡುವುದಕ್ಕೆ ನಿಮಗೆ ಶಕ್ತಿಯೇ ಇಲ್ಲ. ತಮಗೆ ನಾನು ಹೇಳಿದ್ದೇನೆ. ಎರಡು ಷೆಡ್ಯೂಲ್ಡ್ ಕ್ಯಾಸ್ಟ್ ಪೋಸ್ಟನ್ನು ಇನ್ನು ಐದು ವರ್ಷವಾದರೂ ಜಯದೇವ ಕಾರ್ಡಿಯಾಲಜಿಗೆ ಹಾಕುವುದಕ್ಕಾಗುವುದಿಲ್ಲ. ನಿಮ್ಮ ಸೆಕ್ರೆಟರಿಗಳಿಗೆ ಅಲ್ಲಿ ದಂಧೆ ಮಾಡಬೇಕು, ಅವರು ಅದನ್ನು ತುಂಬುವುದಕ್ಕೆ ಬೇರೆಯವರನ್ನೂ ಬಿಡುವುದಿಲ್ಲ. ಕಂಟ್ರಾಕ್ಟ್‌ನಲ್ಲಿ ಅಥವಾ ಎಕ್ಸ್‌ಟೇನ್ಷನ್ ಕೊಟ್ಟವರಿಗೆ ವಿಕ್ಟೋರಿಯಾಗೆ ಕೊಟ್ಟು ಅಲ್ಲಿ ಬಳಸಿಕೊಳ್ಳಿ ಎಂದರೂ ಅದನ್ನು ನೀವು ಮಾಡುವುದಿಲ್ಲ ನಿಮ್ಮದು ಯೂನಿಟ್‌ಗಳೇ ಕಂಪ್ಲೀಟ್ ಆಗಿಲ್ಲವಲ್ಲಾ. ಇಲ್ಲಿರುವ ಯೂನಿಟ್‌ಗಳನ್ನೇ ಮುಗಿಸಿಲ್ಲ. ಇನ್ನು ಮೆಡಿಕಲ್ ಕಾಲೇಜಿಗೆ ಎಲ್ಲಿ ಸ್ಟಾಫ್‌ನ್ನು ತರುತ್ತೀರಿ?

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೇ, ಒಬ್ಬರೇ ಪ್ರೊಫೆಸರ್ ಬೇರೆ ಬೇರೆ ಕಾಲೇಜುಗಳಿಗೆ ಹೋಗುತ್ತಾರೆ. ಅದನ್ನು ಬೇಕಾದರೆ ನೋಡಿ. ಕಾಲೇಜುಗಳಲ್ಲಿ ವಾರಕ್ಕೊಂದು ದಿವಸ, ತಿಂಗಳಿಗೊಂದು ದಿವಸ ಸಾಕು, ಎರಡು ದಿವಸ ಬಂದರೆ ಸಾಕು ಎಂದು ಹೇಳುವ ಪರಿಸ್ಥಿತಿ ಬಂದಿದೆ. ಈ ಪೂರಕ ಬಜೆಟ್‌ನಲ್ಲಿ ನೀವು ಇಷ್ಟನ್ನೆಲ್ಲಾ ಪಾಸು ಮಾಡಿಕೊಳ್ಳುತ್ತೀರಿ. ಇನ್ನು ಕೆಪಿಟಿಸಿಎಲ್‌ಗೆ ಎಷ್ಟು ಬಾಕಿ ಇದೆ? ಪಿಡಬ್ಲೂಡಿ ಬಿಲ್ಸ್ ಬಾಕಿ ಇದೆ. ಮೂರನೆಯದನ್ನು ಮಂಡಿಸಿ ಪಾಸು ಮಾಡಿಕೊಂಡು ಉಳಿದದ್ದಕ್ಕೆ ಎಷ್ಟು ಬಾಕಿ ಇದೆ ಎಂದು ಒಂದು ಲೆಕ್ಕವನ್ನು ಕೊಡಬೇಕಾಗುತ್ತದೆ. ಏಕೆಂದರೆ ಮೂರನೇ ಸಾರಿ ಪಾಸು ಮಾಡಿಬಿಟ್ಟರೆ ಎಲ್ಲಾ ಮುಗಿಯಿತು ಎಂದಲ್ಲ. ಎಷ್ಟು ಬಾಕಿ ಇದೆ ಎನ್ನುವದನ್ನೂ ಲೆಕ್ಕ ಕೊಡಬೇಕಾಗುತ್ತದೆ. ಮುಂದಿನ ದಿನಗಳಲ್ಲಿ ಇದನ್ನು ಸ್ವಲ್ಪ ಬದಲಾವಣೆ ಮಾಡಬೇಕೆಂದು ನಾನು ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ಹತ್ತಿರ ಕೇಳುತ್ತಿದ್ದೇನೆ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೇ ಒಂದು ಸಲಹೆ. ನಾನು ಹೆಚ್ಚಿಗೆ ವಿಸ್ತಾರವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ನನ್ನ ವಿನಂತಿ ಇಷ್ಟೇನೇ ನಾನು ತಮ್ಮ ಗಮನಕ್ಕೂ ತಂದಿದ್ದೇನೆ ಮಾನ್ಯ ಹಣಕಾಸು ಸಚಿವರ ಗಮನಕ್ಕೆ. ಕಳೆದ ಕೃಷ್ಣಾ ಸರ್ಕಾರದಲ್ಲಿ ಮತ್ತು ಧರ್ಮಸಿಂಗ್ ಸರ್ಕಾರದಲ್ಲಿ ಎರಡೂ ಸರ್ಕಾರಗಳಲ್ಲಿ ಸರ್ಕಾರದ ನೀತಿ ಇತ್ತು. ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಫೀ ರೀ-ಇಂಬರ್ಸ್‌ಮೆಂಟ್ ಮಾಡುತ್ತೇವೆ ಅನುದಾನಿತ ಕಾಲೇಜುಗಳಿಗೆ ಎಂದು ಇತ್ತು. ಇವತ್ತಿನವರೆಗೆ ಮಾಡಲಿಲ್ಲ. 62 ಕೋಟಿ ರೂಪಾಯಿಗಳ ಬಾಕಿ ಇದೆ. ನನ್ನ ಕ್ಷೇತ್ರದ ಒಬ್ಬ ವಿದ್ಯಾರ್ಥಿಗೆ ಕಳೆದ ವರ್ಷ ಇಂಜಿನಿಯರಿಂಗ್ ಕಾಲೇಜಿನಲ್ಲಿ ಅವನು ಪಾಸಾದ ಸರ್ಟಿಫಿಕೇಟ್ ಕೊಡುವುದಕ್ಕೆ ನೀನು 25 ಸಾವಿರ ಫೀ ರೀ-ಇಂಬರ್ಸ್‌ಮಂಟನ್ನು ಕಟ್ಟು, ಆಮೇಲೆ ತೆಗೆದುಕೊಂಡು ಹೋಗು ಎಂದು ಹೇಳಿದರು. ಫೈನಾನ್ಸ್‌ನಲ್ಲಿ ಸಾಲ ಮಾಡಿ ಅಲ್ಲಿ ತಂದು ಕಟ್ಟಿ ಸಾಯುತ್ತಿದ್ದಾನೆ. ಇಲ್ಲಾ ಸರ್ಕಾರದವರು ನೀವು ಹೇಳಬೇಕು. ನಮ್ಮ ನೀತಿ ಇಲ್ಲ. ನಿಮ್ಮ ಹಣೆಬರಹ, ನೀವು ಹೇಗಾದರೂ ಓದಿಕೊಳ್ಳಿ ಎಂದು ಹೇಳಿ. ಇಲ್ಲದಿದ್ದರೆ ಬಿಪಿಎಲ್ ಕೆಳಗಡೆ ಇರುವ ವಿದ್ಯಾರ್ಥಿಗಳಿಗೆ ಫೀ ರೀ-ಇಂಬರ್ಸ್‌ಮೆಂಟ್‌ಗೆ ನಿಮ್ಮ ನೀತಿ ಇದ್ದಾಗ್ಯೂ ಕೂಡ ಕಳೆದ ಮೂರ್ನಾಲ್ಕು ವರ್ಷದಿಂದ ಪೇಮೆಂಟನ್ನು ಮಾಡಲಿಲ್ಲ ಅದು ಪೂರಕ ಅಂದಾಜುಗಳಲ್ಲಿ ಬರಲಿಲ್ಲ. ಫೈನಾನ್ಸ್

ಡಿಪಾರ್ಟ್‌ಮೆಂಟ್‌ನವರಿಗೆ ಅದು ಮರೆತುಹೋಗಿದೆಯಾ ಅಥವಾ ಅವರ ಮಕ್ಕಳಿಗೇನು ತೊಂದರೆ ಇಲ್ಲವೆಂದು ಹೇಳಿ ಇದನ್ನೆಲ್ಲಾ ಸೇರಿಸುವುದಿಲ್ಲವಾ? ಇದು ಯಾವ ಅವ್ಯವಸ್ಥೆ ಸ್ವಾಮಿ? ಮಾನ್ಯ ಯಡಿಯೂರಪ್ಪನವರಲ್ಲಿ ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ, 62 ಕೋಟಿ ರೂಪಾಯಿಗಳು ಫೀ ರೀ-ಇಮಬರ್ಸ್‌ಮೆಂಟೇನು ಎಂದು ಯೋಚನೆಯನ್ನು ಮಾಡುತ್ತಾರೆ. ಇಲ್ಲಾ ಹಾಳಾಗಿ ಹೋಗುತ್ತಾರೆ. ಈ ರೀತಿಯಲ್ಲಿ ಆ ವಿದ್ಯಾರ್ಥಿಗಳ ಒಂದು ಭವಿಷ್ಯಕ್ಕೆ ಕಲ್ಲು ಹಾಕುವ ಕೆಲಸಗಳು ಕಳೆದ ಸರ್ಕಾರಗಳ ಕಡೆಯಿಂದ ಇದು ನಡೆದು ಬಂದಿದೆ ಮತ್ತೆ ನಮ್ಮ ಅಧಿಕಾರಿಳು ಇದಕ್ಕೆ ಸರಿಯಾಗಿ ಪೂರಕವಾಗಿ ಸ್ಪಂದಿಸುತ್ತಿಲ್ಲ. ಅವರಿಗೆ ಅರ್ಥವಾಗುತ್ತಿಲ್ಲ. ಏಕೆಂದರೆ ಅವರಿಗೆ ಬೇಕಾದಷ್ಟು ಕೈತುಂಬಾ ಸಂಬಳ ಬರುತ್ತದೆ. ಅವರ ಮಕ್ಕಳನ್ನು ವಿದೇಶದಲ್ಲಿ ಬಿಟ್ಟು ಓದಿಸುತ್ತಾರೆ. ಬಡವರ ಮಕ್ಕಳು ಓದುವಂಥ ಕಾಲೇಜುಗಳಲ್ಲಿ ಏನು ಅವ್ಯವಸ್ಥೆಯಾಗಿದೆ ಎಂದು ಹೇಳಿ ಆರ್ಥಿಕ ಇಲಾಖೆಯಲ್ಲಿರತಕ್ಕಂಥ ಅಧಿಕಾರಿಗಳ ಗಮನಕ್ಕೆ ಬರುವುದಿಲ್ಲವೆಂದು ಹೇಳಿದರೆ ಇದು ನಮ್ಮ ದುರಾದೃಷ್ಟ. ದಯವಿಟ್ಟು 62 ಕೋಟಿ ರೂಪಾಯಿಗಳನ್ನು ಸೇರಿಸಿ. ಏಕೆಂದರೆ 1692 ಕೋಟಿ ರೂ ಗೆ ಪಾಸು ಮಾಡುತ್ತಿದ್ದೇವೆ. ಏಕೆಂದರೆ ನಾವೆಲ್ಲಾ ಹೋದ ಸಾರಿ ಎಲ್ಲಾ ಹೊಗಳಿದ್ದೇವೆ. ಬಹಳ ಒಳ್ಳೆಯ ಬಜೆಟ್ ಇದು ಎಂದು ಹೇಳಿ. Surplus ಬಜೆಟ್ ಎಂದು ಹೇಳಿ ಹೊಗಳಿಬಿಟ್ಟಿದ್ದೇವೆ. ಮಾಧ್ಯಮಗಳಲ್ಲೂ ಬಹಳ ಚೆನ್ನಾಗಿ ಪ್ರತಿಬಿಂಬಿತವಾಗಿದೆ. ಇಲ್ಲಿ ನೋಡಿದರೆ ಸಂಬಳ ಸಾರಿಗೆಗೂ ಕೊಡುವುದನ್ನೂ ಸೇರಿಸಿಕೊಳ್ಳದೆ ಈ ರೀತಿ ಒಂದು ತರಹ ಎಲ್ಲೋ ಒಂದು ಕಡೆ ಮುಸುಕಿನಲ್ಲಿಟ್ಟು ಒಂದು ಬಜೆಟನ್ನು ತಯಾರು ಮಾಡತಕ್ಕ ರೀತಿ ಇದೆಯಲ್ಲಾ ಇದನ್ನು ನಾವು ಒಪ್ಪುವುದಕ್ಕಾಗುವುದಿಲ್ಲ, ಇದು ಯಾರಿಗೂ ಕೂಡ ಶೋಭೆ ತರತಕ್ಕ ಸಂಗತಿಯಲ್ಲ. ಸಂಬಳ ಎಷ್ಟು ಕೊಡಬೇಕಾಗುತ್ತದೆ, ಮಾಧುಸ್ವಾಮಿಯವರು ಬಹಳ ವಿವರವಾಗಿ ಹೇಳಿದರು, ನಾನು ಅದನ್ನು ಒಪ್ಪುತ್ತೇನೆ. ಸಂಬಳ ಕೊಡುವುದನ್ನೂ ಕೂಡ ಬಜೆಟ್‌ನಲ್ಲಿ ಸೇರಿಸಿಕೊಳ್ಳುವುದಕ್ಕಾಗುವುದಿಲ್ಲ ಈಗ ಪೂರಕ ಅಂದಾಜುಗಳಲ್ಲಿ ತಂದು ಇಡುತ್ತೇವೆಂದು ಹೇಳಿದರೆ ಇದು ಅರ್ಥವಿಲ್ಲದ ಬಜೆಟ್‌ಗಳಾಗುತ್ತವೆ. ಬಜೆಟ್ ಬಗ್ಗೆಯೇ ಲಘುವಾದಂಥ ಭಾವನೆಗಳು ನಿರ್ಮಾಣವಾಗುತ್ತವೆ. ದಯವಿಟ್ಟು ನಮ್ಮ ಫೈನಾನ್ಸ್ ಮಿನಿಸ್ಟರ್ ರವರು ಆ 61 ಕೋಟಿ ರೂಪಾಯಿಗಳನ್ನು ಸೇರಿಸಿ ಒಂದು ಸಾರಿ ಈ ರಾಜ್ಯದಲ್ಲಿರತಕ್ಕ ಅನುದಾನಿತ ಕಾಲೇಜುಗಳಿಗೆ ಫೀ ರೀ-ಇಂಬರ್ಸ್‌ಮೆಂಟನ್ನು ವಾಪಸ್ ಕೊಡಿಸಬೇಕೆಂದು ಹೇಳಿ ನಾನು ವಿನಂತಿಯುನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ನಿಂಗಪ್ಪ (ಕುಣಿಗಲ್) : ಮಾನ್ಯ ಅಧ್ಯಕ್ಷರೇ, ಈ ಪೂರಕ ಅಂದಾಜಿನಲ್ಲಿ ವಿವಿಧ ವಿಶ್ವವಿದ್ಯಾನಿಲಯಗಳಿಗೆ ಇಲ್ಲಿ ಅನುದಾನವನ್ನು ನಿಗದಿಪಡಿಸಿದೆ. ಆದರೆ ತುಮಕೂರು ವಿಶ್ವವಿದ್ಯಾನಿಲಯ, ಅದು ಹೊಸದಾಗಿ ಪ್ರರಂಭವಾಗಿರತಕ್ಕ ವಿಶ್ವವಿದ್ಯಾನಿಲಯ. ಈ ಹೊಸ ವಿಶ್ವವಿದ್ಯಾನಿಲಯಕ್ಕೆ ಈ ಪೂರಕ ಅಂದಾಜಿನಲ್ಲಿ ಅನುದಾನವನ್ನು ನಿಗದಿಪಡಿಸಿಲ್ಲ ಇಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕಾದರೆ ಮತ್ತು ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಬೇಕಾದರೆ ಮತ್ತು ಹೊಸದಾಗಿ ಪ್ರಾರಂಭವಾಗಿರತಕ್ಕ ವಿಶ್ವವಿದ್ಯಾನಿಲಯ ಸುಲಲಿತವಾಗಿ ಕಾರ್ಯವನ್ನು ನಿರ್ವಹಿಸಬೇಕಾದರೆ, ಅದಕ್ಕೆ ಅಗತ್ಯವಾಗಿ ಬೇಕಾಗಿರತಕ್ಕಂಥ ಅನುದಾನವನ್ನು ಒದಗಿಸಬೇಕಾಗಿತ್ತು ಈಗಾಗಲೇ ವಿಶ್ವವಿದ್ಯಾನಿಲಯದ ವತಿಯಿಂದ ಸಂಬಧಪಟ್ಟವರು ಅದಕ್ಕೆ ಅವಶ್ಯಕವಾದ ಅನುದಾನಕ್ಕೆ [illegible]

ಶ್ರೀ ಜೆ.ಸಿ.ಮಾಧುಸ್ವಾಮಿ : ವೈಸ್ ಛಾನ್ಸಲರ್ ನಮಗೆ ಕಾಗದವನ್ನು ಬರೆಯುತ್ತಾರೆ ಸಾರ್. ಎಂಎಲ್‌ಎ ಗ್ರಾಂಟ್‌ನಲ್ಲಾದರೂ ದುಡ್ಡನ್ನು ಕೊಡಿ ಎಂದು. ನೋಡಿ ಸಾರ್. ನಾವು ಹುಡುಗಾಟಿಕೆಗೆ ಹೇಳುವುದಿಲ್ಲ ನಮಗೆ ಕೊಡುವುದಕ್ಕೆ ಬರುವುದಿಲ್ಲ ಸಾರ್. ಸತ್ಯವಾಗಿಯೂ ಹೇಳುತ್ತಿರುವುದು. ನಾನು ಕಾಗದವನ್ನು ತಂದು ನಿಮಗೆ ಕೊಡುತ್ತೇನೆ. ಯೂನಿವರ್ಸಿಟಿಗೆ ನಾವೇನೂ ಮಾಡುವ ಸ್ಥಿತಿಯಲ್ಲಿಲ್ಲ. ನಮ್ಮ ಎಂಎಲ್‌ಎ ಗ್ರಾಂಟ್ ಆದರೂ ಡೈವರ್ಟ್ ಮಾಡಿ ಸಾರ್. ಅದಕ್ಕಾದರೂ ಒಂದು ಪರ್ಮಿಷನನ್ನು ಕೊಟ್ಟುಬಿಡಿ. ನಮ್ಮ ಎಂಎಲ್‌ಎ ಗ್ರಾಂಟ್‌ನಲ್ಲಿ ಯೂನಿವರ್ಸಿಟಿಗೆ ಕೊಡುತ್ತೇವೆ.

ಶ್ರೀ ಹೆಚ್.ನಿಂಗಪ್ಪ :– ಮಾನ್ಯ ಅಧ್ಯಕ್ಷರೇ, ವಿಶ್ವವಿದ್ಯಾನಿಲಯ ಕುಲಪತಿಗಳು ಈಗಾಗಲೇ ಪತ್ರವನ್ನು ಬರೆದಿದ್ದಾರೆ. ಬೇಕಾದಷ್ಟು ಸಾರಿ ಕೇಳಿಕೊಂಡಿದ್ದಾರೆ. ಆಮೇಲೆ ಅಲ್ಲಿ ಕೆಲಸ ಮಾಡಲಿಕ್ಕೆ ಸಿಬ್ಬಂದಿ ಇಲ್ಲ. ಸಿಬ್ಬಂದಿ ನೇಮಕ ಮಾಡಿಕೊಳ್ಳಬೇಕಾದರೂ ಅಲ್ಲಿ ಹಣ ಇಲ್ಲ. ಜೊತೆಗೆ ಈಗ ಏನಾಗಿದೆ ಎಂದರೆ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಿದಮೇಲೆ ಅದಕ್ಕೆ ಅವಶ್ಯಕವಾಗಿ ಬೇಕಾಗಿರತಕ್ಕ ಕಟ್ಟಡ ನಿರ್ಮಾಣಕ್ಕೆ ಜಾಗ ಬೇಕಾಗಿದೆ. ಈಗ ಸರ್ಕಾರದವರು ನೂರು ಎಕರೆ ಜಾಗವನ್ನು ದೇವರಾಯದುರ್ಗದಲ್ಲಿ ಮಂಜೂರು ಮಾಡಿದ್ದರು. ರೆವಿನ್ಯೂ ದಾಖಲೆಗಳಲ್ಲಿ ಅದು ಹುಲ್ಲುಬಂದಿ ಎಂದು ಇದೆ. ಆದರೆ 1940 ರ ಗೆಜೆಟಿಯರ್‌ನಲ್ಲಿ ಫಾರೆಸ್ಟ್ ಎಂದು ಇರುವುದರಿಂದ ಅದನ್ನು ಕೊಡುವುದಕ್ಕೆ ಬರುವುದಿಲ್ಲ ಎನ್ನುವ ಕಾರಣವನ್ನು ತೋರಿಸಿ 300 ಎಕರೆಯಿಂದ ಈಗ 75 ಎಕರೆಗೆ ಅದನ್ನು ಕಡಿತಗೊಳಿಸಿದ್ದಾರೆ. ಆಮೇಲೆ ಏನಾಗಿದೆ ಎಂದರೆ ಅಲ್ಲಿ ಪರಿಸರವಾದಿಗಳು ಗಲಾಟೆ ಮಾಡಿದರು ಎನ್ನುವುದು ಒಂದು ಕಾರಣ. ಜೊತೆಗೆ 75 ಎಕರೆ ಜಾಗವನ್ನು ಕೊಟ್ಟಿದ್ದರೂ ಕೂಡ ಅದರಲ್ಲಿರುವ ಒಂದು ಸಣ್ಣ ಮರಗಿಡಗಳನ್ನೂ ಕೂಡ ತೆಗೆಯಬಾರದು, ಅದರ ಯಥಾಸ್ಥಿತಿಯನ್ನು ಕಾಪಾಡಿಕೊಂಡು ಅಲ್ಲಿ ಕಟ್ಟಡ ನಿರ್ಮಾಣ ಮಾಡಬೇಕೆನ್ನುವ ಒಂದು ಷರತ್ತು ಇದೆ. ಅದನ್ನು ಪಾಲಿಸುವುದಕ್ಕೆ ಸಾಧ್ಯವಾಗದೇ ಇರತಕ್ಕ ಒಂದು ಷರತ್ತನ್ನು ಅಲ್ಲಿ ವಿಧಿಸಿರುವುದರಿಂದ ಕಷ್ಟವಾಗುತ್ತದೆ. ಆದ್ದರಿಂದ ಇನ್ನೂ ಬೇಕಾದಷ್ಟು ನಮ್ಮ ಕುಣಿಗಲ್ ತಾಲ್ಲೂಕಿನಲ್ಲೇ ಕಡೆ ಹಾರ್ಟಿಕಲ್ಚರ್‌ಗೆ ಸಂಬಂಧಪಟ್ಟ 600 ಎಕರೆ ಜಾಗ ಇದೆ. ಬೇಕಾದರೆ ಅಲ್ಲಿ ವಿಶ್ವವಿದ್ಯಾನಿಲಯವನ್ನು ಮಾಡಬಹುದು. ಜೊತೆಗೆ ಇವತ್ತೇನು ಈ ವಿಶ್ವವಿದ್ಯಾನಿಲಯವನ್ನು ನಡೆಸುವುದಕ್ಕೆ ಪೂರಕವಾಗಿ ಬೇಕಾಗಿರತಕ್ಕ ಅನುದಾನವನ್ನು ಮಿಸಲಿಡಬೇಕೆಂದು ನಾನು ಮಾನ್ಯ ಅರ್ಥಸಚಿವರನ್ನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು ಹಾಗೂ ಅರ್ಥ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರುಗಳು ಈ ಪೂರಕ ಅಂದಾಜುಗಳ ಬಗ್ಗೆ ಮಾತನಾಡುವಂತಹ ಕಾಲದಲ್ಲಿ ಅನೇಕ ಸಲಹೆಗಳನ್ನು ನೀಡಿದ್ದಾರೆ. ನಾನು ಆಯವ್ಯಯದ ಬಗ್ಗೆ ಉತ್ತರ ಕೊಡುವಂತಹ, ಕಾಲದಲ್ಲಿ ಸವಿಸ್ತಾರವಾಗಿ ಕೆಲವು ತಾವು ಹೇಳಿದಂತಹ ಸಲಹೆಗಳ ಆಧಾರದ ಮೇಲೆ ಉತ್ತರವನ್ನೂ ಕೊಡುತ್ತೇನೆ. ತಮ್ಮ ಸಲಹೆಗಳನ್ನು ಮುಂದೆ ಬರುವ ದಿವಸಗಳಲ್ಲಿ ಅನುಷ್ಟಾನಗೊಳಿಸುವುದಕ್ಕೆ ಏನೇನು ಬೇಕೋ ಅದರ ಬಗ್ಗೆ ಪ್ರಾಮಾಣಿಕವಾದ ಪ್ರಯತ್ನವನ್ನು ನಾನು ಮಾಡುತ್ತೇನೆ. ಸಾರ್, 2005–06ರ ಮೂರನೇ ಪೂರಕ ಅಂದಾಜು ಒಟ್ಟು 1692.80 ಕೋಟಿ ರೂಪಾಯಿಗಳಲ್ಲಿ ಕೇಂದ್ರದ ಸಹಾಯಕ್ಕೆ ಸಂಬಂಧಿಸಿದಂಥದ್ದು ಸುಮಾರು 121 ಕೋಟಿ

ರೂಪಾಯಿಗಳು. 33 ಕೋಟಿ ರೂಪಾಯಿ ಜನಗಳಿಗೆ ಸಂಬಂಧಪಟ್ಟಿದ್ದು. ಲೆಕ್ಕ ಹೊಂದಾಣಿಕೆಗೆ ಸಂಬಂಧಿಸಿರುವಂಥದ್ದು ಸುಮಾರು 133 ಕೋಟಿ ರೂಪಾಯಿಗಳು. ಹೀಗಾಗಿ ಸಾಮಾನ್ಯ ರಾಜಸ್ವದಿಂದ ಹೊರ ಹೋಗುವಂತಹ ನಿವ್ವಳ ಮೊತ್ತ 1404 ಕೋಟಿ ರೂಪಾಯಿಗಳು ಮಾತ್ರ. ಸಾಮಾನ್ಯವಾಗಿ ಸಂಪ್ರದಾಯದಂತೆ ಆಯವ್ಯಯದ ಶೇಕಡಾ 10ಕ್ಕಿಂತ ಹೆಚ್ಚಾಗದಂತೆ ನೋಡಿಕೊಳ್ಳಬೇಕು. ಇದು ಬಹಳ ವರ್ಷಗಳಿಂದ ನಡೆದುಕೊಂಡು ಬಂದಿರುವಂತಹ ಒಂದು ಪದ್ಧತಿ. ಈ 2005–06ರ ಆಯವ್ಯಯ ಸುಮಾರು 36 ಸಾವಿರ ಕೋಟಿ ರೂಪಾಯಿಗಳು. ಈ ಲೆಕ್ಕವನ್ನು ನೋಡಿದರೆ ಈ ಸಪ್ಲಿಮೆಂಟರಿ ಬಜೆಟ್ ಬಹಳ ಹೆಚ್ಚಿನದಲ್ಲ. ಹೋದ ಸಾರಿ ಸಹ ಮೂರು ಬಾರಿ ಸಪ್ಲಿಮೆಂಟರಿ ಎಸ್ಟಿಮೇಟನ್ನು ಮಂಡಿಸಲಾಗಿತ್ತು ಎಂಬುದು ತಮಗೆಲ್ಲರಿಗೂ ಗೊತ್ತಿರುವಂತಹ ಸಂಗತಿ. ಈ ಸಂಬಳ, ಟಿಎ ಈ ವೆಚ್ಚಗಳಿಗೆ ಪೂರ್ಣ ಅವಶ್ಯಕತೆಗೆ ಅನುಗುಣವಾಗಿ ಅನುದಾನ ನೀಡಿದಲ್ಲಿ ಇತರ ಅಭಿವೃದ್ಧಿ ವೆಚ್ಚಗಳಿಗೂ ಸಹ ಹಣ ಲಭ್ಯತೆ ಕಡಿಮೆ ಆಗುತ್ತದೆ. ಯಾವುದೇ ಸರ್ಕಾರವೂ ಸಹ ಇದರಲ್ಲಿ ಎಷ್ಟು ಸೇವಿಂಗ್ಸ್ ಮಾಡಲು ಸಾಧ್ಯವಾಗುತ್ತದೆ ಅದನ್ನು ಪಡೆಯಲು ಪ್ರಯತ್ನ ಮಾಡುತ್ತಿದೆ. ಪ್ರಾರಂಭದಲ್ಲಿ ನಾನು ಪೂರಕ ಅಂದಾಜುಗಳನ್ನು ಇಡುವಂತಹ ಕಾಲದಲ್ಲಿಯೇ ಸವಿಸ್ತಾರವಾಗಿ ಯಾವ್ಯಾವ ಬಾಬಿಗೆ ಎಷ್ಟೆಷ್ಟು ಪ್ರಮುಖವಾದಂತಹ ಹಣವನ್ನು ತೆಗೆದು ಇಡುತ್ತಿದ್ದೇವೆಎಂಬ ಮಾತನ್ನು ನಾನು ಹೇಳಿದ್ದೇನೆ. ಉದಾಹರಣೆಗೆ ತಾವು ಮೆಚ್ಚಬೇಕಾಗಿರುವಂತಹದು, ಎಂದರೆ ಈ ನೀರಾವರಿ ನಿಗಮಗಳಿಗೆ ನಾವು ಸಾಲ ಪಡೆಯುವುದಕ್ಕೋಸ್ಕರ ಸರ್ಕಾರ ಗ್ಯಾರಂಟಿ ಕೊಡುತ್ತಿದೆ. ನಾವು ಈ ಬಾರಿ ಒಂದು ಬದಲಾವಣೆ ಮಾಡಿದ್ದೇವೆ. ಆ ಬದಲಾವಣೆ ಏನು ಎಂದರೆ ಈ ಗ್ಯಾರಂಟಿ ಬದಲಿಗೆ ಆಯವ್ಯಯದಲ್ಲಿಯೇ ನಾವು 225 ಕೋಟಿ ರೂಪಾಯಿಯನ್ನು ಕೊಡುವಂತಹ ಪ್ರಯತ್ನ ಮಾಡಿದ್ದೇವೆ. ಮತ್ತೆ ಈ ತ್ವರಿತ ನೀರಾವರಿ ಯೋಜನೆಗೆ 92 ಕೋಟಿ ರೂಪಾಯಿ ಅಡಿಷನಲ್ ಆಗಿ ಕೇಂದ್ರ ದಿಂದ ಬಂದಿದೆ. ಆ 92ರಲ್ಲಿ ಉಳಿದ 22 ಕೋಟಿ ರೂಪಾಯಿ ಸೇರಿಸಿ, ಕೇಂದ್ರದಿಂದ ಬಿಡುಗಡೆ ಹಣ ಎಲ್ಲಾ ಸೇರಿ ನಾವು ಅಡ್ವಾನ್ಸ್ ಆಗಿ ಹಣ ಕೊಡುತ್ತಿದ್ದೇವೆ. ಈ ಕೆಆರ್‌ಡಿಸಿಎಲ್ 45 ಕೋಟಿ ರೂಪಾಯಿಯನ್ನು ಬಾಂಡ್ ಮೂಲಕ ಸಾಲ ಎತ್ತಬೇಕಾಗಿತ್ತು. ನಾಳೆ ಸಾಲ ತಂದರೆ ಬಡ್ಡಿ ಕೊಡಬೇಕಾಗುತ್ತದೆ ಎಂಬ ಈ ಕಾರಣದಿಂದಾಗಿ ನಮ್ಮಿಂದಲೇ ಅದನ್ನು ತುಂಬುವಂತಹ ಪ್ರಯತ್ನವನ್ನು ನಾವು ಮಾಡಿದ್ದೇವೆ. ಈ ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಸಂಸ್ಥೆಗೆ ಬಸ್ ಪಾಸ್ ಸಬ್ಸಿಡಿ ಅದನ್ನು ಕ್ಲಿಯರ್ ಮಾಡುವುದಕ್ಕೋಸ್ಕರ ಮತ್ತು ಅದಕ್ಕೆ ಹೆಚ್ಚಿನ ಅನುಕೂಲತೆಗಳನ್ನು ಮಾಡಿಕೊಡುವುದಕ್ಕೋಸ್ಕರ 46 ಕೋಟಿ 31 ಲಕ್ಷ ರೂಪಾಯಿಯನ್ನು ನಾನು ಇಟ್ಟಿದ್ದೇನೆ. ಇದಲ್ಲದೇ 67 ಕೋಟಿ ರೂಪಾಯಿ ಹೊಸ ಬಸ್ ಸ್ಟ್ಯಾಂಡ್, ಅದರ ಇಂಪ್ರೂವ್‌ಮೆಂಟ್ಸ್‌ಗೋಸ್ಕರ ನಾನು ಹಣವನ್ನು ಕೊಡುತ್ತಿದ್ದೇನೆ. ಮೊದಲ ಬಾರಿಗೆ ಪೋಲೀಸ್ ಹೌಸ್ ಕಾರ್ಪೋರೇಷನ್‌ಗೆ 45 ಕೋಟಿ ರೂಪಾಯಿ ಕೊಡುವಂತಹ ವ್ಯವಸ್ಥೆಯನ್ನು ನಾವು ಮಾಡುತ್ತಿದ್ದೇವೆ. ವಸತಿ ಯೋಜನೆಗೆ ರಾಜ್ಯ ಸರ್ಕಾರದ ಅನುದಾನ ನೀಡಬೇಕಾಗಿತ್ತು. ಈ ಕಾರ್ಯಗಳಿಗೆ 51 ಕೋಟಿ ರೂಪಾಯಿಗಳ ಪ್ರಸ್ತಾವನೆ ಇಲ್ಲಿ ಮಂಡಿಸಿದ್ದೇನೆ. ಹೀಗೆ ನಾನು ಈ ಪೂರಕ ಅಂದಾಜಿನಲ್ಲಿ ಅನಿವಾರ್ಯವಾಗಿರುವಂತಹದನ್ನು ಮಾಡಿದ್ದೇನೆ. ಕ್ರಮೇಣ, ಕ್ರಮೇಣ ಪೂರಕ ಅಂದಾಜುಗಳು ಕಡಿಮೆ ಆಗಿ ಬಜೆಟ್‌ನ್ನು ತಯಾರು ಮಾಡುವಂತಹ ಕಾಲದಲ್ಲಿಯೇ ಯಾವ್ಯಾವುದಕ್ಕೆ ಏನೇನು ಅಗತ್ಯ ಇದೆ ಎನ್ನುವುದನ್ನು ಸೇರಿಸಿ ಇದಕ್ಕೆ ಹೆಚ್ಚು ಗಮನವನ್ನು

ಕೊಡಬೇಕೆಂದು ಹೇಳಿ ಮಾನ್ಯ ಮಾಧುಸ್ವಾಮಿ ಯವರು ಹಾಗೂ ಇತರ ಸದಸ್ಯರುಗಳು ಹೇಳಿದ್ದಾರೆ. ಆ ಹಿರಿಯ ಸದಸ್ಯರುಗಳು ಹೇಳಿರುವುದು ಸರಿ ಇದೆ. ಮುಂದೆ ಬರುವ ದಿವಸಗಳಲ್ಲಿ ಇದೆಲ್ಲಾ ಕೊರತೆಗಳನ್ನು ಸರಿಪಡಿಸಿಕೊಳ್ಳುವಂತಹ ಪ್ರಾಮಾಣಿಕ ಪ್ರಯತ್ನ ನಾನು ಮಾಡುತ್ತೇನೆ ಎಂದು ಹೇಳುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ : 62 ಕೋಟಿ ರೂಪಾಯಿ ಆ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಫೀ ಇಂಬರ್ಸ್‌ಮೆಂಟ್ ವಿಚಾರ ಹೇಳುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : 400 ಕೋಟಿ ರೂಪಾಯಿ ಬಡ್ಡಿಗೆ ಕೊಡುತ್ತೇವೆಂದೂ ಹೇಳಿದ್ದೇವೆ. ಹಾಸ್ಟೆಲ್‌ಗಳ ಬಗ್ಗೆ ಮಾನ್ಯ ಜ್ಞಾನೇಂದ್ರ ಅವರು ಗಮನಕ್ಕೆ ತಂದಿದ್ದಾರೆ. ಅದನ್ನು ಸರಿ ಪಡಿಸುತ್ತೇನೆ. ಅದರ ಬಗ್ಗೆ ನಾನು ನೋಡಿ ಬಿಟ್ಟು ಹೇಳುತ್ತೇನೆ. ಆ ಕಡೆಗೆ ಗಮನವನ್ನು ಕೊಡುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ : ಫೀ ಇಂಬರ್ಸ್ ಮಾಡಿ ಸಾರ್.

ಶ್ರೀ ಜೆ.ಸಿ.ಮಾಧುಸ್ವಾಮಿ : ಲಾಸ್ ಆಫ್ ಫೀ ಇನ್‌ಕಂ ತಾನೇ ಅದು. ಲಾಸ್ ಆಫ್ ಫೀ ಇನ್‌ಕಂ ಯೂನಿವರ್ಸಿಟಿಯಿಂದ ಕಾಲೇಜುಗಳಿಗೆ ಹೋಗಬೇಕಾಗಿದೆ ಅದು ಹಾಸ್ಟೆಲ್ ವಿಚಾರ ಅಲ್ಲ. ಅದರ ವಿಚಾರ ಹೇಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ (ಹಣಕಾಸು ಸಚಿವರು ಹಾಗೂ ಮಾನ್ಯ ಉಪ ಮುಖ್ಯಮಂತ್ರಿಗಳು): ಸನ್ಮಾನ್ಯ ಅಧ್ಯಕ್ಷರೆ, "ದಿನಾಂಕ 31.03.2006 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1 ರಿಂದ 28 ಇವುಗಳಿಗೆ ಸಂಬಂಧಿಸಿದಂತೆ ಸಂದಾಯವಾಗುವ ವೆಚ್ಚವನ್ನು ಬರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗೂ ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿರುವ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡಬೇಕೆಂದು ಕೋರುತ್ತೇನೆ."

ಅಧ್ಯಕ್ಷರು : 2005–06ನೇ ಸಾಲಿನ ಪೂರಕ ಅಂದಾಜುಗಳು ಮೂರನೇ ಹಾಗೂ ಅಂತಿಮ ಕಂತು) ಬೇಡಿಕೆಗಳ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ :–

"ದಿನಾಂಕ 31.03.2006ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬರುವ ಅಭಿಯಾಚನೆಗಳ ಕ್ರಮಾಂಕ 1 ರಿಂದ 28 ಇವುಗಳಿಗೆ ಸಂಬಂಧಿಸಿದಂತೆ ಸಂದಾಯ ಆಗುವ ವೆಚ್ಚವನ್ನು ಬರಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗೂ ಸೇರಿ ಬೇಡಿಕೆಗಳ ಪಟ್ಟಿಯಲ್ಲಿ ನಮೂದಿಸಿರುವ ಮೊಬಲಗಿಗೆ ಮೀರದ ಮೊತ್ತವನ್ನು ಈ ಸಭೆಯು ಮಂಜೂರು ಮಾಡುವುದು.

ಪ್ರಸ್ತಾವವನ್ನು ಅಂಗೀಕರಿಸಲಾಯಿತು.

ಆ) ಕರ್ನಾಟಕ ಧನ ವಿನಿಯೋಗ (ಸಂಖ್ಯೆ) 2 ವಿಧೇಯಕ 2006

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು) : ಮಾನ್ಯ ಅಧ್ಯಕ್ಷರೆ, 2006ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ2) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.